ಕವಿ ಚಕ್ರವರ್ತಿ ಕಾಳಿದಾಸಕೃತಿ

ಮೇಘಸಂದೇಶ ಮಹಾಕಾವ್ಯ

ಅನುವಾದಕರು :

ಅಧ್ಯಾತ್ಮವಿದ್ಯಾಪ್ರವೀಣ

ಬುರುಗನಹಳ್ಳಿ ಭೀಮಸೇನಶರ್ಮಾ, ಎಂ.ಎಸ್‌ಸಿ.

(B. BHEEMASENA RAO)

ವ್ಯವಸಾಯ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು

ಪ್ರಕಾಶಕರು :

ಎಸ್. ಸುಬ್ರಹ್ಮಣ್ಯ ಅಯ್ಯರ್

ಜಯನಗರ, ಬೆಂಗಳೂರು.

MEGHASANDESHA MAHAAKAAYA
Translated by Buraganahalli Bheemasenasharma, M.Sc.,
Retd. Professor of Agricultural Chemistry and State Agricultural Chemist, Bangalore.
Pages 111+IV. Copies 2,000

First Edition: 1986

Books available at
B. Bheemasena Rao. M.Sc.,
No. 2, 9th Cross, N. R. Colony,
Bangalore-560 019.

Rs. 6-00

Printed at
Sri Venkateshwara Printers,
No. 10, Appayanna lane, Dodda Mavalli,
Sushila Road Cross, BANGALORE-560 004.

ಬಿನ್ನಹ

ಭರತಖಂಡದಲ್ಲಿ ಜನ್ಮತಾಳಿದ ಕವಿಶ್ರೇಷ್ಠರ ಶ್ರೇಣಿಯಲ್ಲಿ ಅಗ್ರಗಣ್ಯನೆಂದು ಹೆಸರುಗೊಂಡು 'ಕವಿ ಸಾರ್ವಭೌಮ'ನೆಂಬ ಕೀರ್ತಿಯನ್ನು ಗಳಿಸಿದವನೆಂದರೆ ಕಾಳಿದಾಸನೇ ಹೌದು. ಹೀಗೆಂಬುದು ವಿಮರ್ಶಕರ ದೃಢವಾದ ಅಭಿಪ್ರಾಯ. ಶಾಕುಂತಲ, ವಿಕ್ರಮೋರ್ವಶೀಯ ಮತ್ತು ಮಾಳವಿಕಾಗ್ನಿಮಿತ್ರ ಎಂಬ ಮೂರು ಪ್ರಸಿದ್ಧವಾದ ನಾಟಕಗಳನ್ನು ರಚಿಸಿದುದು ಮಾತ್ರವಲ್ಲದೆ ಅತ್ಯಂತ ಶ್ರೇಷ್ಠವೆನಿಸಿದ ರಘುವಂಶ, ಕುಮಾರಸಂಭವ ಮತ್ತು ಮೇಘಸಂದೇಶ ಎಂಬ ಶಿರೋನಾಮೆಗಳನ್ನುಳ್ಳ ಮೂರು ಮಹಾಕಾವ್ಯಗಳೂ ಕೂಡ ಆ ಮಹಾಕವಿಯಿಂದಲೇ ನಿರ್ಮಿತವಾದವು. ಅವುಗಳಲ್ಲಿ 'ಮೇಘಸಂದೇಶ'ವನ್ನು ವಿಮರ್ಶಕರು ಖಂಡಕಾವ್ಯವೆಂದು ಗಣಿಸಿದ್ದರೂಕೂಡ ಇದು ಇತರ ಕಾವ್ಯಕರ್ತೃಗಳಿಗೂ ಪ್ರತಿಭೆಯನ್ನು ಮೂಡಿಸಲುಳ್ಳದಾಗಿ 'ಕಾವ್ಯಕಲ್ಪದ್ರುಮ' ವೆಂಬ ಅನ್ವರ್ಥನಾಮವನ್ನು ಗಳಿಸಿದೆ. ಇದರಲ್ಲಿ ಕವಿಯು ಊಹಾ ಪ್ರಪಂಚದ ಮೇರುಶಿಖರದಲ್ಲಿ ಮೆರೆಯುತ್ತಿದ್ದಾನೆ. ಇಂತಹ ಉದ್ದಾಮವೆನಿಸಿದ ಕಿರುಕಾವ್ಯವನ್ನು ವಿವಿಧಭಾಷೆಗಳಲ್ಲಿ ಅನುವಾದಿಸಲು ಪ್ರಯತ್ನಗಳು ನಡೆದಿವೆ. ರೈಡರ್ ವಿಲಿಯಂಸನ್ ಮೊದಲಾದ ಆಂಗ್ಲ ಕವಿಗಳು ಇದನ್ನು ಭಾಷಾಂತರಿಸಿದುದು ಮಾತ್ರವಲ್ಲದೆ, ತೆಲುಗು, ಬಂಗಾಳಿ, ಮಹಾರಾಷ್ಟ್ರ, ಗುಜರಾತಿ ಹಾಗೂ ಕನ್ನಡವೇ ಮೊದಲಾದ ದೇಶೀಯ ಭಾಷೆಗಳಲ್ಲಿಯೂ ಕೂಡ ಈ ಕಾವ್ಯದ ಅನುವಾದಗಳು ಹೊರಬಿದ್ದಿವೆ. ಆದರೂ ಕೂಡ 'ಅನುವಾದಕರು ಕೊಲೆಪಾತಕರು' (Translators are murderers) ಎಂಬ ಅನುಭವ ಸಿದ್ಧವಾದ ನಾಣ್ನುಡಿಯಂತೆ ಕವಿಯ ಮೇರುಕೃತಿಯ ಮಟ್ಟಕ್ಕೆ ಏರಲಾಗದು ಎಂಬುದು ಕಂಡುಬರುತ್ತದೆ. ಇದೇ ವಿಷಯವನ್ನು ಅನುವಾದಕನು ಈ ಗ್ರಂಥಕ್ಕೆ ಅಳವಡಿಸಿರುವ ಪೀಠಿಕಾ ಪ್ರಕರಣದಲ್ಲಿ ಒತ್ತಿ ಹೇಳಿರುತ್ತಾನೆ. ಮೊತ್ತಕ್ಕೆ ಅನುವಾದಕನ ಪಾತ್ರ ಅತಿ ಕ್ಲಿಷ್ಟಕರವಾದುದು. ಮೂಲದಲ್ಲಿ ವಿಶದಪಡಿಸಿರುವ ಅಭಿಪ್ರಾಯವೆಲ್ಲವನ್ನು ಅನುವಾದದಲ್ಲಿ ತರುವುದು

ಮಾತ್ರವಲ್ಲದೆ ಹೊಸ ವಿಷಯವನ್ನು ಅದರಲ್ಲಿ ಸೇರಿಸಬಾರದು. ಅಲ್ಲದೆ ಮೂಲದಿಂದ ಕಲ್ಪಿತವಾದ ಚಿತ್ರವೇ ಓದುಗನಲ್ಲಿ ಅನುವಾದದ ಪಠಣದಿಂದ ಮೂಡಿಸಬೇಕಾಗುತ್ತದೆ. ಇದು ಶ್ರಮಸಾಧ್ಯವಾದುದರಿಂದ ಅನುವಾದವು ಮೂಲಕೃತಿಗೆ ಸಮನಾಗಿಸುವುದು ಅತಿಕಷ್ಟ. ಅನುವಾದಕನಿಗೆ ಇದರ ಅರಿವು ಇದ್ದರೂ ಆ ಮಹಾಕಾವ್ಯವನ್ನು ಕನ್ನಡಿಸಬೇಕೆಂಬ ಹೆಬ್ಬಯಕೆಗೆ ಒಳಗಾಗಿ ಅದಕ್ಕಾಗಿ ಕೈ ಹಚ್ಚಿರುತ್ತಾನೆ. ಅನುವಾದವನ್ನು ಪ್ರಕಟಿಸುವ ಮುನ್ನ ಈ ಗ್ರಂಥಕ್ಕೆ ಪೀಠಿಕಾರೂಪವಾದ ಮುನ್ನುಡಿಯನ್ನು ಸಿದ್ಧಪಡಿಸಿ ಅದನ್ನು ಆದೇತಾನೆ ಪ್ರಕಟಣೆಗೆ ತೊಡಗಿದ್ದ 'ಪಾರಿಜಾತ ಕುಸುಮ' ಎಂಬ ಮಾಸಪತ್ರಿಕೆಯ 1975ನೇ ಇಸವಿ ಫೆಬ್ರುವರಿ ತಿಂಗಳ ಸಂಚಿಕೆಯಲ್ಲಿ ಆ ಪತ್ರಿಕೆಯ ಸಂಪಾದಕರಾದ 'ಶ್ರೀಮಾನ್ ನಾಗರಾಜ್' ಎಂಬುವರು ಪ್ರಕಟಿಸಲಾರಂಭಿಸಿ ಆ ಮುಂದಿನ ಆರು ಸಂಚಿಕೆಗಳಲ್ಲಿ ಅನುವಾದಲೇಖನಗಳನ್ನು ಹೊರತಂದು ಗ್ರಂಥವನ್ನು ಪೂರೈಸಿದರು.

ಅನುವಾದಕನು ತನ್ನ ಅನುವಾದದಲ್ಲಿನ ಕೂರತೆಯನ್ನು ಮನಗಂಡಿದ್ದರೂ ಕೂಡ ಈ ವಿಷಯದಲ್ಲಿ ತಜ್ಞರ ಅಭಿಪ್ರಾಯವನ್ನು ತಿಳಿಯುವ ಉದ್ದೇಶದಿಂದ ಸಂಸ್ಕೃತ, ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿರುವ ಡಾಕ್ಟರ್ ಅನಂತರಂಗಾಚಾರ್ಯ M.A, Phd. ಎಂಬ ಮಾನ್ಯರನ್ನು ಸಂದರ್ಶಿಸಿ ಅವರ ಸಮ್ಮತಿಯನ್ನು ಪಡೆದು ಅದುವರೆಗೆ ಪ್ರಕಟಿತವಾದ ಪೀಠಿಕಾ ಪ್ರಕರಣಕ್ಕೆ ಸಂಬಂಧಿಸಿದ ತನ್ನ ಲೇಖನಗಳನ್ನು ಪಠಿಸಿದ ಪರಿಣಾಮವಾಗಿ ಆ ವಿದ್ವಾಂಸರ ಉತ್ತೇಜನವು ಇದರ ವಿಷಯದಲ್ಲಿ ದೊರೆತದ್ದರಿಂದ ಪ್ರಕಟಣಾಕಾರ್ಯ ಮುಂದುವರಿಯಿತು.

ಇಷ್ಟಾದರೂ ಈ ಲೇಖನಗಳನ್ನು ಒಟ್ಟುಗೂಡಿಸಿ ಗ್ರಂಥರೂಪವಾಗಿ ಹೊರತರಲು ಆರ್ಥಿಕ ಮುಗ್ಗಟ್ಟಿನಿಂದ ಸಾಧ್ಯವಾಗಲಿಲ್ಲ. ಮಾಸಪತ್ರಿಕೆಯ ಸಂಚಿಕೆಗಳಲ್ಲಿ ಪ್ರಕಟಣೆ ಹೊಂದಿ ಹನ್ನೊಂದು ವರ್ಷಗಳು ಕಳೆದರೂ ಕೂಡ ಅದನ್ನು ಗ್ರಂಥರೂಪದಿಂದ ಹೊರತರಲಾಗಲಿಲ್ಲವೆಂಬ ವಿಷಯವನ್ನು ಅನುವಾದಕನು ತನ್ನ ಪ್ರಿಯಮಿತ್ರರಾದ ಮಾನ್ಯ **ಶ್ರೀ ಯಸ್. ಸುಬ್ರಹ್ಮಣ್ಯ ಅಯ್ಯರ್** ರವರೊಡನೆ ಪ್ರಸ್ತಾಪಿಸಲು ಆ ಮಹಾನುಭಾವರು ಮುದ್ರಿತವಾದ ಲೇಖನಗಳನ್ನು ಪರಿಶೀಲಿಸಿ ಈ ಗ್ರಂಥವನ್ನು ಹೊರತರಲೇಬೇಕೆಂದು ನಿರ್ಧರಿಸಿ

ಅದಕ್ಕೆ ಬೇಕಾದ ಆರ್ಥಿಕನೆರವನ್ನು ಒದಗಿಸಿ ಗ್ರಂಥದ ಪ್ರಕಟಣಾಕಾರ್ಯಕ್ಕೆ ನೆರವಾದರು. ಇದಕ್ಕಾಗಿ ಈ ಅನುವಾದಕನು ಆ ಮಾನ್ಯರಿಗೆ ಚಿರಋಣಿ ಯೆಂಬುದನ್ನು ಈ ಮೂಲಕ ತಿಳಿಯಪಡಿಸುತ್ತಾನೆ. ಈ ಗ್ರಂಥದ ಪ್ರಕಟಣೆಗೆ ಆರ್ಥಿಕ ನೆರವಿತ್ತ ಬಗೆಯಲ್ಲಿಯೇ, ಈ ಅನುವಾದಕನಿಂದ ಅನುವಾದ ಗೊಂಡ ಇತರ ಗ್ರಂಥಗಳ ಪ್ರಕಟಣೆಗೂ ಈ ಮಹನೀಯರು ತಮ್ಮ ಅಮೂಲ್ಯವಾದ ಆರ್ಥಿಕ ನೆರವಿತ್ತಿರುವರೆಂಬುದನ್ನು ಬಿನ್ನವಿಸುವುದಕ್ಕೆ ಅನುವಾದಕನು ಹೆಮ್ಮೆಪಡುತ್ತಾನೆ. ಆಸ್ತಿಕ ಮಹಾಶಯರೆನಿಸಿದ ಶ್ರೀಮಾನ್ ಅಯ್ಯರ್‌ರವರು ಅನೇಕ ಗ್ರಂಥಗಳನ್ನು ಆಂಗ್ಲೇಯ ಭಾಷೆಯಲ್ಲಿ ಪ್ರಕಟಿಸಿ ಭರತಖಂಡದಲ್ಲಿ ಮಾತ್ರವಲ್ಲದೆ ಇತರ ದೇಶಗಳಲ್ಲಿನ ವಿದ್ವಾಂಸರ ಗೌರವಕ್ಕೆ ಪಾತ್ರರಾಗಿರುತ್ತಾರೆ.

ಈ ಗ್ರಂಥವು ಮುದ್ರಣವಾಗುವ ಕಾಲದಲ್ಲಿ ಅನುವಾದಕನು ತನ್ನ ನೇತ್ರಗಳನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಿದ್ದರಿಂದ ಮುದ್ರಣದ ಕರಡುಪ್ರತಿ ಗಳನ್ನು ಸ್ವತಃ ತಿದ್ದುವುದಕ್ಕೆ ಸಾಧ್ಯವಿರಲಿಲ್ಲವಾಗಿ ಮುದ್ರಣಕಾರರ ನೆರವನ್ನೇ ಪಡೆಯಬೇಕಾಗಿ ಬಂತು ಈ ಕಿರುಹೊತ್ತಿಗೆಯನ್ನು ಆಸಕ್ತಿ ವಹಿಸಿ ಮುದ್ರಣ ಕಾರ್ಯವನ್ನು ನೆರವೇರಿಸಿಕೊಟ್ಟ ಶ್ರೀ ವೆಂಕಟೇಶ್ವರ ಮುದ್ರಣಾಲಯದ ಮಾಲೀಕರಾದ ಶ್ರೀಮಾನ್ ಕೆ. ವಿ. ಸತ್ಯನಾರಾಯಣರವರಿಗೆ ವಂದನೆಗಳು.

30-9-86
ಬೆಂಗಳೂರು

ಬುರುಗನಹಳ್ಳಿ ಭೀಮಸೇನಶರ್ಮಾ
(B. Bhimasena Rao)
ಅನುವಾದಕ



1984ನೇ ಜನವರಿಯಲ್ಲಿ ನಡೆದ ಪರ್ಯಾಯಮಹೋತ್ಸವದ ಸಮಯದಲ್ಲಿ ಉಡುಪಿ ಪೇಜಾವರ ಮಠಾಧೀಶರಾದ ಪೂಜ್ಯ ವಿಶ್ವೇಶ್ವರ ಶ್ರೀಯವರು 'ಅಧ್ಯಾತ್ಮ ವಿದ್ಯಾ ಪ್ರವೀಣ' ಎಂಬ ಗೌರವ ಪ್ರಶಸ್ತಿಯನ್ನು ಈ ಗ್ರಂಥ ಕರ್ತನಿಗೆ ಅನುಗ್ರಹಿಸಿದ ದಿನದಂದು ತೆಗೆದ ಭಾವಚಿತ್ರ.

ಮೇಘ ಸಂದೇಶ

ಕನ್ನಡಾನುವಾದ

(ಭಾಮಿನೀ ಷಟ್ಪದಿಯಲ್ಲಿ)

ವಿಮರ್ಶಾತ್ಮಕವಾದ ಪೀಠಿಕೆ

ಭಾಗ–೧

'ಮೇಘಸಂದೇಶ' ಅಥವಾ 'ಮೇಘದೂತ' ವೆಂದು ಹೆಸರುಗೊಂಡ ಅತಿ ಚಿಕ್ಕಕೃತಿರತ್ನವು ಕವಿಕುಲಸಾರ್ವಭೌಮನೆಂದು ಖ್ಯಾತಿಗಳಿಸಿರುವ, ಕಾಲ-ದೇಶಗಳ ಗಡಿಯನ್ನು ಮೀರಿ ಕಾವ್ಯಪ್ರಪಂಚವು ಈ ಭೂಭಾಗದಲ್ಲಿ ನೆಲೆಸಿರುವವರೆಗೂ ತನ್ನಜೀವಿತವನ್ನು ಹಿಗ್ಗಿಸಿಕೊಂಡಿರುವ 'ರವಿ ಕಾಣದುದನ್ನು ಕವಿ ಕಾಣುವ' ನೆಂಬ ನಾಣ್ಣುಡಿಯ ಸತ್ಯಾಂಶವನ್ನು ತನ್ನ ಕಾವ್ಯ ಪ್ರತಿಭೆಯಿಂದ ಸ್ಥಿರಗೊಳಿಸಿರುವ, ಅಲ್ಲದೆ ತನ್ನ ಕಾವ್ಯಗಳ ತನಿರಸದ ಸವಿಗೊಂಡ ಜಗತ್ತಿನ ಮೇಧಾವಿಗಳನ್ನು ಮೆಚ್ಚಿಗೆಯಿಂದ ತಲೆದೂಗಿಸಿರುವ **ಮಹಾಕವಿ ಕಾಳಿದಾಸನ** ಸ್ಫೂರ್ತಿಯಿಂದ ಇಳಿದುಬಂದುದು. ಪೂರ್ವ ಮತ್ತು ಉತ್ತರಮೇಘಗಳೆಂಬ ಎರಡು ಭಾಗಗಳೂ ಸೇರಿ ಕೇವಲ ನೂರಿಪ್ಪತ್ತನಾಲ್ಕು ಶ್ಲೋಕಗಳನ್ನೊಳಗೊಂಡ ಈ ಸಣ್ಣ ಕೃತಿಯನ್ನು 'ಖಂಡಕಾವ್ಯ'ವೆಂದು ಕೆಲವರು ಗಣಿಸಿದರೂ ಕೂಡ ಮಹಾಕಾವ್ಯ-ಕರ್ತೃಗಳಿಗೂ ಸ್ಫೂರ್ತಿದಾಯಕವೆಂದೆನಿಸಿ, **'ಕಾವ್ಯಕಲ್ಪದ್ರುಮ'** ಎಂಬ ಕೀರ್ತಿಯನ್ನು ಇದು ಪಡೆದಿದೆ. ಇದರಲ್ಲಿ ಕವಿಯು ಅತ್ಯುನ್ನತವಾದ ತನ್ನ ಊಹಾಪ್ರಪಂಚದಲ್ಲಿ ಮೆರೆಯುತ್ತಿರುವುದನ್ನು ಕಾಣಬಹುದು. ವಲ್ಲಭದೇವ, ಭಟ್ಟ ಹೇಮಾದ್ರಿ, ದಿನಕರಮಿಶ್ರ, ಚಾರಿತ್ರವರ್ಧನ, ಸುಮತಿವಿಜಯ, ದಕ್ಷಿಣಾವರ್ತ, ಮಹಾಮಹೋಪಾಧ್ಯಾಯ ಕೋಲಾಚಲ ಮಲ್ಲಿನಾಥ ಇವರೇ ಮೊದಲಾದ ಸುಮಾರು ಮೂವತ್ತೇಳು ವ್ಯಾಖ್ಯಾನಕಾರರು ತಮ್ಮ ಅಮೋಘವಾದ ವ್ಯಾಖ್ಯಾನಗಳನ್ನು ಈ ಕೃತಿರತ್ನಕ್ಕೆ ಅಳವಡಿಸಿರುತ್ತಾರೆಂದಮೇಲೆ ಈ ಕಾವ್ಯದ ಮಹಿಮೆಯೆಂಥದೆಂಬುದನ್ನು ವಾಚಕರೇ ಊಹಿಸಬಹುದು.

ಮೇಲೆ ವಿವರಿಸಿದ ವ್ಯಾಖ್ಯಾನಗಳಲ್ಲಿ ಮಲ್ಲಿನಾಥನದು ಅತಿಸರಳ ಮತ್ತು ಅತಿಶ್ರೇಷ್ಠವೆಂಬುದು ತಜ್ಞರ ಅಭಿಪ್ರಾಯ. ಏಕೆಂದರೆ ಕವಿಗರ್ಭವನ್ನರಿತು ಅದನ್ನು ಹೊರದೋರಿರುವರಲ್ಲಿ ಅತಿಚತುರನೆಂದರೆ ಮಲ್ಲಿನಾಥನೇ ಹೌದು. ಈತನು ಕವಿಕೃತವಾದ ರಘುವಂಶ, ಕುಮಾರಸಂಭವ ಮತ್ತು ಮೇಘದೂತವೆಂಬ ಕಾವ್ಯತ್ರಯಗಳಿಗೆ ತನ್ನ ಅಪ್ರತಿಮವಾದ ವ್ಯಾಖ್ಯಾನಗಳನ್ನು ಅಳವಡಿಸಿ, ಆ ವ್ಯಾಖ್ಯಾನಗಳ ಅವತರಣಿಕೆಯಲ್ಲಿ ಈ ಕವಿಯನ್ನು ಮನಮೆಚ್ಚಿ ಪ್ರಶಂಸಿಸುವಂದು, ಈ ಕವಿಯನ್ನು ಹೀಗೆ ಬಣ್ಣಿಸಿರುತ್ತಾನೆ:-

ಶ್ಲೋ॥ ಕಾಳಿದಾಸಗಿರಾಂ ಸಾರಂ ‡ ಕಾಳಿದಾಸಃ, ಸರಸ್ವತೀ ।
ಚತುರ್ಮುಖೋಽಥವಾ ಸಾಕ್ಷಾತ್ ‡ ವಿದು ರ್ನಾನ್ಯೇ ತು ಮಾದೃಶಾಃ॥
ಮಲ್ಲಿನಾಥಕವಿ ಸೋಽಯಂ ‡ ಮಂದಾತ್ಮಾನುಜಿಘೃಕ್ಷಯಾ ।
ವ್ಯಾಚಷ್ಟೇ ಕಾಳಿದಾಸೀಯಂ ‡ ಕಾವ್ಯತ್ರಯ ಮನಾಕುಲಂ ॥

ಅಂದರೆ "ಕಾಳಿದಾಸನ ವಚನಗಳ ಸಾರವನ್ನು ಕಾಳಿದಾಸ, ಅವನಿಗೊಲಿದ ಸರಸ್ವತೀದೇವಿ ಮತ್ತು ಆ ದೇವಿಯ ಕೈಹಿಡಿದ ಚತುರ್ಮುಖಬ್ರಹ್ಮ ಇವರು ಮಾತ್ರ ತಿಳಿಯಲು ಸಾಧ್ಯವೆಂದಮೇಲೆ ನನ್ನಂಥವರಿಗೆ ಅದನ್ನು ಪೂರ್ಣವಾಗಿ ತಿಳಿಯಲಸಾಧ್ಯವೇ ಸರಿ. ಆದರೂ ಕೂಡ, 'ಕವಿ' ಯೆಂದು ಹೆಸರುಗಳಿಸಿದ ಈ ಮಲ್ಲಿನಾಥನೆಂಬ ನಾನು. ಕವಿಯ ಕಾವ್ಯಗಳ ಸೊಬಗನ್ನು ಪೂರ್ಣವಾಗಿ ತಿಳಿಸಲೆಳಸಿ ತಿಳಿಗೇಡಿತನದಿಂದ ಅವುಗಳಲ್ಲಿ ಮೂರಕ್ಕೆ ಮಾತ್ರ ವಾಖ್ಯಾನಗಳನ್ನಳವಡಿಸಲು ಕೈಹಚ್ಚಿದ್ದೇನೆ" ಎಂದು ನುಡಿದಿದ್ದಾನೆ. ಮುಂದುವರೆದು ಮಲ್ಲಿನಾಥನು, ಕಾಳಿದಾಸನ ಕಾವ್ಯಗಳಿಗೆ ಅನೇಕ ವ್ಯಾಖ್ಯಾನಗಳಿದ್ದರೂ ತಾನು ಈ ಸಾಹಸಕ್ಕೆ ತೊಡಗಿರುವ ಉದ್ದೇಶವನ್ನು ಕುರಿತು ಹೀಗೆ ತಿಳಿಸಿದ್ದಾನೆ:-

ಶ್ಲೋ॥ ಭಾರತೀ ಕಾಳಿದಾಸಸ್ಯ ‡ ದುರ್ವ್ಯಾಖ್ಯಾವಿಷಮೂರ್ಛಿತಾ ।
ಏಷಾ ಸಂಜೀವಿನೀ ಟೀಕಾ ‡ ತಾ ಮದ್ಯೋಜ್ಜೀವಯಿಷ್ಯತಿ ॥

ಅಂದರೆ "ಕಾಳಿದಾಸನ ಕಾವ್ಯಭಾಷೆಯು, ಕವಿಯ ಆಶಯವನ್ನರಿಯದೆ ಅಸಂಗತ ವ್ಯಾಖ್ಯಾನಗಳೆಂಬ ವಿಷದಿಂದ ಮೂರ್ಛೆಗೊಂಡಿದೆಯಾಗಿ ನನ್ನ ಈ

'ಸಂಜೀವಿನೀ' ಎಂಬ ಟೀಕೆಯು ಆ ಕವಿವರನ ವಚನಸಾರವನ್ನು ಮರವೆಯಿಂದ ಎಚ್ಚರಿಸುವುದು." ಎಂದು ನಂಬಿದ್ದೇನೆ ಹೀಗೆಂದು ಹೇಳಿರುತ್ತಾನೆ. ಈ ಕಾವ್ಯಗಳಲ್ಲಿ ಮೇಘದೂತಕ್ಕೆ ತನ್ನ ಅಪ್ರತಿಮವಾದ ವ್ಯಾಖ್ಯಾನವನ್ನಳವಡಿಸಲು ಮಲ್ಲಿನಾಥನು ಅನೇಕ ಆಧಾರಗ್ರಂಥಗಳ ಅವಲೋಕನಕ್ಕಾಗಿ ಬಹುದಿನ ಬಹುಕಷ್ಟಪಟ್ಟಿದ್ದಾನೆಂಬುದನ್ನು ಸೂಚಿಸುವ ಈ ಮುಂದಿನ ಪ್ರಸಂಗವು ಪರಂಪರೆಯಾಗಿ ಇಳಿದುಬಂದಿದೆ. ಮಾಘಕಾವ್ಯ, ಮೇಘದೂತ ಇವೇ ಮೊದಲಾದ ಕಾವ್ಯಗಳಿಗೆ ವ್ಯಾಖ್ಯಾನಗಳನ್ನು ಬರೆದು ಮುಗಿಸಿದ ಮಲ್ಲಿ-ನಾಥನ ಬಳಿಗೆ ಶ್ರೀಹರ್ಷ ಮಹಾಕವಿಯ ನೈಷಧೀಯ ಚರಿತ್ರೆಗೆ ವ್ಯಾಖ್ಯಾನವನ್ನು ಅಳವಡಿಸಬೇಕೆಂದು ಕೇಳಿಕೆ ಬರಲು ಆತನು, 'ಮಾಘೇ ಮೇಘೇ ಗತಂವಯಃ' ಅಂದರೆ ಮಾಘಕವಿಯ "ಶಿಶುಪಾಲವಧೆ"ಯೆಂಬ ಇಪ್ಪತ್ತು ಸರ್ಗಗಳುಳ್ಳ ಬಹು ದೊಡ್ಡ ಕಾವ್ಯಕ್ಕೂ "ಮೇಘದೂತ" ವೆಂಬ ಅತಿ ಚಿಕ್ಕ ಕಾವ್ಯಕ್ಕೂ ವ್ಯಾಖ್ಯಾನಗಳನ್ನೊದಗಿಸುವ ಪ್ರಯತ್ನದಲ್ಲಿ ನನ್ನ ಜೀವಿತವೆಲ್ಲವೂ ಕಳೆದಿದೆಯಾಗಿ ಮತ್ತಾವುದಕ್ಕೂ ಅವಕಾಶವಿಲ್ಲ ಎಂದು ಹೇಳಿದನೆಂದಮೇಲೆ ಮೇಘದೂತ ಕಾವ್ಯದ ಮಹಿಮೆಯು ಎಂತಹ ಮೇಲ್ಮಟ್ಟದ್ದು ಎಂಬರಿವು ಇದರಿಂದುಂಟಾಗುತ್ತದೆ.

ಕಾವ್ಯದ ಮಹಿಮೆ

ತಜ್ಞರ ಅಭಿಪ್ರಾಯದಲ್ಲಿ "ಮೇಘಸಂದೇಶ"ವು ಮಹಾಕಾವ್ಯವೆಂಬುದರಲ್ಲಿ ಒಮ್ಮತವಿದೆ. ಇದಕ್ಕೆ ಪುಷ್ಟಿಕೊಡುವ ಮಹಾಕಾವ್ಯಲಕ್ಷಣಗಳೆಲ್ಲವೂ ಈ ಸಣ್ಣ ಆದರೂ ಅತಿಶ್ರೇಷ್ಠವಾದ ಕಾವ್ಯದಲ್ಲಡಗಿವೆ. ಪರ್ವತ, ನದಿ, ದುರ್ಗ, ದೇಶ, ಪಟ್ಟಣ, ಜನಪದ, ಕ್ಷೇತ್ರ, ಭವನ, ಮಂದಿರ, ದೇವತೆಗಳು, ನವರಸಗಳು, ವಿವಿಧಾಲಂಕಾರಗಳು, ಲೋಕೋಕ್ತಿಗಳು, ನೀತಿರತ್ನಗಳು ಇವೇ ಮೊದಲಾದ ವಿಷಯಗಳ ವರ್ಣನೆಗಳೆಲ್ಲವೂ ಇದರಲ್ಲಿ ತುಂಬಿವೆ. ಅಲ್ಲದೆ ಈ ಕಾವ್ಯದ ವಿಷಯವು ವರ್ಷರ್ತುವಿಗೆ ಸೀಮಿತವಾಗಿರುವುದರಿಂದ ಆ ಋತು ಸಂಬಂಧದ ಮೃಗಪಕ್ಷಿಗಳು, ಹೂ ಹಣ್ಣುಗಳು, ಗಿಡಮರಬಳ್ಳಿಗಳು, ಪಚ್ಚೆಪೈರುಗಳು, ಪೌರಜಾನಪದ ಸ್ತ್ರೀಯರ ಸ್ವಾಭಾವಿಕ ಲೀಲೆಗಳು, ಶೃಂಗಾರಚೇಷ್ಟೆಗಳು, ವೈಜ್ಞಾನಿಕ ಸತ್ಯಾಂಶಗಳು, ನಿಮಿತ್ತ ಮತ್ತು ಶಕುನ

ಶಾಸ್ತ್ರಗಳು, ನೃತ್ಯಸಂಗೀತಾದಿ ಕಲೆಗಳು, ಪುರಾಣಪ್ರಸಿದ್ಧವಾದ ಬಗೆಬಗೆಯಾದ ಆಖ್ಯಾನಗಳು, ಅವತಾರಪುರುಷರ ಪ್ರಸಂಗಗಳು. ವಿವಿಧದೇವತೆಗಳಿಗೆ ಸಲ್ಲಿಸಲುಳ್ಳ ಸೇವಾಕ್ರಮಗಳು, ಇವೇ ಮೊದಲಾದ ವಿಷಯಗಳ ವರ್ಣನೆಗಳನ್ನು ಒಳಗೊಂಡು ಈ ಕೃತಿಯು ತನ್ನಮಹಿಮೆಯನ್ನು ಹೆಚ್ಚಿಸಿಕೊಂಡಿದೆ. ಇವೆಲ್ಲಕ್ಕಿಂತಲೂ ಹೆಚ್ಚಿನದೆಂದರೆ ಕವಿಯು ಅಚೇತನವಾದ ವಸ್ತುಗಳಲ್ಲಿ ಚೈತನ್ಯವನ್ನು ಮೂಡಿಸಿರುವುದು ಮಾತ್ರವಲ್ಲದೆ ಮಾನವರ ಅಂತಃಕರಣಗಳನ್ನೇ ಅವಕ್ಕಳವಡಿಸಿ ತಕ್ಕ ಬಾಹ್ಯಚೇಷ್ಟೆಗಳನ್ನೂ ಅವುಗಳಿಂದ ಹೊರದೋರಿಸಿರುತ್ತಾನೆ. ಉದಹರಿಸಬೇಕೆಂದರೆ ಮೇಘ ಪರ್ವತಗಳನ್ನು ಪುರುಷಶ್ರೇಷ್ಠರ ವರ್ಗಕ್ಕೆ ಸೇರಿಸಿ ಅವುಗಳ ಸ್ನೇಹ ವ್ಯಕ್ತಿತ್ವವನ್ನೂ, ನದಿಗಳಿಗೆ ಸ್ತ್ರೀಸ್ವಭಾವವನ್ನೂ ಅಳವಡಿಸಿ ಪತಿಯನ್ನವಲಂಬಿಸಿರುವ ಸತಿಗಳಂತೆ ಮೇಘನದಿಗಳಿಗಿರುವ ದಾಂಪತ್ಯಪ್ರೇಮದ ಬಗೆಯನ್ನೂ, ಎಂದಿಗೂ ಎಡೆಬಿಡದ ಮೋಡ ಮಿಂಚುಗಳ ಕಳತ್ರಭಾವವನ್ನೂ, ಕಾರ್ಮುಗಿಲು ನವಿಲುಗಳ ಗೆಳೆತನದ ರೀತಿಯನ್ನೂ, ಅಲ್ಲದೆ ಅಂತಹ ಕಾರ್ಮುಗಿಲಿಗೂ ಚಾತಕ ಮತ್ತು ಬೆಳ್ವಕ್ಕಿಗಳಿಗೂ ಇರುವ ನಿಕಟಸಂಬಂಧದ ಪರಿಯನ್ನೂ ಮನಮುಟ್ಟುವಂತೆ ಚಿತ್ರಿಸಿರುವ ಹಲವಾರು ಪ್ರಸಂಗಗಳಿಗೆ ಈ ಸಣ್ಣ ಕಾವ್ಯರತ್ನವು ಎಡೆಗೊಟ್ಟಿದೆ.

ಈ ಮೇಲಿನ ಅಭಿಪ್ರಾಯಕ್ಕೆ ಪುಷ್ಟಿಕೊಡುವ ಉದಾಹರಣೆಗಳಲ್ಲಿ ಕೆಲವನ್ನು ಈ ಮುಂದೆ ಸಂಗ್ರಹಿಸಲಾಗಿದೆ. ಇವುಗಳಲ್ಲಿ ಮೊಟ್ಟಮೊದಲು ಕವಿಯು ಸಂದರ್ಭಕ್ಕನುಗುಣವಾಗಿ ಅಲ್ಲಲ್ಲಿ ಒತ್ತಿ ಹೇಳಿರುವ ಲೋಕೋಕ್ತಿಗಳ ಸರಣಿ ಈ ಮುಂದೆ ಕೊಡಲಾಗಿದೆ :-

1) ಮೇಘಾಲೋಕೇ ‡ ಭವತಿ ಸುಖಿನೋಽ ‡ ಪ್ಯನ್ಯಥಾವೃತ್ತಿ ಚೇತಃ ।
ಕಂಠಾಶ್ಲೇಷ- ‡ ಪ್ರಣಯಿನಿ ಜನೇ ‡ ಕಿಂ ಪುನಃ ದೂರಸಂಸ್ಥೇ? ||
—[ಪೂರ್ವಮೇಘ, ಶ್ಲೋ.೩]

[ಅನುವಾದ:- ನೀರದವ ಕಂಡೊಡನೆ ಮನಕೆ ವಿ-।
ಕಾರವಹುದತಿಸುಖಿಗುಮೆನೆ, ಬಹು-।
ದೂರವಿರೆ ಗಳವಪ್ಪಿ ಸುಖಿಸುವ ಜನಕೆ ಮತ್ತೇಂತು?॥

2) ಕಾಮಾರ್ತಾ ಹಿ ‡ ಪ್ರಕೃತಿಕೃಪಣಾಃ‡ ಚೇತನಾಚೇತನೇಷ ‖ [ಶ್ಲೋ ೫]
[ಅನುವಾದ:– ಚರಾಚರಗಳೊಳು ಕಾಮಾರ್ತರಿಗೆ ಮತಿ ಬರದೈ॥]

3) ಯಾಚ್ಞಾ ಮೋಘಾ‡ವರ ಮಧಿಗುಣೇ‡ನಾಧಮೇ ಲಬ್ಧಕಾಮಾ ‖
[ಶ್ಲೋ,೬]

(ಅನುವಾದ:– ಗುಣವರನೊಳೆಣಿಕೆಯ ಭಂಗ ಲೇಸಧಮನೊಳು ।
ಪಡೆವುದಕಿಂ ।‖

4) "ಆಶಾಬಂಧಃ ‡ ಕುಸುಮಸದೃಶಂ ‡ ಪ್ರಾಯಶೋ ಹ್ಯಂಗನಾನಾಂ ।
ಸದ್ಯಃಪಾತಿ ‡ ಪ್ರಣಯಿಹೃದಯಂ ‡ ವಿಪ್ರಯೋಗೇ ರುಣದ್ಧಿ" ‖
[ಶ್ಲೋ.೧೦]

[ಅನುವಾದ:– ಸತಿಗಳೊಲುಮೆಯ ಹೃದಯ ವಲರೊಲು ।
ಪತಿಗಳಗಲಿಕೆ ಗೊಡನೆ ಬೀಳ್ವ–।
ಸ್ಥಿತಿಯೊಳಿರ್ದೊಡ ಮಾಶೆಯೆನೆ ಕಟ್ಟದಕೆ ತಡೆ ತಹುದೈ‖]

5) "ನ ಕ್ಷುದ್ರೋಽಪಿ ‡ ಪ್ರಥಮಸುಕೃತಾ-‡ ಪ್ರೇಕ್ಷಯಾ ಸಂಶ್ರಯಾಯ ।
ಪ್ರಾಪ್ತೇ ಮಿತ್ರೇ ‡ ಭವತಿ ವಿಮುಖಃ ‡ ಕಿಂ ಪುನಃ ?
ಯಃ ತಥೋಚ್ಚೈಃ ‖" [ಶ್ಲೋ.೧೭]

[ಅನುವಾದ:- ಕೋರಿ ತನ್ನಾಸರೆಗೆ ಗೆಳೆಯಂ ।
ಸಾರೆ ಮೊಗದಿರುಹನೆನೆ ಮೊದಲುಪ-।
ಕಾರವಂ ನೆನೆದಲ್ಪನುಂ ಶ್ರೇಷ್ಠನೊಳು ಮತ್ತೇನು?]

6) "ರಿಕ್ತಃ ಸರ್ವೋ ‡ ಭವತಿ ಹಿ ಲಘುಃ ‡ ಪೂರ್ಣತಾ ಗೌರವಾಯ "॥
[ಶ್ಲೋ ೨೦]

[ಅನುವಾದು:– ತಿಳಿಯೆ ಹಗುರಹ ನೆಲ್ಲ ಒಡವಂ ತುಂಬೆ ಗುರುವಹನು।]

7) "ಸ್ತ್ರೀಣಾ ಮಾದ್ಯಂ ‡ ಪ್ರಣಯವಚನಂ ‡ ವಿಭ್ರಮೋ ಹಿ ಪ್ರಿಯೇಷು।"
[ಶ್ಲೋ. ೨೯]

[ಅನುವಾದ:– ತರುಣಿಯರ ಚೇಷ್ಟೆಗಳೆ ಮೊದಲೊಲವುಕ್ತಿ
ಯಿನಿಯೊರೊಳು.]

8) "ಮಂದಾಯಂತೆ ‡ ನ ಖಲು ಸುಹೃದಾಂ ‡ ಅಭ್ಯುಪೇತಾರ್ಥಕೃತ್ಯಾಃ ॥"
[ಶ್ಲೋ. ೪೨]

[ಅನುವಾದ;– ಗೆಳೆಯರತಿಹಿತಕಾಗಿ ಮೈ ತೆತ್ತಿರುವರಲಸರಲಾ !]

9) "ಜ್ಞಾತಾಸ್ವಾದೋ ‡ ವಿವೃತಜಘನಾಂ ‡ ಕೋ ವಿಹಾತುಂ ಸಮರ್ಥಃ?"
[ಶ್ಲೋ. ೪೫]

[ಅನುವಾದ:– ಗಳಿಸಿದವ ರತಿರಸವ ಜಗನಕೆ ಮಣಿಯದವ ನಾರು ?]

10) "ಆಪನ್ನಾರ್ತಿ ‡ ಪ್ರಶಮನಫಲಾಃ ‡ ಸಂಪದೋ ಹ್ಯುತ್ತಮಾನಾಂ"
[ಶ್ಲೋ. ೫೭]

[ಅನುವಾದ:– ಗೋಳನಾರ್ತರ ತೊಡೆವುದುತ್ತಮ
ರೈಸಿರಿಗೆ ಫಲವೈ]

11) ಕೇ ವಾ ನ ಸ್ಯುಃ‡ ಪರಿಭವಪದಂ ‡ ನಿಷ್ಫಲಾರಂಭಯತ್ನಾಃ?॥
[ಶ್ಲೋ. ೫೮]

[ಅನುವಾದ:– ಫಲಬರಿದಾಗೆ ಕಜ್ಜ ದೊಳರಗುತಿಹ-
ರಾರೊಂದರವಮತಿಯಂ?]

12) "ಪ್ರಾಯೇಣೈತೇ ‡ ರಮಣವಿರಹೇ-‡ ಷ್ವಂಗನಾನಾಂ ವಿನೋದಾಃ "॥
[ಉತ್ತರ ಮೇಘ, ಶ್ಲೋ. ೨೬]

[ಅನುವಾದ:– ತರುಣಿಯರಿಗೆ ವಿನೋದವಿವು ಪತಿವಿರಹ-
ದೊಳಗೃಸೆ.]

13) "ಪ್ರಾಯಃ ಸರ್ವೋ ‡ ಭವತಿ ಕರುಣಾ-‡ ವೃತ್ತಿ ರಾದ್ರಾಂತರಾತ್ಮಾ"
[ಶ್ಲೋ. ೩೨]

[ಅನುವಾದ:– ನಿಜ ಕರಗುವೆದೆಯುಂ ಪಡೆದರೆಲ್ಲರು ಕರುಣೆಯಿಂ
ವರ್ತಿಪರು ಬಹುವಾಗಿ.]

14) "ಸೌಮ್ಯ ! ಸೀಮಂತಿನೀನಾಂ ।
ಕಾಂತೋದಂತಃ ‡ ಸುಹೃದುಪನತಃ ‡ ಸಂಗಮಾತ್ ಕಿಂಚಿದೂನಃ "॥

[ಅನುವಾದ:– ಹೆಂಗಳಿಗೆ ನಿಜ ಹಿತಚಿಂತಕನು ಪತಿವಾರ್ತೆ ತರೆ
ಸಂಗಕದು ತುಸು ಕಿರಿದು]

15) "ಕುಶಲ ಮಬಲೇ ।
ಪೂರ್ವಾಭಾಷ್ಯಂ ‡ ಸುಲಭವಿಪದಾಂ ‡ ಪ್ರಾಣಿನಾ ಮೇತದೇವ"॥
[ಶ್ಲೋ.೪೦]

ಅನುವಾದ:– ಸನ್ನಿಯುಹ ಮುನ್ನುಡಿಯಿದುವೆ ಬಲುಬೇಗ
ಕೇಡಿಂಗಿಳವ ಜೀವರಿಗೆ.]

16) "ಕಸ್ಯಾತ್ಯಂತಂ ‡ ಸುಖ ಮುಪನತಂ ‡ ದುಃಖ ಮೇಕಾಂತತೋ ವಾ।
ನೀಚೈ್ರ ವಾಸ್ಯ-‡ ತ್ಯುಪರಿ ಚ ದಶಾ ‡ ಚಕ್ರನೇಮಿಕ್ರಮೇಣ ॥
[ಶ್ಲೋ.೪೯]

[ಅನುವಾದ:- ಎಂದಿಗುಂ ಸುಖವಾವ ಗಿಹುದೈ ? ।
ಪೊಂದಿಹನೆ ತಾ ದುಃಖ ಮುಂದುಂ ?।
ಮಂದಿಗಿಹುದೇರಿಳಿತಗತಿ ತಿರುಗಾಲಿ ಯಂಚಿನೊಲು]

17) "ಸ್ನೇಹಾ ನಾಹುಃ‡ ಕಿಮಪಿ ವಿರಹೇ‡ ಧ್ವಂಸಿನಃ ತೇ ಹ್ಯಭೋಗಾತ್ ।
ಇಷ್ಟೇವಸ್ತು ‡ ನ್ಯುಪಚಿತರಸಾ ‡ ಪ್ರೇಮರಾಶೀ ಭವಂತಿ ॥
[ಶ್ಲೋ. ೫೦]

[ಅನುವಾದ:– ಭಾವಬಂಧವ ನಗಲಿಕೆಯು ಹುಡಿ-।
ಗೈವುದೆಂಬರದೇಕೊ ? ಭೋಗದ-।
ಭಾವದಿಂದದು ರಸದ ಲೋಲಪಿನ ರಾಶಿಗೆಡೆಯಹುದು]

18) "ಪ್ರತ್ಯುಕ್ತಂ ಹಿ ‡ ಪ್ರಣಯಿಷು ಸತಾಂ ‡ ಈಪ್ಸಿತಾರ್ಥಕ್ರಿಯೈವ॥"
[ಶ್ಲೋ॰ ೫೪]

[ಅನುವಾದ:– ಬೇಡುವರ ಮನದೆಣಿಕೆ ಸಲಿಪ್ಪುವೆ ಸಂತರುತ್ತರವೈ]

19) "ಕೇಷಾಂ ನ ಸ್ಯಾತ್ ‡ ಅಭಿಮತಫಲಾಃ ‡ ಪ್ರಾರ್ಥನಾ
ಹ್ಯುತ್ತಮೇಷು ॥" [ಶ್ಲೋ॰ ೫೬]

[ಅನುವಾದ:– ದೊರೆಯುದಾರಿಗೆ ಮನದಭೀಷ್ಟವು
ಗುಣಿಗಳನು ಬೇಡೆ ?]

ಈ ಹಿಂದೆ ಸೂಚಿಸಿದಂತೆ ಕವಿಯು ಈ ಗ್ರಂಥವನ್ನು ಎರಡು ಭಾಗಗಳಾಗಿ ವಿಂಗಡಿಸಿ, ಮೊದಲನೆಯದಾದ ಪೂರ್ವಮೇಘದಲ್ಲಿ ಮೇಘವು ರಾಮಗಿರಿಯಿಂದಾರಂಭಿಸಿ ಕೈಲಾಸಪರ್ವತದವರೆಗೂ ಹೋಗಬಹುದಾದ ಮಾರ್ಗವನ್ನು ತಿಳಿಯಹೇಳಿ, ಕೈಲಾಸದ ಪ್ರಸ್ಥಭೂಮಿಯಲ್ಲಿ ನೆಲೆಸಿರುವ ಕುಬೇರನ ರಾಜಧಾನಿಯೆನಿಸಿದ ಅಲಕಾಪಟ್ಟಣದೊಳಗಿನ ರಮ್ಯವಾದ ಯಕ್ಷನ ಭವನದಲ್ಲಿ ನೆಲೆಸಿರುವ ಅವನ ಪ್ರೇಯಸಿಯಾದ ಯಕ್ಷಯುವತಿಗೆ ತಿಳಿಸಬೇಕಾದ ಸಂದೇಶದ ಪರಿಯನ್ನು ವಿವರಿಸಿರುತ್ತಾನೆ. ಪೂರ್ವಮೇಘದ ಹದಿಮೂರನೆ ಶ್ಲೋಕದಲ್ಲಿ ಅಂದರೆ

ಮಾರ್ಗಂ ತಾವತ್‡ ಶೃಣು ಕಥಯತಃ‡ತ್ವತ್ಪ್ರಯಾಣಾನುರೂಪಂ।
ಸಂದೇಶಂ ಮೇ‡ ತದನು ಜಲದ!‡ ಶ್ರೋಷ್ಯತಿ ಶ್ರೋತ್ರಪೇಯಂ ॥

ಎಂಬಂತೆ ಯಕ್ಷನು ಮೇಘವನ್ನು ಕುರಿತು, 'ಮೇಘರಾಜ ! ಅಲಕೆಗೆ ಹೋಗುವ ಹಾದಿಯ ಬಗೆಯನ್ನು ಮೊದಲು ತಿಳಿಯಹೇಳಿ ಆ ಬಳಿಕ ನನ್ನ ಪ್ರೇಯಸಿಗೆ ನೀನು ತಿಳಿಸಬೇಕಾದ ಸಂದೇಶವನ್ನು ವಿವರಿಸುತ್ತೇನೆ' ಎಂದು ಕವಿಯು ಯಕ್ಷನ ಬಾಯಿಂದ ಹೇಳಿಸಿರುತ್ತಾನೆ. ಮಾರ್ಗವನ್ನು ನಿರೂಪಿಸುತ್ತ ಮೇಘಕ್ಕನುಗುಣವಾದ ಹಾದಿಯಲ್ಲಿ ಸಿಕ್ಕುವ ಬೆಟ್ಟಗಳೆಂದರೆ ರಾಮಗಿರಿ ಅಥವಾ ಚಿತ್ರಕೂಟ, ಅದಾದ ಮೇಲೆ ಆಮ್ರಕೂಟ, ವಿಂಧ್ಯಪರ್ವತ, ನೀಚೈ ಎಂಬ ಬೆಟ್ಟ, ದೇವಗಿರಿ, ಹಿಮಾಲಯ ಪರ್ವತ ಆ ಬಳಿಕ ಕ್ರೌಂಚಪರ್ವತದ ರಂಧ್ರದೊಳಗೆ ಹಾದು ಕಡೆಗೆ ಕೈಲಾಸ. ಹೀಗೆ ಹಾದುಹೋಗುವಾಗ

ಮಾರ್ಗದಲ್ಲಿ ಸಿಕ್ಕುವ ನದಿಗಳೆಂದರೆ:- ವಿಂಧ್ಯೆಯ ತಪ್ಪಲಿನಲ್ಲಿ ಹರಿಯುವ ರೇವಾ (ನರ್ಮದೆ). ದಶಾರ್ಣದೇಶದಲ್ಲಿ ಹರಿಯುವ ವೇತ್ರವತೀ, ದಶಾರ್ಣಕ್ಕೂ ಅವಂತೀದೇಶಕ್ಕೂ ಮಧ್ಯದಲ್ಲಿರುವ ನಿರ್ವಿಂಧ್ಯೆ. ಉಜ್ಜಯಿನೀ ಸಮೀಪದಲ್ಲಿ ಹರಿಯುವ ಶಿಪ್ರಾ ನದಿ. ಆ ಬಳಿಕ ದೇವಗಿರಿ ಮುಟ್ಟುವ ಮುನ್ನ ಗಂಭೀರಾ. ಅನಂತರ ರಂತಿದೇವನ ಕೀರ್ತಿಯನ್ನು ಹೊಗಳುವ ಚರ್ಮಣ್ವತೀ ನದಿ, ಗುಪ್ತಗಾಮಿನಿಯಾದರೂ ಹೊರದೋರಿದಾಗ ಮಿಂದವರ ಪಾಪ ಕಳೆಯಬಲ್ಲ ಸರಸ್ವತೀ, ಕಡೆಯಲ್ಲಿ ಹಿಮವತ್ಪರ್ವತದಲ್ಲುದಿಸಿ 'ಸಗರತನಯ'ರಿಗೆ ಸ್ವರ್ಗಸೋಪಾನವನ್ನು ಕಲ್ಪಿಸಿದ ಗಂಗಾನದಿ ಇವುಗಳು. ಕವಿಯು ಮೇಘದ ಹಾದಿಯಲ್ಲಿ ಬೆಟ್ಟಗಳನ್ನೂ ಮತ್ತು ನದಿಗಳನ್ನೂ ಕಲ್ಪಿಸಿರುವುದರ ಉದ್ದೇಶವನ್ನು ಪೂರ್ವಮೇಘದ ಹದಿಮೂರನೆಯ ಶ್ಲೋಕದ ಉತ್ತರಾರ್ಧದಲ್ಲಿ ಹೀಗೆಂದು ತಿಳಿಯ ಹೇಳಿರುತ್ತಾನೆ.

ಖಿನ್ನಃ ಖಿನ್ನಃ ‡ ಶಿಖರಿಷು ಪದಂ ‡ ನ್ಯಸ್ಯ ಗಂತಾಸಿ ಯತ್ರ ।
ಕ್ಷೀಣಃ ಕ್ಷೀಣಃ ‡ ಪರಿಲಘು ಪಯಃ ‡ ಸ್ರೋತಸಾಂ ಚೋಪಯುಜ್ಯ॥

ಎಂಬಂತೆ "ಮೇಘರಾಜ ! ನಿನ್ನ ಮಾರ್ಗಾಯಾಸವನ್ನು ಪರ್ವತಗಳ ಮೇಲೆ ಕುಳಿತು ಕಳೆದುಕೋ. ಅಲ್ಲದೆ ನೀನು ಅಲ್ಲಲ್ಲಿ ಮಳೆಗರೆದ ಮೇಲೆ ಮತ್ತೆ ನಿನ್ನಿರವಿಗೆ ಅತ್ಯವಶ್ಯಕವಾದ ತಿಳಿನೀರನ್ನು ಹಾದಿಯಲ್ಲಿ ಸಿಕ್ಕುವ ಜೀವನದಿಗಳಿಂದ ಪರಿಗ್ರಹಿಸು" ಎಂದು ಯಕ್ಷನು ಮೇಘಕ್ಕೆ ಸೂಚಿಸುತ್ತಾನೆ. ಪಥಿಕನು ತನ್ನ ಪ್ರಯಾಣವನ್ನು ಮುಂದುವರಿಸಲು ವಿಶ್ರಾಂತಿ ಆಹಾರಗಳು ಆವಶ್ಯಕವಿದ್ದಂತೆ ಮಹಾಪುರುಷಭಾವವನ್ನು ಮೇಘಕ್ಕೆ ಕಲ್ಪಿಸಿ ಅದಕ್ಕೆ ತಕ್ಕ ಸೌಲಭ್ಯಗಳನ್ನು ತನ್ನ ಪ್ರತಿಭೆಯಿಂದ ಕಲ್ಪಿಸಿರುವುದನ್ನು ಇಲ್ಲಿ ವಾಚಕರು ಮನಗಾಣಬೇಕು.

ಕವಿಯು, ಪಥಿಕನ ಪಯಣವು ಸುಗಮವಾಗಲು ಆಹಾರ, ವಿಶ್ರಾಂತಿಗಳ ಜೊತೆಗೆ ವಿಹಾರಮನೋರಂಜನೆಗಳೂ ಅತ್ಯವಶ್ಯಕವೆಂದು ಮನಗಂಡು, ಆಗಸದಲ್ಲಿ ಹಾರಿ ಹೋಗುವ ಮೇಘವೆಂಬ ಪಥಿಕನ ಮನೋರಂಜನೆಗಾಗಿ ಮಾರ್ಗದಲ್ಲಿ ದಶಾರ್ಣಾ ಮತ್ತು ಅವಂತೀ ದೇಶಗಳನ್ನೂ ಅನುಕ್ರಮವಾಗಿ ವಿದಿಶಾ ಮತ್ತು ಉಜ್ಜಯಿನೀ ಎಂಬ ಅವುಗಳ ರಾಜಧಾನಿಗಳನ್ನೂ, ಅವುಗಳಲ್ಲಿನ ಉಪ್ಪರಿಗೆಗಳು, ದೇವಾಲಯಗಳು ಇವುಗಳ ವರ್ಣನೆಯನ್ನೂ

ಅಲ್ಲದೆ ಎಲ್ಲದಕ್ಕಿಂತಲೂ ಹೆಚ್ಚಾಗಿ ಶೃಂಗಾರರಸಸಪಿದ ಕಾಮುಕನ ಮನಸೆಳೆವ ಚೆಲುವೆಯರ ಹಾವಭಾವವಿಲಾಸಗಳನ್ನೂ, ನರ್ತಕಿಯರ ನೃತ್ಯವನ್ನೂ. ಉಪ ಪತಿಗಳನ್ನರಸಿ ಸಂಕೇತಸ್ಥಳಗಳಿಗೆ ಗಮಿಸುವ ಅಭಿಸಾರಿಕೆಯರ ಸೊಬಗನ್ನೂ, ತನ್ನದೇ ಆದ ಊಹಾಪ್ರಪಂಚವನ್ನು ನಿರ್ಮಿಸಿ, ರಸಜ್ಞರು ತಲೆದೂಗುವಂತೆ ಬಣ್ಣಿಸಿರುತ್ತಾನೆ. ಬಯಸುವವರ ಬಯಕೆ ನೆರವೇರಲು ದೈವಸಹಾಯವು ಅತ್ಯವಶ್ಯಕವೆಂದು ಬಗೆದು, ಕಾಮಿಯಾದ ಯಕ್ಷನು ತನ್ನರಸಿಗೆ ಸಂದೇಶವನ್ನು ಮುಟ್ಟಿಸಲು ದೈವಾನುಗ್ರಹದ ನೆರವನ್ನು ಬಯಸಿ, ಮೇಘವನ್ನು ಕುರಿತು 'ನಿನ್ನ ಹಾದಿ ಬಳಸಾದರೂ ಚಿಂತೆಯಿಲ್ಲ, ಉಜ್ಜಯಿನೀ ಪಟ್ಟಣವನ್ನು ಸೇರಿ ಅಲ್ಲಿ ಸಂಧ್ಯಾಕಾಲದಲ್ಲಿ ಮಹಾಕಾಳಿದೇವಸ್ಥಾನದ ಬಳಿ ಸೇರಿ, ಆ ದೈವದ ಸೇವಾಕಾರ್ಯದಲ್ಲಿ ನೀನೂ ಭಾಗವಹಿಸಿ. ಆ ಮೂಲಕ ದೇವದೇವಿಯರ ಅನುಗ್ರಹಕ್ಕೆ ಪಾತ್ರನಾಗಿ, ಅಲ್ಲಿಂದ ಮುಂದುವರೆದು ದೇವಗಿರಿಯಲ್ಲಿರವ ಸ್ಕಂದ (ಕಾರ್ತಿಕೇಯ) ದೇವನಿಗೆ ಪುಷ್ಪಾಸಾರದಿಂದ ಪೂಜೆಯನ್ನ ಸಲ್ಲಿಸುವುದು ಮಾತ್ರವಲ್ಲದೆ ಅವನ ವಾಹನವಾದ ನವಿಲನ್ನು ನಿನ್ನ ಮೊಳಗಿನ್ನಿಂದ ಕುಣಿಸಿ, ಆ ಮೂಲಕ ಆತನ ತಾಯಿ ಪಾರ್ವತೀ ದೇವಿಯ ಪ್ರೀತಿಯನ್ನೂ ಅನುಗ್ರಹ ವನ್ನೂ ಪಡೆ. ಇಷ್ಟಕ್ಕೇ ಬಿಡದೆ ಬ್ರಹ್ಮಾವರ್ತ ದೇಶದಲ್ಲಿ ದುಷ್ಟಶಿಕ್ಷಣಶಿಷ್ಟ ಪರಿಪಾಲನೆಯ ಕಾರ್ಯವನ್ನು ಕೈಗೊಂಡ ಅರ್ಜುನನ ಶೌರ್ಯದಿಂದ ಪವಿತ್ರ ವಾದ ಕುರುಕ್ಷೇತ್ರವನ್ನು ದರ್ಶಿಸಿ, ಪರಮಪಾವನವಾದ ಗಂಗಾ ತೀರ್ಥವನ್ನು ಪಾನಿಸಿ, ಹಿಮವಂತನಲ್ಲಿ ವನ ಮತ್ತು ವನ್ಯಮೃಗಗಳಿಗೆ ಬಾಧೆ ತರುವ ಕಾಳ್ಗಿಚ್ಚನ್ನು ಸುರಿಮಳೆಯಿಂದ ನಂದಿಸಿ,ಕಾರ್ಮುಗಿಲನ್ನು ಆನೆಯೆಂದು ನಂಬಿ ಮೇಲೆ ಹಾರುವ ಶರಭಮೃಗಗಳ ಸೊಕ್ಕನ್ನು ಆಲಿಕಲ್ಮಳೆಯಿಂದಡಗಿಸಿ, ಮತ್ತೆ ಅಲ್ಲಿ ನೆಲೆ ಗೊಂಡಿರುವ ಪಶುಪತಿಯ ದೇವಾಲಯಲ್ಲಿನ ದೇವನಿಗೆ ಸಂಗೀತಸೇವೆ ಯನ್ನು ಪೂರ್ಣಗೊಳಿಸಲು ನೆರವಾಗಿ, ಬಳಿಕ ಸ್ಕಂದನಿಂದಾದ ಕ್ರೌಂಚ ಗಿರಿಯ ರಂಧ್ರದ ಮೂಲಕ ಹಾಯ್ದು ಮೇಲೆದ್ದು, ಮೇಲೆ ಕೈಲಾಸದ ತಪ್ಪಲಿನಲ್ಲಿ ಶಂಭುದೇವನು ಗೌರಿಯೊಡನೆ ಪಾದಚಾರಿಯಾಗಿ ವಿಹರಿಸಲು ಬಂದಾಗ ಅವರಿಗಾಗಿ ನೀನು ಘನೀಭೂತವಾಗಿ ಮೆಟ್ಟಿಲುಗಳನ್ನು ಕಲ್ಪಿಸಿ, ಆ ಸೇವೆಯ ಮೂಲಕ ಶಿವಶಿವೆಯರ ಅನುಗ್ರಹವನ್ನು ಪಡೆದುದೇ ಆದರೆ ಕೈಲಾಸಪರ್ವತದ ಪ್ರಸ್ಥಭೂಮಿಯಲ್ಲಿನ ಅಲಕಾಪಟ್ಟಣ ಸಿಕ್ಕುವುದು. ಅದೇ ನನ್ನ ಪ್ರೇಯಸಿಯ ನೆಲ" ಎಂದು ಕವಿಯು ಯಕ್ಷನ ಬಾಯಿಂದ ನುಡಿಸಿರುತ್ತಾನೆ.

ಕವಿಯು ಈ ಕಾವ್ಯದ ವೈಶಿಷ್ಟ್ಯವನ್ನು ಬಣ್ಣಿಸಬೇಕೆಂದರೆ, ವರ್ಷರ್ತುವಿನಲ್ಲಿ ವಿಜೃಂಭಿಸುವ ಬೆಟ್ಟಮಲ್ಲಿಗೆ (ಕುಟಜಕುಸುಮ), ಕಂದಳೀ. ಕದಂಬ, ಕೇದಿಗೆ (ಕೇತಕೀ), ಯೂಥಿಕಾ ಮೊದಲಾದ ಹೂಗಳೂ, ಆಮ್ರಕೂಟದ ಕಾಡು-ಮಾವು. ದಶಾರ್ಣದೇಶದಲ್ಲಿನ, ಜಂಬುನೇರಿಳೆ, ದೇವಗಿರಿಯಲ್ಲಿನ ಅಡವಿ ಅತ್ತೀ ಹಣ್ಣು ಇವೇ ಮೊದಲಾದ ಹಣ್ಣುಗಳೂ, ಮಳೆಯ ಹನಿಗಾಗಿ ಬಾಯಿಬಿಡುವ ಚಾತಕಪಕ್ಷಿಗಳೂ ಗರ್ಭಧಾರಣೆಗೆ ಬಯಸಿ ಸಾಲುಗಟ್ಟಿ ಮುಗಿಲನ್ನು ಸುತುವರಿದ ಬೆಳ್ವಕ್ಕಿ (ಬಲಾಕಿ)ಗಳೂ. ಮಾನಸರೋವರದ ಕಡೆ ಹಾರಿಹೋಗುವ ರಾಜಹಂಸಗಳೂ, ಕಾರ್ಮುಗಿಲನ್ನು ನೋಡಿ ಆನಂದಪರವಶರಾಗಿ ಕೇಕಾಧ್ವನಿಯಿಂದ ನರ್ತಿಸುವ ನವಿಲುಗಳು ಈ ಮೊದಲಾದ ಹಕ್ಕಿಗಳೂ, ನೀಪ ಕಂದಳೀ, ನಿಚುಳ ಇಲ್ಲವೇ ನೀರುಮಂಜಿ ಗಿಡಗಳೂ, ಬಯಲಿನಲ್ಲಿನ ಸಾರಂಗಗಳು, ಹಿಮಾಲಯದಲ್ಲಿನ ಚಮರೀ, ಕಸ್ತೂರೀ ಮತ್ತು ಎಂಟು ಕಾಲುಗಳ ಶರಭ ಈ ಬಗೆಯ ಮೃಗಗಳೂ ಈ ಕಾವ್ಯದಲ್ಲಿ ವರ್ಣಿತವಾಗಿವೆ.

ಈ ಕಾವ್ಯರತ್ನದಲ್ಲಿ ವೈಜ್ಞಾನಿಕ ಸತ್ಯಾಂಶಗಳು ಅಲ್ಲಲ್ಲಿ ಸೂಚಿತವಾಗಿವೆ. ಉದಹರಿಸಬೇಕೆಂದರೆ : ಮೇಘವು 'ಧೂಮ-ಜ್ಯೋತಿಃ-ಸಲಿಲ-ಮರುತಾಂ ಸನ್ನಿಪಾತಃ' ಅಂದರೆ 'ಹೊಗೆಮಿಂಚು ನೀರ್ಗಾಳಿ ಸಂಚಯು'ವೇ ಮೇಘ. ಕಾಮನಬಿಲ್ಲು 'ವಲ್ಮೀಕಾಗ್ರಾತ್ ಪ್ರಭವತಿ' ಅಂದರೆ ಹುತ್ತದೊಳಗಿನಿಂದ ನೀರಿನ ಆವಿ ಹೊರ ಹೊರಟಿದು ಸೂರ್ಯರಶ್ಮಿ ಅವುಗಳಲ್ಲಿನ ಜಲಕಣಗಳ ಮೂಲಕ ಹಾದು ಏಳ್ಬಣ್ಣಗಳ ಕಾಮನಬಿಲ್ಲಿಗೆ ಎಡೆಗೊಡುತ್ತದೆ. ಕಾಮನ-ಬಿಲ್ಲಿನ ವಿವಿಧ ಬಣ್ಣಗಳು 'ರತ್ನಚ್ಛಾಯಾ ವ್ಯತಿಕರ ಇವ' ಅಂದರೆ ನವರತ್ನಗಳು ಬೆರೆತಂದು ಕಾಣ್ಬರುವ ಬಣ್ಣಗಳ ಬೆರಕೆಯೇ ಅದರ ಸೊಂಪು. ಸೊರಗಿನ ಕಮಲದ ಬಳ್ಳಿಯು 'ಹಿಮಕರ-ಕ್ಲಿಷ್ಟಕಾಂತಿಃ' ಅಂದರೆ ಹಿಮ ಸುರಿದರೆ ಕಮಲದ ಬಳ್ಳಿ ಬಾಡುವುದು ಸ್ವಾಭಾವಿಕ. ಒದ್ದೆಯಾದ ವೀಣೆಯ ತಂತಿ ಗಾನಕ್ಕೆ ಅನರ್ಹವೆಂಬುದನ್ನು ಸೂಚಿಸಲು 'ತಂತ್ರೀಮಾರ್ದ್ರಾಂ ನಯನ-ಸಲಿಲೈಃ' ಅಂದರೆ ಕಣ್ಣೀರಿನಿಂದ ತೊಯ್ದು ವೀಣೆಯ ತಂತಿಯು ಗಾನವನ್ನು ನುಡಿಸಲಾರದು. ಮೇಘಗರ್ಜನೆಗೆ ಶಿಲೀಂಧ್ರ (ನಾಯಿಕೊಡೆ)ಗಳು ನೆಲದಿಂದ ಮೇಲೆದ್ದು ಭೂಮಿಯಲ್ಲಿ ಸಸ್ಯಾಭಿವೃದ್ಧಿಯನ್ನು ಸೂಚಿಸುವುದು ಎಂಬುದನ್ನು,

'ಕರ್ತುಂ ಯಚ್ಚ ‡ ಪ್ರಭವತಿ ಮಹೀಂ ‡ ಉಚ್ಛಿಲೀಂಧ್ರಾ
ಮವಂಧ್ಯಾಂ ‡ ಶ್ರವಣ ಸುಭಗಂ ಗರ್ಜಿತಂ'

ಅಂದರೆ ಮುಂಗಾರಿನ ಮೊಳಗು. ನೆಲದಿಂದ ನಾಯಿಕೊಡೆಗಳನ್ನೆಬ್ಬಿಸಿದುದೇ ಆದರೆ ಅದು ಭೂಮಿಯು ಸಸ್ಯಶಾಲಿನಿಯಾಗುವ ಸೂಚಕ. ಇವೇ ಮೊದ ಲಾದ ವೈಜ್ಞಾನಿಕ ಪ್ರಸಂಗಗಳು ಈ ಕಾವ್ಯದಲ್ಲಿ ಹರಡಿವೆ. ಇದೂ ಅಲ್ಲದೆ ಸ್ತ್ರೀಯರಿಗೆ ಎಡಗಣ್ಣು, ಎಡತೊಡೆ ಹಾರುವುದು ಮಂಗಳಸೂಚಕವೆಂದೂ, ಅದರಿಂದ ರತಿಸುಖಲಾಭವೆಂದೂ ತಿಳಿಯ ಹೇಳುವ ಶಕುನಶಾಸ್ತ್ರ. ಸ್ತ್ರೀಯರ ಪಾದತಾಡನೆಯಿಂದ ರಕ್ತಾಶೋಕ, ಮುಕ್ಕಳಿಸಿ ಉಗುಳುವುದರಿಂದ ಕೇಸರ (ಪಕುಳ) ವೃಕ್ಷ ಇವು ಪುಷ್ಪಿತವಾಗುವುದೆಂಬ ದೋಹದ ಶಾಸ್ತ್ರ. ವೀಣಾ ವಾದನ, ಕೊಳಲಿನ ನಿನದ, ಮೃದಂಗಧ್ವನಿ, ಇವುಗಳಿಂದ ಕೂಡಿದ ಇಂಪಾದ ಹಾಡು ಎಂಬ ಸಂಗೀತಶಾಸ್ತ್ರ ಇವುಗಳ ಪ್ರಸಂಗಗಳೂ ಇದರಲ್ಲಡಗಿವೆ.

ಕಾವ್ಯವು ರಸಪ್ರಧಾನವಾದುದು. ಶೃಂಗಾರಾದಿನವರಸಗಳಲ್ಲಿ ಯಾವು ದಾದರೊಂದರಡಕ್ಕೆ ಕಾವ್ಯದಲ್ಲಿ ಪ್ರಾಧಾನ್ಯವುಂಟು. ಈ ಕಾವ್ಯದಲ್ಲಿ ಶೃಂಗಾರವೇ ಪ್ರಧಾನ ರಸ. ಪೂರ್ವಮೇಘದಲ್ಲಿ ಸಂಭೋಗಶೃಂಗಾರವೂ ಉತ್ತರಮೇಘದಲ್ಲಿ ವಿಪ್ರಲಂಭ ಶೃಂಗಾರವೂ ಅತಿರಮ್ಯವಾಗಿ ವರ್ಣಿತವಾಗಿದೆ. ಪೂರ್ವಮೇಘದಲ್ಲಿ ಯಕ್ಷನು ತಾನು ಕಾಮಿಯಾದುದರಿಂದ ಆ ಮನೋಭಾವ ವನ್ನೇ ಕಾರ್ಮೋಡದಲ್ಲಿ ಮೂಡಿಸಿರುತ್ತಾನೆ. ಅವನ ಭಾವನೆಯಲ್ಲಿ ಮೇಘ ರಾಜನಿಗೆ ಅದರಲ್ಲಿ ಮಿರುಗುವ ಮಿಂಚು ಎಂದಿಗೂ ಎಡೆಬಿಡದಿರುವ ಒಲವಿನ ಹೆಂಡತಿ. ಕವಿಯು 'ವಿದ್ಯುತ್ಕಳತ್ರಃ' ಎಂದು ಮೇಘವನ್ನು ಬಣ್ಣಿಸಿದ್ದಾನೆ. ಅಲ್ಲದೆ ಸೂರ್ಯೋದಯದಲ್ಲಿ ಕಮಲಗಳು ಅರಳುವುದು ಸ್ವಾಭಾವಿಕವಾದುದ ರಿಂದ ಕಮಲದ ಬಳ್ಳಿಯೆಂಬ ವನಿತೆ? ಸೂರ್ಯದೇವ ಪತಿಯೆಂಬ ಕವಿಸಮಯ ವನ್ನನುಸರಿಸಿ, ಪ್ರಾತಃಕಾಲದಲ್ಲಿ ಅಂದರೆ ಸೂರ್ಯೋದಯದ ಸಮಯದಲ್ಲಿ ಹಿಮಬಿಂದುವಿನಿಂದ ಕೂಡಿದ ಕಮಲದ ಹೂ ಕವಿಯ ಭಾವನೆ ರಾತ್ರಿಯಲ್ಲಿ ಸೂರ್ಯನು ಕಾಣದಿರುವುದರಿಂದ ರಾತ್ರಿ ಪತಿವಿರಹದಿಂದ, ನೊಂದ ಪ್ರೇಯಸಿಯ ಕಣ್ಣೀರಿನಂತೆ, ಇದನ್ನು 'ಅಬಲಾ ನಿಶಿ ಖಂಡಿತೇವ' ಎಂದು ಬಣ್ಣಿಸಿ, ಮಾರನೆ ಬೆಳಿಗ್ಗೆ ಪ್ರಿಯೆಯ ಕಣ್ಣೀರೊತ್ತೆದು ಅವಳನ್ನು ಸಂತೈಸು

ವುದಕ್ಕಾಗಿ ಬಂದ ಪ್ರಿಯನಂತೆ ಸೂರ್ಯನು ಕಮಲದ ಬಳ್ಳಿಯೆಂಬ ಸತಿಯ ಮುಖವೆನಿಸಿದ ತಾವರೆ ಹೂವೆಂಬ ಮುಖದಲ್ಲಿನ ಹಿಮಬಿಂದುವೆಂಬ ಕಣ್ಣೀರನ್ನು ತೊಡೆಯಲು ಬಂದಿದ್ದಾನೆ. ಎಂಬ ಸಂಭೋಗ ಶೃಂಗಾರದ ವರ್ಣನೆಯನ್ನು ಸ್ವಭಾವೋಕ್ತಿಯಿಂದ ಕವಿ ಚಿತ್ರಿಸಿರುತ್ತಾನೆ. ಇದಕ್ಕಿಂತಲೂ ರಮ್ಯವಾದ ಮತ್ತೊಂದು ಸನ್ನಿವೇಶದಲ್ಲಿ ಬೇಸಿಗೆಯ ಬೇಗೆಯಿಂದ ಸೊರಗಿದ ಹರಿನೀರುಳ್ಳ (ನಿರ್ವಿಂಧ್ಯಾ) ನದಿಯನ್ನು ಪ್ರಿಯನ ವಿರಹದಿಂದ ಕೃಶಳಾದ ಪ್ರೇಯಸಿಗೆ ಹೋಲಿಸಿ ತನಗೊಲಿದು ಕಾರ್ಶ್ಯವನ್ನು ಕಳೆಯಬೇಕೆಂದು ಕಾಮ ಪುರುಷನೆನಿಸಿದ ತನ್ನ ಪ್ರಿಯ ಮೇಘರಾಜನಲ್ಲಿ,

ವೀಚೀಕ್ಷೋಭ- ‡ ಸ್ತನಿತವಿಹಗ- ‡ ಶ್ರೇಣಿ ಕಾಂಚೀಗುಣಾಯಾಃ।
ಸಂಸರ್ಪಂತ್ಯಾಃ ‡ ಸ್ಖಲಿತಸುಭಗಂ ‡ ದರ್ಶಿತಾವರ್ತನಾಭೇಃ ॥
ನಿರ್ವಿಂಧ್ಯಾಯಾಃ ‡ ಪಥಿ ಭವ ರಸಾ- ‡ ಭ್ಯಂತರಃ ಸನ್ನಿಪತ್ಯೇ ।
ಸ್ತ್ರೀಣಾ ಮಾದ್ಯಂ‡ ಪ್ರಣಯವಚನಂ‡ ವಿಭ್ರಮೋ ಹಿ ಪ್ರಿಯೇಷು ॥
[ಶ್ಲೋ. ೨೯]

ಎಂಬಂತೆ ಅಲೆಗಳ ಹೊಡತಕ್ಕೆ ಬೆದರಿ ಶಬ್ದಮಾಡುವ ನೀರುಹಕ್ಕಿಗಳ ಸಾಲೇ ದನಿಗೈವ ಗೆಜ್ಜೆಯ ಡಾಬು, ನೀರು ಧುಮ್ಮಿಕ್ಕುವ ಸ್ಥಳದಲ್ಲಿ ಹುಟ್ಟುವ ಸುಳಿಯೇ ಪ್ರಿಯನಿಗೆ ತೋರದೋರುವ ತನ್ನ ಹೊಕ್ಕಳು; ಈ ವಿಧವಾದ ಶೃಂಗಾರಚೇಷ್ಟೆಗಳೇ ನದೀ ವಧುವಿನ ನಲ್ನುಡಿಗಳು. ಇವುಗಳನ್ನು ಕಂಡು ಪ್ರೇಯಸಿಯ ಮನದಿಷ್ಟವನ್ನು ಸಲ್ಲಿಸಬೇಕಾದುದು ರಸಿಕನ ಕರ್ತವ್ಯ. ಅಲ್ಲದೆ,

ವೇಣೀಭೂತ- ‡ ಪ್ರತನುಸಲಿಲಾ ‡ ಸಾ ತ್ವತೀತಸ್ಯ ಸಿಂಧುಃ ।
ಪಾಂಡುಚ್ಛಾಯಾ‡ ತಟತರುರುಹ-‡ ಭ್ರಂಶಿಭಿಃ ಜೀರ್ಣಪರ್ಣೈಃ ॥
ಸೌಭಾಗ್ಯಂ ತೇ ‡ ಸುಭಗ! ವಿರಹಾ- ‡ ವಸ್ಥಯಾ ವ್ಯಂಜಯಂತೀ ।
ಕಾರ್ಶ್ಯಂ ಯೇನ‡ ತ್ಯಜತಿ ವಿಧಿನಾ ‡ ಸ ತ್ವಯೈವೋಪಪಾದ್ಯಃ ॥
[ಶ್ಲೋ. ೩೦]

ಎಂಬಂತೆ ಸಣ್ಣಗೆ ಹರಿಯುವ ಆ ನದಿಯ ನೀರಿನಮೇಲೆ ದಡದಲ್ಲಿರುವ ಹಣ್ಣೆಲೆಗಳುದುರಿ ಬಿಳಿ ಬಣ್ಣವನ್ನು ಅದಕ್ಕೆ ಕೊಟ್ಟು ವಿರಹದಿಂದ ಬಿಳಿಚಿ ಕೊಂಡಿರುವ ಪ್ರೇಯಸಿಯಂತ ಕಾಣುತ್ತದೆಯಾಗಿ ನೀನು ಅದರ ಕೃಶತ್ವವನ್ನು

'ಕರ್ತುಂ ಯಚ್ಚ ‡ ಪ್ರಭವತಿ ಮಹೀಂ ‡ ಉಚ್ಛಿಲೀಂಧ್ರಾ
ಮವಂಧ್ಯಾ ‡ ಶ್ರವಣ ಸುಭಗಂ ಗರ್ಜಿತಂ'

ಅಂದರೆ ಮುಂಗಾರಿನ ಮೊಳಗು. ನೆಲದಿಂದ ನಾಯಿಕೊಡೆಗಳನ್ನೆಬ್ಬಿಸಿದುದೇ ಆದರೆ ಅದು ಭೂಮಿಯು ಸಸ್ಯಶಾಲಿನಿಯಾಗುವ ಸೂಚಕ. ಇವೇ ಮೊದಲಾದ ವೈಜ್ಞಾನಿಕ ಪ್ರಸಂಗಗಳು ಈ ಕಾವ್ಯದಲ್ಲಿ ಹರಡಿವೆ. ಇದೂ ಅಲ್ಲದೆ ಸ್ತ್ರೀಯರಿಗೆ ಎಡಗಣ್ಣು, ಎಡತೊಡೆ ಹಾರುವುದು ಮಂಗಳಸೂಚಕವೆಂದೂ, ಅದರಿಂದ ರತಿಸುಖಲಾಭವೆಂದೂ ತಿಳಿಯ ಹೇಳುವ ಶಕುನಶಾಸ್ತ್ರ. ಸ್ತ್ರೀಯರ ಪಾದತಾಡನೆಯಿಂದ ರಕ್ತಾಶೋಕ, ಮುಕ್ಕಳಿಸಿ ಉಗುಳುವುದರಿಂದ ಕೇಸರ (ವಕುಳ) ವೃಕ್ಷ ಇವು ಪುಷ್ಪಿತವಾಗುವುದೆಂಬ ದೋಹದ ಶಾಸ್ತ್ರ. ವೀಣಾವಾದನ, ಕೊಳಲಿನ ನಿನದ, ಮೃದಂಗಧ್ವನಿ, ಇವುಗಳಿಂದ ಕೂಡಿದ ಇಂಪಾದ ಹಾಡು ಎಂಬ ಸಂಗೀತಶಾಸ್ತ್ರ ಇವುಗಳ ಪ್ರಸಂಗಗಳೂ ಇದರಲ್ಲಡಗಿವೆ.

ಕಾವ್ಯವು ರಸಪ್ರಧಾನವಾದುದು. ಶೃಂಗಾರಾದಿನವರಸಗಳಲ್ಲಿ ಯಾವುದಾದರೊಂದೆರಡಕ್ಕೆ ಕಾವ್ಯದಲ್ಲಿ ಪ್ರಾಧಾನ್ಯವುಂಟು. ಈ ಕಾವ್ಯದಲ್ಲಿ ಶೃಂಗಾರವೇ ಪ್ರಧಾನ ರಸ. ಪೂರ್ವಮೇಘದಲ್ಲಿ ಸಂಭೋಗಶೃಂಗಾರವೂ ಉತ್ತರಮೇಘದಲ್ಲಿ ವಿಪ್ರಲಂಭ ಶೃಂಗಾರವೂ ಅತಿರಮ್ಯವಾಗಿ ವರ್ಣಿತವಾಗಿದೆ. ಪೂರ್ವಮೇಘದಲ್ಲಿ ಯಕ್ಷನು ತಾನು ಕಾಮಿಯಾದುದರಿಂದ ಆ ಮನೋಭಾವವನ್ನೇ ಕಾರ್ಮೋಡದಲ್ಲಿ ಮೂಡಿಸಿರುತ್ತಾನೆ. ಅವನ ಭಾವನೆಯಲ್ಲಿ ಮೇಘರಾಜನಿಗೆ ಅದರಲ್ಲಿ ಮಿರುಗುವ ಮಿಂಚು ಎಂದಿಗೂ ಎಡೆಬಿಡದಿರುವ ಒಲವಿನ ಮಡದಿ. ಕವಿಯು 'ವಿದ್ಯುತ್ಕಳತ್ರಃ' ಎಂದು ಮೇಘವನ್ನು ಬಣ್ಣಿಸಿದ್ದಾನೆ. ಅಲ್ಲದೆ ಸೂರ್ಯೋದಯದಲ್ಲಿ ಕಮಲಗಳು ಅರಳವುದು ಸ್ವಾಭಾವಿಕವಾದುದರಿಂದ ಕಮಲದ ಬಳ್ಳಿಯೆಂಬ ವನಿತೆ? ಸೂರ್ಯದೇವ ಪತಿಯೆಂಬ ಕವಿಸಮಯವನ್ನನುಸರಿಸಿ, ಪ್ರಾತಃಕಾಲದಲ್ಲಿ ಅಂದರೆ ಸೂರ್ಯೋದಯದ ಸಮಯದಲ್ಲಿ ಹಿಮಬಿಂದುವಿನಿಂದ ಕೂಡಿದ ಕಮಲದ ಹೂ ಕವಿಯ ಭಾವನೆ ರಾತ್ರಿಯಲ್ಲಿ ಸೂರ್ಯನು ಕಾಣದಿರುವುದರಿಂದ ರಾತ್ರಿ ಪತಿವಿರಹದಿಂದ, ನೊಂದ ಪ್ರೇಯಸಿಯ ಕಣ್ಣೀರಿನಂತೆ, ಇದನ್ನು 'ಅಬಲಾ ನಿಶಿ ಖಂಡಿತೇವ' ಎಂದು ಬಣ್ಣಿಸಿ, ಮಾರನೆ ಬೆಳಿಗ್ಗೆ ಪ್ರಿಯೆಯ ಕಣ್ಣೀರ್ತೊಡೆದು ಅವಳನ್ನು ಸಂತೈಸು

ವುದಕ್ಕಾಗಿ ಬಂದ ಪ್ರಿಯನಂತೆ ಸೂರ್ಯನು ಕಮಲದ ಬಳ್ಳಿಯೆಂಬ ಸತಿಯ ಮುಖವೆನಿಸಿದ ತಾವರೆ ಹೂವೆಂಬ ಮುಖದಲ್ಲಿನ ಹಿಮಬಿಂದುವೆಂಬ ಕಣ್ಣೀರನ್ನು ತೊಡೆಯಲು ಬಂದಿದ್ದಾನೆ. ಎಂಬ ಸಂಭೋಗ ಶೃಂಗಾರದ ವರ್ಣನೆಯನ್ನು ಸ್ವಭಾವೋಕ್ತಿಯಿಂದ ಕವಿ ಚಿತ್ರಿಸಿರುತ್ತಾನೆ. ಇದಕ್ಕಿಂತಲೂ ರಮ್ಯವಾದ ಮತ್ತೊಂದು ಸನ್ನಿವೇಶದಲ್ಲಿ ಬೇಸಿಗೆಯ ಬೇಗೆಯಿಂದ ಸೊರಗಿದ ಹರಿನೀರುಳ್ಳ (ನಿರ್ವಿಂಧ್ಯಾ) ನದಿಯನ್ನು ಪ್ರಿಯನ ವಿರಹದಿಂದ ಕೃಶಳಾದ ಪ್ರೇಯಸಿಗೆ ಹೋಲಿಸಿ ತನಗೊಲಿದು ಕಾರ್ಶ್ಯವನ್ನು ಕಳೆಯಬೇಕೆಂದು ಕಾಮ ಪುರುಷನೆನಿಸಿದ ತನ್ನ ಪ್ರಿಯ ಮೇಘರಾಜನಲ್ಲಿ,

ವೀಚೀಕ್ಷೋಭ- ‡ ಸ್ತನಿತವಿಹಗ- ‡ ಶ್ರೇಣಿ ಕಾಂಚೀಗುಣಾಯಾಃ।
ಸಂಸರ್ಪಂತ್ಯಾಃ ‡ ಸ್ಖಲಿತಸುಭಗಂ ‡ ದರ್ಶಿತಾವರ್ತನಾಭೇಃ ॥
ನಿರ್ವಿಂಧ್ಯಾಯಾಃ ‡ ಪಥಿ ಭವ ರಸಾ- ‡ ಭ್ಯಂತರಃ ಸನ್ನಿಪತ್ಯೇ ।
ಸ್ತ್ರೀಣಾ ಮಾದ್ಯಂ‡ ಪ್ರಣಯವಚನಂ‡ ವಿಭ್ರಮೋ ಹಿ ಪ್ರಿಯೇಷು ॥
[ಶ್ಲೋ. ೨೯]

ಎಂಬಂತೆ ಅಲೆಗಳ ಹೊಡತಕ್ಕೆ ಬೆದರಿ ಶಬ್ದಮಾಡುವ ನೀರುಹಕ್ಕಿಗಳ ಸಾಲೇ ದನಿಗೈವ ಗೆಜ್ಜೆಯ ಡಾಬು, ನೀರು ಧುಮ್ಮಿಕ್ಕುವ ಸ್ಥಳದಲ್ಲಿ ಹುಟ್ಟುವ ಸುಳಿಯೇ ಪ್ರಿಯನಿಗೆ ತೋರದೋರುವ ತನ್ನ ಹೊಕ್ಕಳು; ಈ ವಿಧವಾದ ಶೃಂಗಾರಚೇಷ್ಟೆಗಳೇ ನದೀ ವಧುವಿನ ನಲ್ನುಡಿಗಳು. ಇವುಗಳನ್ನು ಕಂಡು ಪ್ರೇಯಸಿಯ ಮನದಿಷ್ಟವನ್ನು ಸಲ್ಲಿಸಬೇಕಾದುದು ರಸಿಕನ ಕರ್ತವ್ಯ. ಅಲ್ಲದೆ,

ವೇಣೀಭೂತ- ‡ ಪ್ರತನುಸಲಿಲಾ ‡ ಸಾ ತ್ವತೀತಸ್ಯ ಸಿಂಧುಃ ।
ಪಾಂಡುಚ್ಛಾಯಾ‡ ತಟತರುರುಹ-‡ ಭ್ರಂಶಿಭಿಃ ಜೀರ್ಣಪರ್ಣೈಃ ॥
ಸೌಭಾಗ್ಯಂ ತೇ ‡ ಸುಭಗ! ವಿರಹಾ- ‡ ವಸ್ಥಯಾ ವ್ಯಂಜಯಂತೀ ।
ಕಾರ್ಶ್ಯಂ ಯೇನ‡ ತ್ಯಜತಿ ವಿಧಿನಾ ‡ ಸ ತ್ವಯೈವೋಪಪಾದ್ಯಃ ॥
[ಶ್ಲೋ. ೩೦]

ಎಂಬಂತೆ ಸಣ್ಣಗೆ ಹರಿಯುವ ಆ ನದಿಯ ನೀರಿನಮೇಲೆ ದಡದಲ್ಲಿರುವ ಹಣ್ಣೆಲೆಗಳುದರಿ ಬಿಳಿ ಬಣ್ಣವನ್ನು ಅದಕ್ಕೆ ಕೊಟ್ಟು ವಿರಹದಿಂದ ಬಿಳಿಚಿಕೊಂಡಿರುವ ಪ್ರೇಯಸಿಯಂತೆ ಕಾಣುತ್ತದೆಯಾಗಿ ನೀನು ಅದರ ಕೃಶತ್ವವನ್ನು

ಹೋಗಲಾಡಿಸಲು ಯತ್ನಿಸು ಅಂದರೆ ಮಳೆಗರೆದು ನದಿ ತುಂಬಿ ಹರಿಯು ವಂತೆ ಮಾಡು" ಎಂದು ಯಕ್ಷನು ಮೇಘವನ್ನು ಉದ್ದೇಶಿಸಿ ನುಡಿದ ಸಂಭೋಗ ಶೃಂಗಾರದ ಸೊಬಗನ್ನು ಕವಿಯು ಎಷ್ಟು ಸೊಗಸಾಗಿ ಚಿತ್ರಿಸಿರು ತ್ತಾನೆ! ಇದೇ ಬಗೆಯಲ್ಲಿ ಗಂಭೀರಾನದಿಯ ಪರಿಯನ್ನು ಬಣ್ಣಿಸುವಾಗ ಕವಿಯ ವಾಣಿಯಲ್ಲಿಯೇ ನಾವು ಆನಂದಿಸುವ :-

ಗಂಭೀರಾಯಾಃ ‡ ಪಯಸಿ ಸರಿತಃ ‡ ಚೇತಸೀವ ಪ್ರಸನ್ನೇ ।
ಛಾಯಾತ್ಮಾಪಿ ‡ ಪ್ರಕೃತಿಸುಭಗೋ ‡ ಲಪ್ಸ್ಯತೇ ತೇ ಪ್ರವೇಶಂ ॥
ತಸ್ಮಾದಸ್ಯಾಃ‡ ಕುಮುದವಿಶದಾ-‡ ನ್ಯರ್ಹಸಿ ತ್ವಂ ನ ಧೈರ್ಯಾತ್ ।
ಮೋಘೀಕರ್ತುಂ ‡ ಚಟುಲಶಫರೋ- ‡ ದ್ವರ್ತನ ಪ್ರೇಕ್ಷಿತಾನಿ ॥
[ಶ್ಲೋ. ೪೪]

[ಅನುವಾದ :–ಚಲುವನಹೆ ಹುಟ್ಟಿನಲಿ ಮನದೊಲು ।
ಬಲುತಿಳಿಯ ಗಂಭೀರ ತೊರೆಯಾ ।
ಜಲವು ಕೊಳ್ವುದು ನಿನ್ನ ರೂಪದ ಬಿಂಬ ಮಾದೊಡೆಯು ॥
ಜಲದ! ನೀನದರಿಂದ ಬಿಳಿನೈ- ।
ದಿಲೆಯ ಬಗೆ ಮೀರ್ಾಶಫರಿ ತಳೆಕೆಳ-
ಗಿಳಿವಚಳಕದ ದಿಟ್ಟಿಗಳ ಬರಿಗೈಯುವುದು ಸಲ್ಲದಲಾ ॥]

ಎಂಬಂತ 'ಓ ಮೇಘರಾಜ! ನಿಚ್ಚಳದ ಮನದಂತೆ ಗಂಭೀರಾನದಿಯ ತಿಳಿನೀರಿ ನಲ್ಲಿ ನೀನು ಪ್ರತಿಬಿಂಬಿಸುವುದು ಖಂಡಿತ. ಈ ಕಾರಣ ಆ ನೀರಿನಲ್ಲಿ ಚಳುಕ ತನದಿಂದ ಮೈ ಹೊರಳಿಸಿ ತನ್ನ ಬಿಳುಪು ಹೊಟ್ಟೆಯ ತೋರುವ ಶಫರಿಯೆಂಬ ಮೀನುಗಳೇ ಆ ನದೀವಧುವಿನ ಕಡೆಗಣ್ಣಿನ ನೋಟವಾದುದರಿಂದ ಅದನ್ನು ನೀನು ಉಪೇಕ್ಷಿಸುವುದು ಸರಿಯಲ್ಲ. ಅಲ್ಲದೆ ನದೀವಧುವಿನ ವಿರಹ ಸ್ಥಿತಿಯು ಈ ಬಗೆಯಲ್ಲಿದೆ :–

'ತಸ್ಯಾಃ ಕಿಂಚಿತ್ ‡ ಕರಧೃತಮಿವ ‡ ಪ್ರಾಪ್ತವಾನೀರಶಾಖಂ ।
ಹೃತ್ವಾ ನೀಲಂ ‡ ಸಲಿಲವಸನಂ ‡ ಮುಕ್ತರೋಧೋ ನಿತಂಬಂ ॥
ಪ್ರಸ್ಥಾನಂ ತೇ ‡ ಕಥಮಪಿ ಸಖೇ! ‡ ಲಂಬಮಾನಸ್ಯ ಭಾವಿ ।
ಜ್ಞಾತಾಸ್ವಾದೋ‡ ವಿವೃತಜಘನಾಂ ಕೋ ವಿಹಾತುಂ ಸಮರ್ಥಃ ॥
[ಶ್ಲೋ. ೪೫]

[ಅನುವಾದ :-ಗೆಳೆಯ! ನದಿ ಗಂಭೀರವದು ನಿಜ ।
ಜಲದ ಕಪ್ಪುಡೆ ತಟನಿತಂಬಗ- ।
ಳುಳಿದು ಜೊಂಡಿನ ಕೈಗಳಿಂದದ ನಿನಿಸು ಪಿಡಿದೊಲಿರೆ ||
ಕಳಚುತವ ಮೇಲಾಡುತಿಹ ನೀಂ ।
ಬೆಳೆಸೆ ನಿಜಮುಂ- ಬಯುಣ ಕಷ್ಟವು ।
ತಿಳಿದು ರಸವುಂ ತೆರೆವ ಜಘನವ ನಾರು ಬಿಡಲಹುದು? ||]

ಎಂಬಂತೆ ಆ ಗಂಭೀರಾ ಎಂಬ ನದೀವಧುವಿಗೆ ಸಣ್ಣಗೆ ಹರಿವ ನೀಲಬಣ್ಣದ ನೀರೇ ಕರಿಸೀರೆ, ದಡಗಳೇ ಅದರ ಸೊಂಟದ ಹಿಂಬದಿ. ದಡಬಿಟ್ಟು ಕೆಳಗಿಳಿದ ನೀರು ನಿತಂಬದಿಂದ ಜಾರಿದ ಸೀರೆ, ಅದರಲ್ಲಿ ಬೆಳೆದ ಜೊಂಡುಗಳೇ ಅದಕ್ಕೆ ಕೈಗಳು. ಅವು ಬಗ್ಗಿ ನೀರನ್ನು ಮುಟ್ಟಿರುವುದು ಮಾನವನ್ನು ಮುಚ್ಚಲು ಸೀರೆಯನ್ನು ಹಿಡಿದ ಕೈಗಳು. ಇಂತಹ ವಿರಹಾವಸ್ಥೆಯನ್ನು ನೋಡಿ, ರತಿ ರಸವನ್ನು ಸವಿದ ಯಾವ ಕಾಮಿಯೂ ಯುವತಿಯ ತೆರೆದಿಟ್ಟ ಸೊಂಟದ ಮುಂಭಾಗವನ್ನು ಬಿಡಲಾರ." ಈ ದೃಶ್ಯದ ವಿವರಣೆಯು ಅಸಭ್ಯವೆಂದೆನಿಸಿದರೂ ಕವಿಯ ವರ್ಣನೆಯ ವೈಖರಿಯಲ್ಲಿ ಆ ಭಾವನೆಗೆ ಎಡೆಗುಡದೆ ಸಂಭೋಗಶೃಂಗಾರದ ಸೊಬಗನ್ನು ಹೊರದೋರುತ್ತದೆ. ಇಂತಹ ಸನ್ನಿವೇಶಗಳು ಹಲವಾರು ಪೂರ್ವಮೇಘದಲ್ಲಿದ್ದರೂ ವಾಚಕರ ಕುತೂಹಲಕ್ಕಾಗಿ ಒಂದೆರಡು ಸನ್ನಿವೇಶಗಳನ್ನು ಮಾತ್ರ ಇಲ್ಲಿ ಕೊಟ್ಟಿದೆಯೆಂದು ತಿಳಿಯಬೇಕು.

ಈ ಹಿಂದೆ ಸೂಚಿಸಿದ್ದಂತೆ ಉತ್ತರಮೇಘವು ವಿಪ್ರಲಂಭ ಶೃಂಗಾರದ ವರ್ಣನೆಗೆ ಮೀಸಲು. ಇದರ ವರ್ಣನೆಯಲ್ಲ ಕವಿಯು ಪರಮಾವಧಿಯನ್ನು ಮುಟ್ಟಿದ್ದಾನೆ ಎಂಬುದು ತಜ್ಞರ ಅಭಿಪ್ರಾಯ. ಪತಿವಿರಹದ ನಿಮಿತ್ತ ಯಕ್ಷನ ಸತಿಯು ಅನುಭವಿಸುತ್ತಿರಬಹುದೆಂಬ ವಿವಿಧ ದುಃಸ್ಥಿತಿಗಳನ್ನು ಊಹಿಸಿ ಕಣ್ಣಿಗೆ ಕಟ್ಟಿದಂತಿರುವ ಅವುಗಳ ವಿಷಯದಲ್ಲಿ ಕವಿಯ ವರ್ಣನೆ ಅಸದೃಶವಾದುದು. ಸಾಹಿತ್ಯರಂಗದಲ್ಲಿ ಮತ್ತಾವ ಕವಿಯೂ ಈ ದಿಕ್ಕಿನಲ್ಲಿ ಈ ಕವಿಯಷ್ಟು ಯಶಸ್ಸು ಗಳಿಸಿಲ್ಲವೆಂಬುದು ನಿಷ್ಪಕ್ಷಪಾತಿಗಳಾದ ವಿಮರ್ಶಕರ ಅಭಿಪ್ರಾಯ. ಪ್ರಿಯಪ್ರೇಯಸಿಯರಿಗೆ ವಿರಹದಲ್ಲುಂಟಾಗಬಹುದಾದ ಅವಸ್ಥೆಗಳು ಹತ್ತು ಬಗೆಯದೆಂದು ತಿಳಿಸಿ, ಅವುಗಳನ್ನು ಕ್ರಮವಾಗಿ,

ಶ್ಲೋ ॥ ದೃಕ್, ಮನಸ್ಸಂಗ, ಸಂಕಲ್ಪ ‡ ಜಾಗ್ರತಾ, ಕೃಶತಾಽರತಿಃ ।
ಹ್ರೀತ್ಯಾಗೋ- ನ್ಮಾದ ಮೂರ್ಛಾಂತಾಃ ‡ ಇತ್ಯನಂಗದಶಾ ದಶ॥

ಎಂಬ ಶಾಸ್ತ್ರವಚನದಂತೆ ಕ್ರಮವಾಗಿ 1. ದೃಕ್ (ಪ್ರಥಮ ದರ್ಶನ), 2. ಮನದಲ್ಲಿಯೇ ಮಿಲನ, 3. ಸಂಕಲ್ಪ— ಅಂದರೆ ಇಷ್ಟವ್ಯಕ್ತಿಯೊಡನೆ ಬೆರೆಯಲೇಬೇಕೆಂಬ ನಿರ್ಧಾರ. 4. ಜಾಗ್ರತಾ—ಅಂದರೆ ಮನದಿಚ್ಛೆ ನೆರವೇರುವವರೆಗೂ ಮನಃಕಷಾಯದಿಂದ ನಿದ್ರೆ ಬಾರದೆ ಸದಾ ಎಚ್ಚತ್ತಿರುವುದು, 5. ಕೃಶತಾ—ಅಂದರೆ ನಿದ್ರಾಹಾರಗಳಿಲ್ಲದುದರ ಫಲವಾಗಿ ದೇಹವು ಕೃಶವಾಗುವುದು, 6. ಅರತಿ—ಅಂದರೆ ಮತ್ತಾವುದರಲ್ಲಿಯೂ ಆಸಕ್ತಿ ತೋರದಿರುವುದು, 7. ಹ್ರೀತ್ಯಾಗ—ನಾಚಿಕೆ ತೊರೆದು ಮನದಿಚ್ಛೆಯನ್ನು ಅಶ್ಲೀಲವೆಂದು ಗಣಿಸದೆ ಬಾಯಲ್ಲಿ ನುಡಿಯುತ್ತಿರುವುದು. 8. ಉನ್ಮಾದ—ಅಂದರೆ ಬುದ್ಧಿ ಪಲ್ಲಟವಾಗಿ ಹುಚ್ಚು ಹಿಡಿದಂತೆ ವರ್ತಿಸುವುದು, 9. ಮೂರ್ಛೆ—ಅಂದರೆ ಪ್ರಜ್ಞೆ ತಪ್ಪುವುದು, ಮತ್ತು ಕಡೆಯಲ್ಲಿ 10. ಅಂತ—ಅಂದರೆ ಸಾವು, ಇವೆಲ್ಲವೂ ಹತ್ತು ಅನಂಗದಶಾ ಅಂದರೆ ಕಾಮಾವಸ್ಥೆಗಳು ಎಂಬುದು ಅನುಭವಸಿದ್ಧವಾದ ಶಾಸ್ತ್ರವಚನ. ಕವಿಯು ಇವುಗಳಲ್ಲಿ ಎಂಟವಸ್ಥೆಗಳನ್ನು ಯಕ್ಷನ ಊಹೆಯಂತೆ ಅವನ ಪ್ರೇಯಸಿಯಲ್ಲಿ ಆರೋಪಿಸಿ ಚಿತ್ರಿಸಿರುತ್ತಾನೆ. ಇವುಗಳ ವಿವರವನ್ನು ಈ ಮುಂದಿನ 'ಕಾವ್ಯವಸ್ತುವಿನ ಪಕ್ಷಿನೋಟ'ದಲ್ಲಿ ಕಾಣಿಸಿರುವುದರಿಂದ ಇಲ್ಲಿ ಅದನ್ನು ಲಂಬಿಸಿಲ್ಲ.

ಕಾವ್ಯಾಲಂಕಾರಗಳು :—ಈ ಸಣ್ಣ ಕೃತಿಯಲ್ಲಿ ಉಪಮಾ, ಉತ್ಪ್ರೇಕ್ಷೆ, ರೂಪಕ, ಅರ್ಥಾಂತರನ್ಯಾಸ ಲೋಕೋಕ್ತಿ ಮೊದಲಾದ ಹಲವಾರು ಅಲಂಕಾರಗಳು ವರ್ಣಿತವಾಗಿದ್ದರೂ 'ಉಪಮಾ ಕಾಳಿದಾಸಸ್ಯ' ಎಂಬಂತೆ ಬಿಂಬಪ್ರತಿಬಿಂಬದ ಹಾಗೆ ಪರಸ್ಪರ ಹೊಂದಿಕೆಯುಳ್ಳ ಉಪಮೆಗಳನ್ನು ಕೊಡುವುದರಲ್ಲಿ ಕಾಳಿದಾಸನು ಅಪ್ರತಿಮನೆಂಬ ಹೆಸರನ್ನು ಸ್ಥಿರಗೊಳಿಸುವಂತಹ ಉದಾಹರಣೆಗಳು ಈ ಕಾವ್ಯದಲ್ಲಿ ಅನೇಕವಿವೆ. ಅರ್ಥಾಂತರನ್ಯಾಸ ಲೋಕೋಕ್ತಿಗಳನ್ನು ಈ ಹಿಂದೆಯೇ ಬಹುವಾಗಿ ವಿವರಿಸಿದೆ. ಈ ಕಾವ್ಯದಲ್ಲಿ ಕವಿಯು ಉಪಯೋಗಿಸಿರುವ ಉಪಮಾನಗಳಲ್ಲಿ ಕೆಲವನ್ನು ಈ ಮುಂದೆ ಕೊಟ್ಟಿದೆ. ರಾಮಗಿರಿಯ ತಪ್ಪಲಿನಲ್ಲಿ ಯಕ್ಷನು ಮೊದಲು ನೋಡಿದ

ಕಾರ್ಮುಗಿಲು, 'ವಪ್ರಕ್ರೀಡಾಪರಿಣತ ಗಜವ. ಅಂದರೆ ಮಣ್ಣಿನ ದಿಬ್ಬವನ್ನು ದಂತಗಳಿಂದ ಗುದ್ದಲಿಸುವ ಆಟದಲ್ಲಿ ತೊಡಗಿದ ಆನೆಯಂತೆ, ಕಾಮನಬಿಲ್ಲು 'ರತ್ನಚ್ಛಾಯಾವ್ಯತಿಕರವ' ಅಂದರೆ ವಿವಿಧ ರತ್ನಗಳ ಕಾಂತಿಗಳು ಬೆರತು ಬೆಳಗುವಂತೆ. ಕಾರ್ಮುಗಿಲು ಕಾಮನಬಿಲ್ಲಿನಿಂದ ಅಲಂಕೃತವಾಗಿರಲು ನವಿಲು ಗರಿಯಿಂದಲಂಕೃತನಾದ ಗೋಪವೇಷದ ಬಾಲಕೃಷ್ಣನಂತೆ, ವಿಂಧ್ಯಪರ್ವತದ ತಪ್ಪಲಿನಲ್ಲಿ ಶೀಳೊಡೆದ ನರ್ಮದಾ ನದಿಯು ಆನೆಯಮೇಲಿನ ಅಲಂಕಾರ ಕ್ಕಾಗಿ ಅನುಗೊಳಿಸಿದ 'ಭಕ್ತಿಚ್ಛೇದ' ಅಂದರೆ ಶ್ರೀಗಂಧಲೇಪನದ ಬಿಳಿಯ ಪಟ್ಟಿಗಳಂತೆ, ಸಮಸ್ತ ರತ್ನರಾಶಿಗಳಿಗೆ ಆಕಾರವಾದ ಉಜ್ಜಯಿನೀ ಪಟ್ಟಣವು ನೀರೊಂದು ಮಾತ್ರವಿರದ ರತ್ನಾಕರ (ಸಮುದ್ರ) ದಂತೆ, ಕಾರ್ಮುಗಿಲು ಈಶ್ವರನ 'ಕಂಠಚ್ಛವಿ' ಅಂದರೆ ಕೊರಳಿನ ಕಪ್ಪಿನಂತೆ, ವಿರಹದಿಂದ ಸೊರಗಿದ ಯಕ್ಷಯುವತಿಯು, ಪೂರ್ವ ದಿಗಂತದಲ್ಲಿನ ಕಾಂತಿಗುಂದಿದ ಚಂದ್ರಕಳೆಯಂತೆ, ಅರೆಮರೆದ ಅಂದರೆ ಎಚ್ಚರ ಅಥವಾ ನಿದ್ರೆ ಇವೆರಡೂ ಇರದ ಯಕ್ಷ ಕಾಮಿನಿಯು. ಮೋಡದಿಂದ ಕೂಡಿದ ಹಗಲಿನಲ್ಲಿ ಅರಳದ ಇಲ್ಲವೇ ಮುಚ್ಚದ ಹೂವುಳ್ಳ 'ಸ್ಥಲಕಮಲಿನೀ' ನೆಲದಾವರೆಯ ಬಳ್ಳಿಯಂತೆ, ಪತಿಯನ್ನಗಲಿದ ಆ ಯಕ್ಷಕಾಂತೆ ಗಂಡುಹಕ್ಕಿಯನ್ನಗಲಿದ ಚಕ್ರವಾಕಿಯಂತೆ, ಜಡೆಗಟ್ಟಿದಜೋಲು ಕೂದಲಿನಿಂದ ಮುಚ್ಚಿದ ಯಕ್ಷಸುಂದರಿಯ ಮುಖದ ಕಾಂತಿ ಕಪ್ಪುಮೇಘ ದಿಂದಾವೃತವಾಗಿ ಕಳೆಗುಂದಿದ ಚಂದ್ರಮಂಡಲದಂತೆ, ಆ ಲಲನೆಯ ದೇಹವು ಹಿಮದ ಹೊಡೆತಕ್ಕೆ ಸಿಲುಕಿ ನಲುಗಿದ ಬೇರೆ ಬಗೆಯ ತಾವರೆಯಬಳ್ಳಿಯಂತೆ, (ಪತಿಯ ಸಂದೇಶವನ್ನು ಹೊತ್ತಂದ ಮೇಘವು ಯಕ್ಷಸುಂದರಿಯ ಬಳಿ ಸುಳಿ ಯಲು) ಆಕೆಯ ಎಡೆಗಣ್ಣದುರು, ಮೀನುಗಳ ಚಲ್ಲಾಟದಿಂದ ಅಲುಗುವ ಕರಿದಾವರೆಯ ಸೊಬಗಿನಂತೆ, ಜೀವನದಲ್ಲಿ ಸಂಭವಿಸುವ ಸುಖದುಃಖಗಳು ಕೆಳಮೇಲು ಸುತ್ತುತ್ತಿರುವ ಗಾಲಿಯ ಅಂಚಿನಂತೆ. ಹೀಗೆ ಹಲವಾರು ಅತ್ಯಂತ ಸಾಧುವಾದ ಉಪಮಾನಗಳು ಈ ಕಾವ್ಯದಲ್ಲಿ ಕಂಡುಬಂದಿವೆ.

ಉತ್ಪ್ರೇಕ್ಷಾಲಂಕಾರವೂ ಈ ಕಾವ್ಯದ ಕೆಲವೆಡೆಗಳಲ್ಲಿ ಹೇಳಲ್ಪಟ್ಟಿವೆ. ಉದಾಹರಣೆಗೆ, ಫಲಭರಿತವಾದ ಮಾಮರಗಳ ತಪ್ಪಲನ್ನುಳ್ಳ ಆಮ್ರಕೂಟ ಪರ್ವತದ ಮೇಲೆ ಕುಳಿತ ಕಾರ್ಮುಗಿಲು ಗಗನಚಾರಿಗಳ ದೃಷ್ಟಿಯಲ್ಲಿ ಭೂ

ದೇವಿಯ ತಿಣ್ಣ ಮೊಲೆಯ ಮೇಲಿರುವ ಚೂಚುಕವೋ ಎನ್ನುವಂತೆ, ಕಪ್ಪು ಮೇಘವು ಚರ್ಮಣ್ವತೀ ನದಿಯ ಹೊಳೆಹೊಳೆವ ತಿಳಿನೀರನ್ನು ಕುಡಿಯಲು ತೊಡಗಿದಾಗ ವೈಮಾನಿಕರ ನೋಟಕ್ಕೆ ಸ್ಥೂಲವಾದ ನೀಲಮಣಿಯಿಂದ ಮಧ್ಯದಲ್ಲಲಂಕೃತವಾದ ತೋರಮುತ್ತಿನ ಹಾರವೋ ಎಂಬಂತೆ, ಕಾರ್ಮುಗಿಲು ಬಿಳಿ ಹೊನಲಿನ ಗಂಗಾನದಿಯ ನೀರ್ಮೊಗೆಯಲಿಳಿದಾಗ ಯಮುನೆಯು ಗಂಗೆಯೊಡನೆ ಬೇರೆಡೆಯಲ್ಲಿ ಬೆರೆತುದೋ ಎಂಬಂತೆ, ಬೆಳ್ಳಗೆ ಹೊಳೆಯುವ ಕೈಲಾಸ ಪರ್ವತವು ಪ್ರತಿದಿನ ರಾಶಿಗೊಂಡ ಶಿವನ ಅಟ್ಟಹಾಸದಂತೆ ಮೇಘವು ರಜತ ಗಿರಿ ತಟದಲ್ಲಿ ಕುಳಿತಂದು ನೀಲವಸ್ತ್ರವನ್ನು ಹೆಗಲಮೇಲಿರಿಸಿದ ಬಲರಾಮನೋ ಎಂಬಂತೆ, ಮತ್ತು ಕೈಲಾಸದ ತಪ್ಪಲಿನಲ್ಲಿರುವ ಅಲಕಾಪುರಿ, ಅದರಡಿಯಲ್ಲಿ ಹರಿಯುವ ಬಿಳಿಹೊನಲ ಗಂಗಾನದಿ, ಈ ದೃಶ್ಯವು ಕಾಮಿಯು ದುಕೂಲವನ್ನುಟ್ಟ ಕಾಮಿನಿಯನ್ನು ತೊಡೆಯ ಮೇಲಿಟ್ಟುಕೊಂಡಿರುವನೋ ಎಂಬಂತೆ, ಒಳಗೆ ತಿಳಿನೀರ ಹನಿಗಳುಳ್ಳ ಕಾರ್ಮುಗಿಲು ಅಲಕಾಪುರಿಯ ಸೌಧಗಳ ಮೇಲೆ ಆವರಿಸಿರಲು ಮುತ್ತಿನ ಗೊಂಚಲಿಂದ ಅಲಂಕೃತವಾದ ಮುಂಗುರುಳುಳ್ಳ ಕಾಮಿನಿಯೋ ಎಂಬಂತೆ ಹೊಳೆಯುತ್ತಿತ್ತು. ಈ ವಿಧವಾದ ಹಲವಾರು ಉತ್ಪ್ರೇಕ್ಷೆಗಳಿಂದಲಂಕೃತವಾಗಿ ತನ್ನ ಸೊಬಗನ್ನು ಹೆಚ್ಚಿಸಿ ಕೊಂಡಿರುವುದು ಈ ಕೃತಿಲಲನೆ.

ಈ ಬಗೆಯಲ್ಲಿ ಅಪರಿಮಿತವಾದ ಮೆಚ್ಚಿಗೆಗೆ ಪಾತ್ರವಾದ ಈ ಕಾವ್ಯದಲ್ಲಡಗಿರುವ ವಸ್ತುನಿರ್ದೇಶನದ ನಿರೂಪಣಾಕ್ರಮವನ್ನು ಕವಿಯ ಮಾರ್ಗವನ್ನನುಸರಿಸಿ ಸಂಗ್ರಹವಾಗಿ ಮುಂದಿನ ಪುಟಗಳಲ್ಲಿ ನಿರೂಪಿಸಲಾಗಿದೆ.

ಭಾಗ – ೨

ಕಾವ್ಯವಸ್ತು ನಿರ್ದೇಶನದ ಹಕ್ಕಿನೋಟ

ಭಾರತೀಯ ಇತಿಹಾಸಗಳಂತೆ 'ಕುಬೇರ'ನೆಂಬುವನು ಉತ್ತರದ ದಿಕ್ಪಾಲಕ. ಈತನು ದೇವಯೋನಿಯಾದುದರಿಂದ ಅಮರ. ಅಲ್ಲದೇ ಮಹಾಪದ್ಮವೇ ಮೊದಲಾದ ನವವಿಧ ನಿಧಿಗಳಿಗೆ ಒಡೆಯನಾಗಿ 'ಧನಪತಿ' ಎಂಬ ಹೆಸರು ಗಳಿಸಿದವ. ಪಕ್ಕದ ಈಶಾನ್ಯ ದಿಕ್ಪತಿಯೆನೆಸಿದ ಈಶಾನ(ಶಿವ)ನಿಗೆ ಗೆಳೆಯ. ಅಲಕಾನಗರಿಯೇ ಈತನ ರಾಜಧಾನಿ. ಯಕ್ಷರೇ ಈತನ ಪ್ರಜೆಗಳು. ಅದು ದೇವಭೂಮಿಯಾದ ಕಾರಣ ತಮ್ಮೊಡೆಯನಂತೆಯೇ ಯಕ್ಷರೂ ಕೂಡ ಮುಪ್ಪು ಸಾವುಗಳಿರದ ಅಮರರೇ ಹೌದು. ಅಲ್ಲಿನ ಪೆಣ್ಗಂಡುಗಳೆಲ್ಲರೂಸದಾ 'ಯುವತಿ–ಯುವಕರೇ' ಅವರೆಲ್ಲ ಅಷ್ಟೈಶ್ವರ್ಯಸಂಪನ್ನರು ಮಾತ್ರವಲ್ಲದೆ ಸಮಸ್ತ ಸುಖಭೋಗ ಸಾಮಗ್ರಿಗಳನ್ನು ಸದಾ ಅನುಭವಿಸುತ್ತಿರುವವರು. ದಾಂಪತ್ಯಸುಖವೇ ಇವರ ಸೌಖ್ಯದ ಪರಮಾವಧಿ. ಅವರ ಇಷ್ಟಾರ್ಥವನ್ನೆಲ್ಲ ನೆರವೇರಿಸಬಲ್ಲ ಮಂದಾರ ಪಾರಿಜಾತ ಮೊದಲಾದ ಕಲ್ಪವೃಕ್ಷಗಳಿಂದ ತುಂಬಿರುವ 'ಚೈತ್ರರಥ'ವೇ ಅವರ ಕೇಳೀವನ. ಭೂಮಿಯಲ್ಲಿದ್ದಂತೆ ಋತುಭೇದವೇ ಇಲ್ಲದಿರುವುದರಿಂದ ಸಮಸ್ತ ಋತುಗಳಲ್ಲಿಯೂ ದೊರಕುವ ಫಲಪುಷ್ಪಗಳು ಅಲ್ಲಿನ ವೃಕ್ಷಗಳಲ್ಲಿ ದೊರಕುತ್ತವೆ. ಹೀಗಿರಲು ಇವರಿಗೆ ದುಃಖವೆಲ್ಲಿಯದು? ರತಿಕೇಳಿಯೇ ಪರಮಸುಖವೆಂದು ಗಣಿಸಿರುವ ಅವರಿಗೆ ಗಂಡಹೆಂಡಿರ ಅಗಲಿಕೆ ಅಕಸ್ಮಾತ್ ಒದಗಿತೆಂದರೆ ಅದೇ ಅವರಿಗಾಗುವ ನರಕಯಾತನೆ. ದುರ್ದೈವದಿಂದ ಇಂತಹ ಸನ್ನಿವೇಶಕ್ಕೊಳಗಾಗಿ ವಿರಹವೇದನೆಯಿಂದ ನರಳುತ್ತಿರುವ ಯಕ್ಷದಂಪತಿಯರ ಮನೋಭಾವದ ಚಿತ್ರಣವೇ ಈ ಕಾವ್ಯದ ಕಥಾವಸ್ತು. ಕವಿಯು ಅದನ್ನು ಬಣ್ಣಿಸಿರುವ ಬಗೆ ಈ ಮುಂದಿನಂತಿದೆ :–

ಕುಬೇರನ ಊಳಿಗದವ ಒಬ್ಬ ಯಕ್ಷ. ಒಡಯನು ತನಗೆ ವಹಿಸಿದ್ದ ಕರ್ತವ್ಯ ಕರ್ಮವನ್ನು ಅವನು ಉಪೇಕ್ಷಿಸಿದ ಕಾರಣ ಕುಬೇರನ ಕೋಪಕ್ಕೆ

ಪಾತ್ರನಾಗಿ. 'ಒಂದು ವರ್ಷದ ದಿನಗಳು ನೀನು ನಿನ್ನ ಪ್ರೇಯಸಿಯನ್ನು ಅಗಲಿರು' ಎಂಬ ಕ್ರೂರಶಿಕ್ಷೆಗೆ ಒಳಗಾಗಿ ದೇವಭೂಮಿಯನ್ನು ತೊರೆದು ಭೂಭಾಗದಲ್ಲಿನ ಭರತ ಖಂಡದ ದಕ್ಷಿಣ ದಿಗ್ಭಾಗದಲ್ಲಿರುವ 'ರಾಮಗಿರಿ ಇಲ್ಲವೆ 'ಚಿತ್ರಕೂಟ' ಎಂಬ ಪರ್ವತದಲ್ಲಿ ಋಷ್ಯಾಶ್ರಮಗಳೆಡೆಯಲ್ಲಿ ಅವನಿಗೆ ವಾಸವು ಏರ್ಪಟ್ಟಿತು, (ಇಲ್ಲಿ ಕವಿಯು ಯಕ್ಷನು ಯಾವ ಬಗೆಯ ಕರ್ತವ್ಯಲೋಪ ಮಾಡಿದನೆಂಬ ಸೂಚನೆ ಕೊಟ್ಟಿಲ್ಲ. ಬಹುಶಃ ಇದು ತನ್ನ ಈ ಕಾವ್ಯರಚನೆಗೆ ಅನವಶ್ಯಕವೆಂದು ಬಗೆದಿರಬಹುದು) ಆ ಆಶ್ರಮಗಳು 'ಜನಕತನಯಾ-ಸ್ನಾನ -ಪುಣ್ಯೋದಕ' ಗಳಿಂದಲೂ 'ರಘುಪತಿಪದಗಳಿಂದಂಕಿತವಾದ ಮೇಖಲೆ' (ತಪ್ಪಲು) ಗಳಿಂದಲೂ ಪವಿತ್ರವೆನಿಸಿದವುಗಳಾದುದರಿಂದ ಮುನಿಜೀವನಕ್ಕೆ ಅಂದರೆ ಇಂದ್ರಿಯನಿಗ್ರಹ ಮಾಡಿ ವೈರಾಗ್ಯದಿಂದ ವರ್ತಿಸುವವರಿಗೆ ಸುಖ ಸನ್ನಿವೇಶಗಳೇ ವಿನಾ ಕಾಮಕೇಳಿಗೆ ಮನಗೊಟ್ಟು, ಪ್ರೇಯಸಿಯ ಅಗಲಿಕೆ ಗಾಗಿ ಸದಾ ದುಃಖಿಸುತ್ತಿರುವ ಯಕ್ಷನಿಗೆ ತಕ್ಕುದಲ್ಲ. ಈ ಯಕ್ಷಯುವಕನು ಪತ್ನೀವಿರಹ ದುಃಖಕ್ಕೊಳಗಾಗಿ ನಿದ್ರಾಹಾರಗಳನ್ನು ತೊರೆದ ಕಾರಣದಿಂದ ಸೊರಗುತ್ತ. ತನ್ನ ಪ್ರೇಯಸಿಯನ್ನು ಸೇರಬೇಕೆಂಬ ಹೆಬ್ಬಯಕೆಗೆ ಬಾಯ್ಬಿ ಬಿಡುತ್ತ ಬಹುಕಷ್ಟದಿಂದ ಎಂಟುತಿಂಗಳದಿನಗಳನ್ನು ಸವೆಸಿದನು. ಅಂದರೆ ವರ್ಷ ದಲ್ಲಿನ ಕಾರ್ತಿಕಮಾಸದಿಂದ ಆಷಾಢಮಾಸದವರೆವಿಗೂ ವಿರಹದಿಂದ ಕೊರು ಗುತ್ತಾ ದಿನಗಳೆದನು. ಬೇಸಗೆಯು ಕೊನೆಗೊಂಡು ಮಳೆಗಾಲದ ಶ್ರಾವಣ ಮಾಸ ಸಮೀಪಿಸುವ ಸಮಯ. ಅದು ಮುಗಿಲೊಡ್ಡುಗಳು ಬೆಟ್ಟತಪ್ಪಲು ಗಳಲ್ಲಿ ನಿರ್ಮಿತವಾಗುವ ಕಾಲ. ಹೀಗಿರಲು ಒಂದು ದಿನ ಆ ಕಾಮಿಯಾದ ಯಕ್ಷನು ಇಂತಹ ಮುಗಿಲೊಂದನ್ನು ಚಿತ್ರಕೂಟದ ತಪ್ಪಲಿನಲ್ಲಿ ಕಂಡ. ಒಡನೆಯೇ ಅವನು ಚೇತನಾಚೇತನಗಳ ಭೇದವನ್ನು ಗಣಿಸದೆ "ಆಗಸದ ಮೂಲಕ ಹಾರಿ ಹೋಗಬಲ್ಲದು ಈ ಮುಗಿಲು. ಇದರೊಡನೆ ನಾನು ನನ್ನ ನಲ್ಲೆಗೆ ಕ್ಷೇಮವಾರ್ತೆಯನ್ನು ಕಳುಹಬಾರದೇಕೆ ?" ಎಂದು ಬಗೆದು ಅಚೇತನ ವಾದ ಅದರಲ್ಲಿ ಪಟುಕರಣಗಳನ್ನುಳ್ಳ ಪುರುಷಶ್ರೇಷ್ಠನ ಚೇತನವನ್ನು ಅಳವಡಿಸಿ, ಅದನ್ನು ತಾನಿರುವೆಡೆಗೆ ಬಂದ ಅತಿಥಿಯೆಂದೇ ಭಾವಿಸಿ, ಅಲ್ಲಿದ್ದ ಬೆಟ್ಟಮಲ್ಲಿಗೆ ಹೂಗಳನ್ನು ತರಿದು, ಅದನ್ನು ಆದರದಿಂದ ಸತ್ಕರಿಸಿ, ಅದಕ್ಕೆ ಸ್ವಾಗತವನ್ನು ಬಯಸಿ ಉದಾರಿಸಿದನು. ಇಂತಹದು ಅಸಂಭವವೆಂದು ಶಂಕೆ

ಸುವವರ ಸಮಸ್ಯೆಯನ್ನು ಬಗೆಹರಿಸಲು ಕವಿಯು ಹೀಗೆಂದು ತಿಳಿಯ ಹೇಳಿದ್ದಾನೆ: ಸಂಸ್ಕೃತ ಭಾಷೆಯಲ್ಲಿರುವ ಕವಿಯು ಹೇಳಿರುವ ಮಂದಾಕ್ರಾಂತ ವೃತ್ತದ ಕನ್ನಡಾನುವಾದವನ್ನು ಭಾಮಿನೀ ಷಟ್ಪದಿಯ ರೂಪದಲ್ಲಿ ಹೀಗೆ ಹೇಳಬಹುದು:-

ಮಿಂಚು ಪೊಗೆ ನೀರ್ಗಾಳಿಯಿವುಗಳ।
ಸಂಚಯದ ಮುಗಿಲೆತ್ತ ? ಕೈಕಾಲ್-।
ಹೊಂಚಿ ಬಂದಿಹ ಜೀವಿಗಳು ತಾವೊಯ್ವ ನುಡಿಯೆತ್ತ ॥
ಮುಂಚೆಯಿದ ಬಗೆಯದೆಯೆ ಯಕ್ಷನು ।
ಮಿಂಚಿದೆಣಿಕೆಯಲದಕೆ ಬಾಯ್ದೆರ-।
ದಂ ಚರಾಚರಗಳಲಿ ಕಾಮಾಂಧರಿಗೆ ಮತಿ ಬರದೌ ॥

ಎಂಬ ಅನುಭವಸಿದ್ಧವಾದ ಲೋಕೋಕ್ತಿಯ ಮೂಲಕ ಕವಿಯು ಈ ಶಂಕೆಯನ್ನು ಬಗೆಹರಿಸುತ್ತಾನೆ. ಕವಿ ವಾಲ್ಮೀಕಿಕೃತವಾದ ಶ್ರೀಮದ್ರಾಮಾಯಣದಲ್ಲಿ ರಾವಣನಿಂದಪಹೃತಳಾದ ಸೀತಾದೇವಿಯ ವಿರಹದಿಂದ ಪ್ರೈಮರೆತ ಶ್ರೀರಾಮನು ಚೇತನಾಚೇತನಗಳ ಪರಿವೆಯೇ ಇಲ್ಲದೆ, ದಂಡಕಾರಣ್ಯದಲ್ಲಿನ ನದಿ ಬೆಟ್ಟ ಗಿಡ ಮರ ಬಳ್ಳಿಗಳೇ ಮೊದಲಾದುವುಗಳನ್ನುದ್ದೇಶಿಸಿ ವಿಲಪಿಸಿದ ಚಿತ್ರವೇ ಬಹುಶಃ ಈ ಕವಿಯ ಮನೋ ದೃಷ್ಟಿಯ ಮುಂದೆಇದ್ದಿರಬಹುದು ಈ ಮುಂದೆ ಕಾಮಾಂಧನಾದ ಯಕ್ಷನು ಕಾರ್ಮುಗಿಲನ್ನುದ್ದೇಶಿಸಿ ನುಡಿಯುವ ಮಾತಿನ ಸರಣಿಯನ್ನು ಕವಿಯು ಕಾವ್ಯದಲ್ಲಿ ನಿರೂಪಿಸಿರುವಂತೆ ಅವನ ಬಾಯಿಂದಲೇ ಕೇಳವ:-

"ಮಾನ್ಯ ಮೇಘರಾಜ ! ಕೇಳು. ಸುಪ್ರಸಿದ್ಧವಾದ ಪುಷ್ಕಲ, ಆವರ್ತಕವೆಂಬ ಮೇಘಶ್ರೇಷ್ಠರಿಂದಿಳಿದುಬಂದ ಸದ್ವಂಶದಲ್ಲಿಯೇ ನಿನಗೆ ಹುಟ್ಟು. ಅಲ್ಲದೆ ನೀನು ಇಂದ್ರದೇವನ ಪ್ರಧಾನಪುರುಷ ಮತ್ತು ಬಯಸಿದ ರೂಪವನ್ನು ತಾಳಬಲ್ಲ ಕಾಮರೂಪಿ. ಇಂತಹ ಸತ್ಕುಲಪ್ರಸೂತನಾದ ನಿನ್ನಂತಹ ಶ್ರೇಷ್ಠವ್ಯಕ್ತಿಯಲ್ಲಿ ಇದೋ ನನ್ನ ಬೇಡಿಕೆ ಏಕೆಂದರೆ 'ಗುಣವರನೊಳೊದಗದ ಭಿಕ್ಷೆಯು ಧಮನೊಳೊದಗಿದೊಡಮುಹೇಯಂ' ಅಂದರೆ ನೀಚನ ಕೊಡುಗೆಗೆ ಕೈ ಚಾಚುವುದಕ್ಕಿಂತಲೂ ಗುಣಿಯಿಂದ ಇಲ್ಲವನಿಸಿಕೊಳ್ಳುವುದು ಎಷ್ಟೋ

ಅಲಂಕರಿಸುತ್ತವೆ. ಆಗ ನೀನು ನವಿಲುಗರಿಯಿಂದಲಂಕೃತನಾದ ಗೋಪವೇಷದ ಕೃಷ್ಣನ ಮನೋಹರವಾದ ದೇಹದ ಚೆಲುವಿನಂತೆ ಕಾಣ್ಬರುತ್ತೀಯೇ ನಿನ್ನ ಹುಟ್ಟು, ಕೃಷಿಗೆ ಆಧಾರವಾದುದರಿಂದ ಜನಜೀವನವು ನಿನ್ನ ಕೈಯಲ್ಲಿದೆಯೆಂಬ ಭಾವದಿಂದ ರೈತರ ಹೆಂಗಳು ನಿನ್ನನ್ನು ಅತ್ಯಾದರದಿಂದ ದಿಟ್ಟಿಸುತ್ತಾರೆ. ಆ ಕಾರಣ ನೀನು ಉತ್ತು ಸಿದ್ಧವಾಗಿರುವ 'ಮಾಲಾ' ಎಂಬ ಪ್ರಸ್ಥಭೂಮಿಯ ಮೇಲೆ ಮಳೆಗರೆದು ಸ್ವಲ್ಪ ಪಡುವಣಕ್ಕೆ ಸರಿದು, ಮತ್ತೆ ಉತ್ತರದಿಕ್ಕಿಗೆ ಪಯಣಿಸು. ಹಾದಿಯಲ್ಲಿ 'ಆಮ್ರಕೂಟ'ವೆಂಬ ಪರ್ವತ ಸಿಗುತ್ತದೆ. ತಪ್ಪಲುಗಳಲ್ಲಿ ಕಾಡುಮಾವುಗಳು ತುಂಬಿದ್ದು ನೀ ಬಂದ ಕಾಲದಲ್ಲಿ ಅವು ಫಲಿತವಾಗುವುವಾದ ಕಾರಣ ಈ ಅನ್ವರ್ಥನಾಮ ಆ ಪರ್ವತಕ್ಕಿವೆ. ಬೇಸಿಗೆಯಲ್ಲಿ ಅದರ ಸುತ್ತಲಿರುವ ವನಗಳಲ್ಲುಂಟಾದ ಕಾಡ್ಗಿಚ್ಚನ್ನು ಧಾರಾಧಾರೆಯಾಗಿ ಸುರಿವ ನಿನ್ನ ಮಳೆಯಿಂದ ತಂಪಾದ ಉಪಕೃತಿಗೆ ಪ್ರತಿಯಾಗಿ ಆ ಪರ್ವತವು ನಿನ್ನನ್ನು ಆದರದಿಂದ ತಲೆಮೇಲೆ ಹೊತ್ತು ನಿನ್ನ ಬಳಲಿಕೆಯನ್ನು ಕಳೆಯುತ್ತದೆ. ಅಲ್ಲಿಂದ ಮುಂದೆ ಹೋದರೆ ವಿಂಧ್ಯಪರ್ವತದ ಪಾದದಲ್ಲಿ ಸೀಳುಸೀಳಾಗಿ ಹರಿದು ಬರುವ ನರ್ಮದಾ ನದಿಯನ್ನು ನೀನು ಕಾಣುವಿ. ಅದರ ನೀರು ನೇರಳೆಯ ಹೊದರಿನಲ್ಲಿ ಹಾದುಬರುವುದರಿಂದ ಮತ್ತು ತನ್ನಲ್ಲಿ ಮಿಂದ ಆನೆಗಳ ಮದೋದಕದಿಂದ ಬೆರೆತು ಒಗರುಗೊಂಡ ಅದರ ನೀರನ್ನು ನೀನು ಮನಸಾರೆ ಹೀರಿದೆಯೆಂದರೆ ವಾತಬಾಧೆಯು ನಿನಗಿರದು. (ಇಂತಹ ನೀರು ವಾತರೋಗವನ್ನು ಹಿಮ್ಮೆಟ್ಟಿಸುವುದೆಂಬುದು ಕವಿಯ ವೈದ್ಯಕೀಯ ಭಾವ) ಈ ನೀರನ್ನು ಹಾದಿಯಲ್ಲಿ ಸಿಕ್ಕುವ ನೀಪ ಮತ್ತು ಕದಂಬ ವೃಕ್ಷಗಳ ಬೆಳಸಿಗಾಗಿ ಮಳೆಯ ರೂಪದಲ್ಲಿ ಸುರಿಸಿ, ಆಗಸದಲ್ಲಿ ಮುಂಬಯಣ ಬೆಳಸಿದಂದು ವಿಮಾನದಲ್ಲಿ ಕುಳಿತು ಚಾತುರ್ಯದಿಂದ ನೀರುಹನಿಗಳನ್ನು ಕುಡಿವ ಜಾತಕಗಳನ್ನೂ, ಸಾಲ್ಗಟ್ಟಿ ಬರುವ ಬೆಳ್ವಕ್ಕಿಗಳನ್ನೂ, ಆಶ್ಚರ್ಯದಿಂದ ಕೈಯಿಟ್ಟು ತೋರುವ ಸಿದ್ಧಾಂಗನೆಯರು ನಿನ್ನ ಮೊಳಗಿಗೆ ಚಕಿತರಾಗಿ ತಮ್ಮ ಪತಿಗಳನ್ನು ಬಿಗಿದಪ್ಪುತ್ತಿರಲು ಆ ಸುಖವನ್ನು ಗಳಿಸಿಕೊಟ್ಟ ನಿನ್ನನ್ನು ಸಿದ್ಧಪುರುಷರು ಬಹುವಾಗಿ ಗೌರವಿಸುವರು. ಮೇಘ ಶ್ರೇಷ್ಠ ನೀನು ಆತುರದಿಂದ ಮುಂದುವರಿಯಲು ಯತ್ನಿಸಿದರೂಕೂಡ ಹಾದಿಯಲ್ಲಿನ ಪರ್ವತಗಳಲ್ಲಿ ನಿನ್ನನ್ನು ಕಂಡು ಮನಪುಬ್ಬಿ ನವಿಲುಗಳು ಕೇಕಾಧ್ವನಿಗಳಿಂದ ಸ್ವಾಗತಿಸುತ್ತಿರಲು

ಅವುಗಳನ್ನು ನಿನ್ನ ಮೊಳಗಿನಿಂದ ಸ್ವೀಕರಿಸುವುದರಲ್ಲಿ ಕಾಲ ವಿಳಂಬ ವಾಗುವುದು ಅನಿವಾರ್ಯ. ಆ ಮುಂದೆ ನೀನು ದಶಾರ್ಣ ದೇಶದ ಮೂಲಕ ಹಾದುಹೋಗಬೇಕಾಗಿದೆ. 'ವಿದಿಶಾ' ಎಂಬುದು ಅದಕ್ಕೆ ರಾಜಧಾನಿ. ಆ ನಗರದ ಸುತ್ತಲೂ ನೀನು ಬಂದಂದು ಮೊಗ್ಗರಳಿ ಹೂವಾಗಿ ಬಿಳಿ ಬಣ್ಣದಿಂವ ಬೆಳಗುವ ಕೇದಿಗೆಯ ಪೊದೆಗಳನ್ನೂ, ಹೊಸದಾಗಿ ಕಾಗೆಗಳು ಕಟ್ಟುತ್ತಿರುವ ಗೂಡುಗಳಿಂದ ತುಂಬಿದ ಸಾಲ್ಮರಗಳನ್ನೂ, ಹಂಸಗಳ ಸಾಲುಗಳಿಂದ ಮೆರೆಯುತ್ತಿರುವ ಕೊಳಗಳನ್ನೂ ಮತ್ತು ಕಪ್ಪು ಹಣ್ಣುಗಳಿಂದ ತುಂಬಿದ ನೇರಳೆ ಮರಗಳನ್ನೂ ಕಾಣಬಹುದು. ಆ ನಗರದ ಬಳಿಯಲ್ಲಿ ಹರಿಯುತ್ತಿರುವ ವೇತ್ರಾವತೀ ನದಿಯ ನೀರನ್ನು ನೀನು ಮನಸಾರೆ ಕುಡಿದು ಅಲ್ಲಿಂದ ಮುಂದಿನ ನೀಚೈ ಎಂಬ ಪರ್ವತವನ್ನು ಸೇರಿ ಸ್ವಲ್ಪ ವಿಶ್ರಮಿಸಿಕೊಳ್ಳು. ನಿನ್ನ ಸಂಪರ್ಕ ವಾದೊಡನೆಯೇ ಮೈನವಿರೆದ್ದಂತೆ ಆ ಬೆಟ್ಟದಲ್ಲಿನ ಕದಂಬವೃಕ್ಷಗಳು ಹೂವ ರಳಿ ಮೆರೆಯುವುವು ಮಾತ್ರವಲ್ಲದೆ ಅಲ್ಲಿನ ಗುಹೆಗಳು ಪಟ್ಟಣಿಗರಿಗೆ ಪಣ್ಯ ಸ್ತ್ರೀಯೊಡನೆ ರತಿಕೇಳಿಯ ಸುಖವನ್ನೊದಗಿಸುವ ದೃಶ್ಯವನ್ನು ತೋರುವುವು. ಆ ಬಳಿಕ ನದೀತೀರದ ಉದ್ಯಾನವನಗಳಿಗಾಗಿ ಮಳೆಗರೆದು, ಬಿಸಿಲಿನಲ್ಲಿ ಹೂಗೊಯ್ಯುವ ಹೆಂಗಳ ಮುಖದ ಬೆವರನ್ನು ನಿನ್ನ ನೆಳಲಿನಿಂದಾರಿಸಿ ಅವರ ಪ್ರೇಮಕ್ಕೆ ಪಾತ್ರನಾಗು !

"ಮೇಘೋತ್ತಮ ! ಉತ್ತರ ದಿಕ್ಕಿಗೆ ನೇರವಾಗಿ ಹೋಗುತ್ತಿರುವ ನಿನ್ನ ಹಾದಿ ಸ್ವಲ್ಪ ಬಳಸಾದರೂ ಕೂಡ ಉಜ್ಜಯಿನೀ ಪಟ್ಟಣದ ಉಪ್ಪರಿಗೆ ಮನೆಗಳಲ್ಲಿನ ವಿಲಾಸಿನಿಯರ ಕಡೆಗಣ್ಣ ನೋಟದ ಸೊಗಸನ್ನು ಆನಂದಿಸ ದಿದ್ದರೆ ನೀನು ಮನರಂಜನೆಯ ಲಾಭವನ್ನು ಕಳೆದುಕೊಂಡಂತೆಯೇ ಸರಿ. ಅಲ್ಲಿಗೆ ಹೋಗುವ ಹಾದಿಯಲ್ಲಿ ನಿರ್ವಿಂಧ್ಯಾ ನದಿ ಸಿಗುತ್ತದೆ. ಅದು ನಿನ್ನ ವಿರಹದಿಂದ ಸೊರಗಿದ ಪ್ರೇಯಸಿಯಂತೆ. ಅಲೆಗಳ ಹೊಡೆತದಿಂದ ದನಿಗೈವ ಹಂಸದ ಸಾಲುಗಳೇ ವಿಲಾಸಿನಿಯ ಹೆಜ್ಜೆಯ ಡಾಬಿನ ಘಲ್‌ಘಲ್ ಶಬ್ದ. ನೀರು ಧುಮ್ಮಿಕ್ಕುವೆಡೆಗಳಲ್ಲಾಗುವ ಸುಳಿಗಳೇ ಹೊರದೋರುವ ಅದರ ನಾಭಿ ಗಳು.ಈ ವಿಲಾಸಗಳ ಮೂಲಕ ಪ್ರಿಯನಾದ ನಿನ್ನನ್ನು ಸ್ವಾಗತಿಸುತ್ತಿದೆಯಾಗಿ. ದಂಡೆಗಳಲ್ಲಿನ ಹಣ್ಣೆಲೆಗಳುದುರಿ ಬಿಳಿಚಾದ ತನ್ನ ಮುಖದಿಂದ ವಿರಹದುಃಖ

ವನ್ನು ಹೊರದೋರುತ್ತಿರಲು, ಮಳೆಗರೆದು ಅದರ ಕೃಶತ್ವವನ್ನು ಹೋಗ ಲಾಡಿಸಬೇಕಾದುದು ನಿನ್ನ ಧರ್ಮ. ಆ ಬಳಿಕ ಅವಂತೀ ದೇಶದಲ್ಲಿ ಹಾದು, ಆದಕ್ಕೆ ರಾಜಧಾನಿಯೆನಿಸಿದ ಸರ್ವಸಂಪತ್ಸಮೃದ್ಧವೆನಿಸಿದ ವಿಶಾಲಾ ಅಂದರೆ ಉಜ್ಜಯಿನೀ ನಗರಿಯನ್ನು ಸೇರು. ಇದು ಭೂಲೋಕದ ಸ್ವರ್ಗವಿದ್ದಂತೆ, ಪಕ್ಕದಲ್ಲಿ ಹರಿವ ಸಿಪ್ರಾ ನದಿಯ ತಂಗಾಳಿಯು ಅಲ್ಲಿನ ವಿಲಾಸಿಗಳ ರತಿಖೇದ ವನ್ನು ಕಳೆದು ಅವರ ಯೌವನಕ್ಕೆ ಮತ್ತಷ್ಟು ಪುಷ್ಟಿ ಕೊಡುತ್ತದೆ. ನವರತ್ನ ಗಳಿಂದ ಭರಿತವಾದ ಆ ನಗರವು ನೀರಿಲ್ಲದ ರತ್ನಾಕರವನ್ನು ಹೋಲುತ್ತದೆ. ಈ ನಗರವನ್ನಾಳುತ್ತಿದ್ದ ಮಹಾಸೇನನೆಂದು ಖ್ಯಾತಿಗೊಂಡ ಪ್ರದ್ಯೋತನನ ಮಗಳಾದ ವಾಸವದತ್ತೆಯನ್ನು ವತ್ಸರಾಜನಾದ ಉದಯನನು ಅಪಹರಿಸಿದ ಸ್ಥಳವು ಇದೇ. ಚಿನ್ನದ ತಾಳೇವನಗಳಿದ್ದುದು ಈ ರಾಜನಿಗೆ ಮಾತ್ರ. ನಲಗಿರಿಯೆಂಬ ಲೋಕೋತ್ತರವಾದ ಗಜಕ್ಕೆ ಹುಚ್ಚು ಹಿಡಿದು ದೊಡ್ಡ ಕಲ್ಗಂಭವನ್ನು ಕಿತ್ತೊಗೆದುದು ಇಲ್ಲಿಯೇ. ಸೂರ್ಯನ ತೇರಕುದುರೆ ಗಳಂತೆ ಇಲ್ಲಿನ ಕುದುರೆಗಳು ಹಸಿರು ಬಣ್ಣದವು. ಬೆಟ್ಟಕೆಣೆಯಾದ ಆನೆಗಳೂ, ರಾವಣನ ಕತ್ತಿಯೆನಿಸಿದ ಚಂದ್ರಾಸ್ತ್ರವನ್ನು ಕೂಡ ಎದುರಿಸಿದ ನಿಲ್ಲಬಲ್ಲ ಅತಿಪರಾಕ್ರಮಿಗಳಾದ ಕತ್ತಿವರಸೆಯ ಯೋಧರೂ ಈ ರಾಜನ ಬಳಿಯಲ್ಲಿ ದ್ದರು ಎಂಬ ಕಥೆಗಳು ಆ ನಗರದಲ್ಲಿ ಪ್ರಚಾರದಲ್ಲಿವೆ. ಮುಗಿಲೆ! ನೀನು ಆ ನಗರದ ಉಪ್ಪರಿಗೆಯೊಂದರಮೇಲೆ ಕುಳಿತು ಗಣಕ್ಕೆಗಳಿಂದ ಹೊರಹೊರಟ ಧೂಪಗಳ ಧೂಮದಿಂದ ನಿನ್ನ ಮೈಬೆಳೆಸಿ ಅಲ್ಲಿನ ಸಾಕು ನವಿಲುಗಳ ಕುಣಿತ ದಿಂದ ಮನರಂಜನೆಯನ್ನು ಪಡೆದು. ಸಂಜೆಯ ಸಮಯದಲ್ಲಿ ಆ ನಗರದಲ್ಲಿನ ಚಂಡಿಕೇಶ ದೇವಾಲಯದಲ್ಲಿನ 'ಮಹಾಕಾಳ'ನೆಂಬ ದೇವನಿಗೆ ನಿನ್ನ ಸೇವೆ ಸಲ್ಲಿಸಲೋಸುಗ ಆದರ ಮಹಾದ್ವಾರದ ಗೋಪುರದ ಮೇಲೆ ಕುಳಿತು, ನೃತ್ಯ ಸೇವೆ ಸಲ್ಲಿಸುತ್ತಿರುವ ನರ್ತಕಿಯರ ದಣಿವನ್ನು ನಿನ್ನ ತಂಪಾದ ತುಂತುರಿನಿಂದ ಕಳೆದು ಅವರ ಕಣ್ಣೋಸೆಯ ಮೂಲಕ ಮಹಾಕಾಳನ ಅನುಗ್ರಹವನ್ನು ಗಳಿಸಿ ಸಂಧ್ಯಾಪೂಜೆಯಲ್ಲಿ ನಿನ್ನ ಮೊಳಗಿನಿಂದ ಭೇರಿನಾದದ ಸೇವೆ ದೇವನಿಗೆ ಸಲ್ಲಿಸು ಅಲ್ಲದೆ, ಕಪ್ಪಾಗಿರುವ ನಿನ್ನನ್ನು ಸಂಜೆಗೆಂಪಿನ ಸೂರ್ಯರಶ್ಮಿಗಳು ಬೆಳಗಿಸಲು ನೆತ್ತರು ಸುರಿವ ಗಜಚರ್ಮದಂತೆ ಕಂಡುಬರುವ ನಿನ್ನನ್ನು ಕಂಡು ಶಿವನಿಗೆ ಭೀಕರವಾದ ನೃತ್ಯದಾಸೆಯನ್ನು ತೊಲಗಿಸುವುದರ ಮೂಲಕ ಪಾರ್ವತೀ

ದೇವಿಯ ಅನುಗ್ರಹವನ್ನೂ ಪಡೆ. ಮುಗಿಲೊಡೆಯ! ಆಗಸದಲ್ಲಿ ನೀನು ದಟ್ಟವಾಗಿ ತುಂಬಿರಲು ಆ ಕಾಳರಾತ್ರಿಯಲ್ಲಿ ಅಭಿಸಾರಿಕೆಯರು ಉಪಪತಿಗಳಿರುವ ಸಂಕೇತಸ್ಥಾನಗಳಿಗೆ ಹೋಗುವಂದು ಕಣ್ಕಾಣದೆ ದಿಕ್ಕೆಟ್ಟಂಥ ಅವರಿಗೆ ನಿನ್ನನ್ನೆಡೆಬಿಡದಿರುವ ಮಿಂಚಿನ ನೆರವನ್ನು ಅವರಿಗೊದಗಿಸು, ಆದರೆ ಮಳೆ ಗುಡುಗುಗಳಿಂದ ಅಳ್ಳೆದೆಯುಳ್ಳ ಆ ಹೆಂಗಳನ್ನು ಬೆದರಿಸದಿರು. ಇವೆಲ್ಲವನ್ನೂ ಆ ನಗರದಲ್ಲಿ ನೆರವೇರಿಸಿ ಆ ರಾತ್ರಿಯನ್ನು ನಿನ್ನರಿಸಿ ಮಿಂಚುಬಳ್ಳಿಯೊಡನೆ ಯಾವುದಾದರೊಂದು ಉಪ್ಪರಿಗೆಯ ಮೇಲೆ ವಿಶ್ರಮಿಸಿಕೊಂಡು ಬೆಳಗಾದೊಡನೆ ನಿನ್ನ ಪಯಣವನ್ನು ಮುಂದುವರಿಸು. ಆಗತಾನೆ ಉದಿಸುತ್ತಿರುವ ಸೂರ್ಯದೇವನಿಗೆ ನೀನು ಅಡ್ಡ ಬರಬೇಡ ಕಾರಣವೇನೆಂದರೆ ಪ್ರಿಯನನ್ನಗಲಿ ಅವನ ವಿರಹದಿಂದ ರಾತ್ರಿಗಳೆದ ಪ್ರೇಯಸಿಯ ಕಣ್ಣೀರೊರಸಿ ಸಂತೈಸುವ ಪ್ರಿಯನಂತೆ ಸೂರ್ಯನು ತನ್ನರಿಸಿ ಕಮಲಿನಿಯ ಹೂಗಣ್ಣಿನಲ್ಲಿನ ಹಿಮಬಿಂದುವನ್ನು ಹೋಗಲಾಡಿಸಲು ಹೊರಬಂದಿರುತ್ತಾನೆ. ನೀನು ಅಡ್ಡಬಂದರೆ ಕಮಲಿನಿಯ ಅಸೂಯೆಗೆ ಪಾತ್ರನಾಗಬೇಕಾದೀತು

"ಮೇಘೋತ್ತಮ! ಅಲ್ಲಿಂದಾಚೆ ಮುಂದೆ ಸಿಕ್ಕುವ 'ಗಂಭೀರಾ' ಎಂಬುವ ನದಿ ಮಧುವಿನ ತಿಳಿನೀರಿನಲ್ಲಿ ಪ್ರತಿಬಿಂಬಿಸಿ, ಅದರಲ್ಲಿನ ಮೀನುಗಳ ಚಲನವಲನಗಳಿಂದ ತೋರುವ ಕಣ್ಣೊನೆಯ ನೋಟವನ್ನು ಕಡೆಗಣಿಸದೆ ವಿರಹದಿಂದ ಸೊರಗಿ ನಿನ್ನನ್ನೇ ನಿರೀಕ್ಷಿಸುತ್ತಿರುವ ಆ ನಿನ್ನ ಪ್ರೇಯಸಿಯ ಮನಸ್ಸನ್ನು ತೃಪ್ತಿಪಡಿಸಿ, ಅಂದರೆ ಚನ್ನಾಗಿ ಮಳೆಗರೆದು, ಅದು ತುಂಬಿ ಹರಿಯುವಂತೆ ಮಾಡು. ನೀನು ಕರೆವ ಮಳೆಹನಿಗಳಿಂದ ನೆನೆದ ನೆಲದ ಗಂಧವನ್ನೂ ತುಂತುರುಗಳನ್ನೂ ಹೊತ್ತ ಗಾಳಿಯು ನಿನ್ನನ್ನು ಮುರುವಂಬ ದೇವಗಿರಿಗೆ ಒಯ್ಯುವುದು ಮಾತ್ರವಲ್ಲದೆ ಹಾದಿಯಲ್ಲಿನ ಕಾಡಿನ ಅತ್ತಿಮರಗಳ ಕಾಯ್ಗಳನ್ನು ಪಕ್ವಮಾಡುತ್ತದೆ. ಆ ಗಿರಿಯು ಕುಮಾರಸ್ವಾಮಿಗೆ ನಿತ್ಯನೆಲೆ. ದೇವತೆಗಳ ಪ್ರಾರ್ಥನೆಯಂತೆ ಲೋಕೋಪಕಾರಕ್ಕಾಗಿ ತಾರಕಾಸುರನನ್ನು ಕೊಲ್ಲಬಲ್ಲ ಮಗನೊಬ್ಬನು ಪಾರ್ವತಿದೇವಿಗೆ ಅನುಗ್ರಹಿಸಲುದ್ದೇಶಿಸಿ ಅಗ್ನಿಯಲ್ಲಿ ಇಂಬಿಟ್ಟ ಶಿವನ ತೇಜಸ್ಸೇ ಆ ದಿವ್ಯಮೂರ್ತಿಯ ಜನ್ಮಕ್ಕೆ ಹೇತು. ಲೋಕಮಾನ್ಯನಾದ ಇಂಥ ದೇವನನ್ನು ಕಾಮರೂಪಿಯೆನಿಸಿದ ನೀನು ಹೂಮಳೆಯಿಂದ ಸತ್ಕರಿಸಿ, ಆ ದೇವನ ವಾಹನವಾದ ನವಿಲನ್ನು ನಿನ್ನ ಮೊಳಗಿ

ನಿಂದ ಕುಣಿಸುವುದರ ಮೂಲಕ ಅವನ ತಾಯಿ ಪಾರ್ವತಿ ದೇವಿಯ ಪ್ರೀತಿ ಗೊಂಡು ಮುಂದೆ ಸಾಗು. ಹಾದಿಯಲ್ಲಿ ರಂತಿದೇವನ ಕೀರ್ತಿಯನ್ನು ಬಣ್ಣಿಸುವ ಚರ್ಮಣ್ವತೀ ನದಿಯ ತಿಳಿನೀರನ್ನು ಸೇವಿಸಿ, ಮೇಲೆದ್ದು ಬ್ರಹ್ಮಾವರ್ತವೆಂಬ ಜನಪದವನ್ನು ಹಾದು ಆದರಲ್ಲಿನ ಧರ್ಮಕ್ಷೇತ್ರವೆಂದು ಹೆಸರಾಂತ ಕುರುಕ್ಷೇತ್ರವನ್ನು ದರ್ಶಿಸಿ ಮುಂದುವರಿ. ಶ್ರೀ ಕೃಷ್ಣನ ಸಹಾಯದಿಂದ ಅರ್ಜುನನು ದುಷ್ಟಕ್ಷತ್ರಿಯರ ತಲೆಗಳನ್ನು ತನ್ನ ಗಾಂಡೀವ ಧನಸ್ಸಿನ ಮೂಲಕ ನೆಲಕ್ಕೆ ಕೆಡಹಿ ಆ ಮೂಲಕ ಧರ್ಮೋದ್ಧಾರಕ್ಕೆ ಕಾರಣವಾಗಿ ಧರ್ಮಕ್ಷೇತ್ರವೆಂಬ ಅನ್ವರ್ಥನಾಮವನ್ನು ಇದು ಗಳಿಸಿದೆ.

ಆ ಮುಂದೆ ಗುಪ್ತಗಾಮಿನಿಯಾದ ಸರಸ್ವತೀ ನದಿ ಸಿಗುತ್ತದೆ. ದಾಯಾದಿ ಮಾತ್ಸರ್ಯದಿಂದ ಸಂಭವಿಸಿದ ಯುದ್ಧದಲ್ಲಿ ಬಂಧುಪ್ರೇಮಾದಿ ಪಾಲ್ಗೊಳ್ಳಲೆಳಸದೆ ಬಲರಾಮನು ಈ ನದಿಯ ಪುಣ್ಯತೀರ್ಥದಲ್ಲಿ ಮಿಂದು, ತನ್ನ ಕಳವಳದ ಮನಸ್ಸನ್ನು ತಿಳಿಮಾಡಿಕೊಂಡನು. ಇದನ್ನು ದಾಟಿ 'ಕನಖಲ'ವೆಂಬ ಪರ್ವತದ ಬಳಿ ಹಾಯ್ದು ಹೋದರೆ ಲೋಕಪಾವನೆಯಾದ ಗಂಗಾನದಿಯನ್ನು ಕಾಣುವಿ. ಆ ದೇವಿಯು ಹರನ ಜಟೆಯಿಂದ ಕೆಳಬಂದು, ಭೂಭಾಗವನ್ನು ಸೇರಿ, ಪಾತಾಳಕ್ಕಿಳಿದು. ಕಪಿಲ ಋಷಿಶಾಪದಿಂದ ಸುಟ್ಟು ಭಸ್ಮವಾದ ಸಗರಪುತ್ರರು ಸ್ವರ್ಗಕ್ಕೇರಲು ಏಣಿಯಾದಂಥವಳು. ತನ್ನ ಪವಿತ್ರ ಗುಣಗಳಿಂದ ಶಿವನ ಜಡೆಯನ್ನಲಂಕರಿಸಿ ಅರ್ಧಾಂಗಿಯಾದ ಪಾರ್ವತಿಗೂ ಸವತಿಮಾತ್ಸರ್ಯವನ್ನು ಮೂಡಿಸಿದವಳು ಆಕೆ. ಇಂತಹಳ ಪುಣ್ಯಜಲವನ್ನು ತೃಪ್ತಿಯಿಂದೀಂಟಿ. ಆಕೆಯ ಜನ್ಮದಾತನಾದ ಹಿಮವಂತನ ಶಿಖರದಲ್ಲಿ ವಿಶ್ರಮಿಸು. ಬಳಿಕ ನಿನ್ನನ್ನು ಪ್ರೇಮದಿಂದ ಹೊತ್ತ ಆ ಗಿರಿವರನ ತಪ್ಪಲಿನ ವನಗಳ ದೇವದಾರು ಟೊಂಗೆಗಳ ಘರ್ಷಣೆಯಿಂದುದಿಸಿದ ದಳ್ಳುರಿಯ ಬೇಗೆಗೆ ಅಲ್ಲಿನ ಚಮರಿಗಳು ಸಿಗದಿರುವಂತೆ ನಿನ್ನ ಮಳೆಧಾರೆಯಿಂದ ಚಿಚ್ಚನ್ನಾರಿಸುವುದಲ್ಲದೆ ಮದಗಜವೆಂಬ ಭ್ರಾಂತಿಯಿಂದ ನಿನ್ನ ಮೇಲೆ ಹಾರಲುಳ್ಳ ಎಂಟು ಕಾಲಿನ ಶರಭಮೃಗಗಳ ಗರ್ವವನ್ನು ಆಲಿಕಲ್ಲಿನ ಮಳೆಯಿಂದ ಅಡಗಿಸು. ಮೇಘಶ್ರೇಷ್ಠ ! ಆ ಗಿರಿಯ ಬಂಡೆಯೊಂದರಮೇಲೆ ಶಂಭುವಿನ ಹೆಜ್ಜೆಗುರುತುಗಳಿವೆ. ಅವನ್ನು ಸೇವಿಸಲು ಸಿದ್ಧಪುರುಷರು

ಸದಾ ಬರುತ್ತಿರುತ್ತಾರೆ. ಇದನ್ನು ಭಕ್ತಿಯಿಂದ ಪ್ರದಕ್ಷಿಸಿದವರು ಮರಳಿ ಸಂಸಾರ ಬಂಧಕ್ಕೆ ಸಿಕ್ಕದಿರುವ ಶಾಶ್ವತವಾದ ಮುಕ್ತಿಸುಖವನ್ನು ಗಳಿಸುತ್ತಾರೆ. ನೀನೂ ಕೂಡ ಭಕ್ತಿಯಿಂದ ಅವಕ್ಕೆ ಸುತ್ತಿಟ್ಟು, ಪೂಜೆ ಸಲ್ಲಿಸಿ, ನಿನ್ನ ಇಷ್ಟಾರ್ಥವನ್ನು ಗಳಿಸಿಕೊ ಅಲ್ಲದೆ ಆ ಗಿರಿಯಲ್ಲಿರುವ ಪಶುಪತಿ ದೇವನಿಗೆ ವನದೇವತೆಯು ಬಿದುರಗಳಲ್ಲಿನ ರಂಧ್ರಗಳನ್ನು ಗಾಳಿಯಿಂದ ತುಂಬುವುದರ ಮೂಲಕ ಕೊಳಲುನಾದದಿಂಪನ್ನೂ, ಕಿನ್ನರಿಯರು ತ್ರಿಪುರಾಸುರ ವಿಜಯ ವಿಷಯಕವಾಗಿ ಕೀರ್ತಿಸುವ ಗಾನವನ್ನೂ, ಸಲ್ಲಿಸುವಂದು ನೀನೂ ಕೂಡ ನಿನ್ನ ಗಂಭೀರವಾದ ವೊಳಗಿನಿಂದ ಮೃದಂಗ ಧ್ವನಿಯನ್ನೂ ಅವಕ್ಕೆ ಅಳವಡಿಸಿ ದೇವನಿಗೆ ಸಂಗೀತಸೇವೆಯು ಪೂರ್ಣವಾಗುವಂತೆ ನೆರವಾಗು.

“ಮೇಘರಾಜ ! ಆ ಹಿಮವತ್ಪರ್ವತದಲ್ಲಿ ವಿವಿಧ ರೀತಿಯಿಂದ ವಿಹರಿಸಿದ ಮೇಲೆ ಅಲ್ಲಿಂದ ಮುಂದೆ ಹಂಸಗಳು ತೂರಿ ಹೋಗುವ ಕ್ರೌಂಚ ರಂಧ್ರದ ಮೂಲಕ ನುಗ್ಗಿ ಮೇಲೆದ್ದುದೇ ಆವರೆ ಶಿವನ ದಿನದಿನವ ಅಟ್ಟ ಹಾಸವ ರಾಶಿಯೋ ಎಂಬಂತೆ ಬೆಳಗುವ ಕೈಲಾಸ ಪರ್ವತವನ್ನು ಕಾಣುವಿ. ಇದೇ ಶಿವಶಿವೆಯರ ಕ್ರೀಡಾಶೈಲ ಅದರ ಶಿಖರದಲ್ಲಿ ತುಸು ವಿಶ್ರಮಿಸಿಕೊಂಡ ಬಳಿಕ, ಗೌರೀದೇವಿಯು ಶಿವನ ಕೈಹಿಡಿದು ವಿಹರಿಸಲು ಕಾಲ್ನಡಿಗೆಯಲ್ಲಿ ಅದರ ತಪ್ಪಲಿನಲ್ಲಿ ವಿಹರಿಸುವಂದು ಅವರ ಹಾದಿ ಸುಗಮಗೊಳಿಸಿ. ಅನುಗ್ರಹ ಪಡಯಲು ನಿನ್ನಲ್ಲಿನ ನೀರನ್ನು ಗಟ್ಟಿಯಾಗಿಸಿ, ಅವರಿಗೆ ಮೆಟ್ಟಲುಗಳನ್ನು ಕಲ್ಪಿಸು. ಇದಾದಮೇಲೆ ಚಿನ್ನದ ತಾವರೆಗಳಿಂದ ಬೆಳಗುತ್ತಿರುವ ಮಾನಸ ಸರೋವರದ ತಿಳಿನೀರನ್ನು ಕುಡಿದು, ನೀರ್ಮೊಗೆಯಲು ಬಂದ ದೇವಗಜಗಳಿಗೆ ಮುಖಪರದೆಯಾಗಿ ಅಲ್ಲಿನ ಕಲ್ಪವೃಕ್ಷಗಳ ಚಿಗುರುಗಳನ್ನು ನಿನ್ನ ಗಾಳಿಯಿಂದ ಅಲುಗಿಸಿ. ಇವೇ ಮೊದಲಾದವುಗಳಿಂದ ನಿನ್ನ ಮನರಂಜನೆ ಗಳಿಸು. ಇದೇ ನಿನ್ನ ಪಯಣದ ಕೊನೆ. ಆ ಕೈಲಾಸದ ಮೇಲ್ಭೂಮಿಯಲ್ಲಿ ನೆಲೆಸಿರುವ ಅಲಕಾ ನಗರಿಯೇ ನನ್ನ ನಲ್ಲೆಯ ನೆಲೆ. ವರ್ಷಾಕಾಲದಲ್ಲಿ ಅಂತರ್ಜಲ ಬಿಂದುಗಳುಳ್ಳ ನಿನ್ನನ್ನು ಹೋಲುವ ಇತರ ಮುಗಿಲುಗಳು ಆ ನಗರಿಯ ಸೌಧಗಳ ಮೇಲೆ ಕುಳಿತುಕೊಳ್ಳುತ್ತವೆ. ಕೆಳಭಾಗದಲ್ಲಿ ಹರಿದುಬರುವ ಗಂಗೆಯ ಬಿಳಿಪೊನಲು ಗಳು, ತಲೆಯಮೇಲೆ ಜಲ ಬಿಂದುಗಳನ್ನೊಳಗೊಂಡ ಕಪ್ಪುಮೇಘಗಳು,

ಇವನ್ನುಳ್ಳ ಆ ನಗರವು ಪ್ರಿಯನ ತೊಡೆಯಮೇಲೆ ಕುಳಿತು ಜಾರುತ್ತಿರುವ ಸೀರೆಯನ್ನು ಧರಿಸಿ, ಮುತ್ತಿನ ಸರಗಳಿಂದ ಅಲಂಕೃತವಾದ ಮುಂಗುರುಳನ್ನುಳ್ಳ ಪ್ರೇಯಸಿಯಂತೆ ಕಂಗೊಳಿಸುತ್ತದೆ.

ಮೇಲಿನದು ಕಾವ್ಯದ ಪೂರ್ವಮೇಘದ ಗದ್ಯಾನುವಾದ. ಮುಂದಿನದು ಉತ್ತರಭಾಗದ ವಿಷಯ. ಇದರಲ್ಲಿ ಪದ್ಯ ಒಂದರಿಂದ ಹದಿಮೂರರವರೆಗೆ ಅಲಕಾನಗರಿಯ ಮತ್ತು ಅಲ್ಲಿನ ವಿಲಾಸಿವಿಲಾಸಿನಿಯರ ವರ್ಣನೆಗೂ, ಹದಿನಾಲ್ಕರಿಂದ ಇಪ್ಪತ್ತನೇ ಪದ್ಯಗಳ ಪರ್ಯಂತ ಯಕ್ಷನ ಭವನವನ್ನು ಗುರುತಿಸುವ ಲಕ್ಷಣಗಳಿಗೂ ಇಪ್ಪತ್ತೊಂದನೆಯದು ಯಕ್ಷನ ಸತಿಯ ಚೆಲುವಿನ ವರ್ಣನೆಗೂ ಅಲ್ಲಿಂದ ಮುಂದೆ ನಲವತ್ತೊಂಭತ್ತರವರೆಗೆ ಯಕ್ಷನ ಕಲ್ಪನೆಯಂತೆ ವಿರಹ ದುಃಖದಿಂದ ಸೊರಗುತ್ತಿರುವ ಯಕ್ಷಸುಂದರಿಯ ದುಃಸ್ಥಿತಿಯ ವರ್ಣನೆಗೂ, ಮೇಘದ ಮೂಲಕ ತನ್ನ ಸತಿಗೆ ಯಕ್ಷನು ಹೇಳಿಕಳುಹಿಸಿದ ಸಂದೇಶಕ್ರಮ, ಅವನ ಮಾತಿನಲ್ಲಿಯೇ ತನ್ನ ಪ್ರೇಯಸಿಗೆ ನಿರೂಪಿಸುವ ಬಗೆ ಇವಕ್ಕೂ, ಅಂದರೆ ಕವಿಯ ಅಪ್ರತಿಮವಾದ ವಿಪ್ರಲಂಭ ಶೃಂಗಾರದ ವರ್ಣನೆಗೂ, ಅಲ್ಲಿಂದ ನಾಲ್ಕು ಶ್ಲೋಕಗಳು ಯಕ್ಷನು ತನ್ನರಸಿಯನ್ನು ಸಂತೈಸುವ ನುಡಿಗಳಿಗೂ, ಆ ಮುಂದಿನ ಎರಡು ಪದ್ಯಗಳು ಯಕ್ಷನು ತನ್ನ ಬಯಕೆಯನ್ನೀಡರಿಸುವ ಮೇಘಕ್ಕೆ ಕೃತಜ್ಞತಾಪೂರ್ವಕವಾದ ಶುಭಾಶಯಗಳಿಗೂ ಮೀಸಲಾಗಿವೆ. ಐವತ್ತಾರನೆಯದರಲ್ಲಿ ಮೇಘವು ಯಕ್ಷನ ಸಂದೇಶವನ್ನು ಅವನ ಸತಿಗೆ ಮುಟ್ಟಿಸುವುದು. ಕೊನೆಯದರಲ್ಲಿ ಈ ವಿಷಯವನ್ನು ಕೇಳಿದ ಕುಬೇರನು ಅವರ ದಾಂಪತ್ಯಪ್ರೇಮದ ಹೆಚ್ಚಳಕ್ಕೆ ಮೆಚ್ಚಿ ಕನಿಕರದಿಂದ ಶಾಪದವಧಿಯನ್ನು ಅಲ್ಲಿಗೇ ಕೊನೆಗಾಣಿಸಿ ಯಕ್ಷದಂಪತಿಗಳ ಮೇಳನವನ್ನು ಕೈಗೊಳಿಸುವುದು ಇವು ಸೂಚಿಸಲ್ಪಟ್ಟಿವೆ.

ಈ ಮೇಲಿನ ವಿಷಯವನ್ನು ಕವಿಯು ಬಣ್ಣಿಸಿದಂತೆ ಯಕ್ಷನ ಮಾತಿನಲ್ಲಿಯೇ ವಿವರಿಸುವುದು ಸೂಕ್ತವೆಂದು ಬಗೆದು ಅದನ್ನೇ ಈ ಮುಂದೆ ನಿರೂಪಿಸಿದೆ. ಯಕ್ಷನು ಮೇಘವನ್ನುದ್ದೇಶಿಸಿ, "ಮೇಘರಾಜ! ಅಲಕಾನಗರಿಯ ಸೌಧಗಳೆಲ್ಲವೂ ಆಯಾ ವಿಶೇಷಗುಣಗಳಿಂದ ನಿನ್ನನ್ನೇ ಹೋಲುತ್ತವೆ.

ಹೇಗೆಂದರೆ : ನಿನ್ನಲ್ಲಿ ಮಿರುಗು ಮಿಂಚು, ಆ ನಗರದ ಉಪ್ಪರಿಗೆಗಳಲ್ಲಿ ಹೊಂಬಣ್ಣದಿಂದ ಬಳುಕುತ್ತಿರುವ ವಿಲಾಸಿನಿಯರು; ನಿನ್ನಲ್ಲಿ ಬಣ್ಣಗಳಿಂದ ಕೂಡಿದ ಕಾಮನಬಿಲ್ಲು, ಅವುಗಳಲ್ಲಿ ಬೇರೆ ಬೇರೆ ರಂಗುಗಳಿಂದಾದ ಚಿತ್ರ ಲೇಖನಗಳು; ನಿನ್ನಲ್ಲಿ ಗಂಭೀರವಾದ ಗುಡುಗಿನ ಮೊಳಗು, ಅವುಗಳಲ್ಲಿ ಸಂಗೀತಕ್ಕೆ ತಕ್ಕ ಮೃದಂಗ ಧ್ವನಿ; ನಿನ್ನಲ್ಲಿ ಅಡಗಿರುವ ಜಲಬಿಂದುಗಳು, ಅವುಗಳಲ್ಲಿ ಮಣಿಮಯ ಕುಟ್ಟಿಮ (ನೆಲಗಟ್ಟು)ಗಳು; ಆಗಸದಲ್ಲಿ ಬಹು ಎತ್ತರದಲ್ಲಿ ನಿನ್ನ ನೆಲೆ, ಅವುಗಳಲ್ಲಿ ಮುಗಿಲು ನಾಕುವ ಮಹಡಿಗಳ ಭೂ ಭಾಗದಲ್ಲಿದ್ದಂತೆ ಅಲಕಾನಗರಿಯಲ್ಲಿಋತುಭೇದವೇ ಇಲ್ಲವಾಗಿ ಅಲ್ಲಿನ ವಿಲಾಸಿ ನಿಯರು ಬೇರೆ ಬೇರೆ ಋತುಗಳಲ್ಲಿ ದೊರಕುವಂತಹ ಪುಷ್ಪಗಳನ್ನು ತಮ್ಮ ಅಲಂಕಾರಕ್ಕಾಗಿ ನಿತ್ಯವೂ ಉಪಯೋಗಿಸುತ್ತಿರುತ್ತಾರೆ. ಉದಹರಿಸಬೇಕೆಂದರೆ ಕೈಯಲ್ಲಿ ಲೀಲಾಕಮಲ, ಮುಂಗುರುಳಲ್ಲಿ ಬಾಲಕುಂದ ಕುಟ್ಮಲ ಮುಖ ಚೂರ್ಣಕ್ಕಾಗಿ ಲೋಧ್ರದ ಹೂಹುಡಿ, ಮುಡಿಯಲ್ಲಿ ಕೆಂಪು ಗೋರಂಟಿ, ಕಿವಿಗಳ ಮೇಲೆ ಶಿರೀಷ ಅಂದರೆ ಸುಪ್ಪತ್ತಿಗೆ ಹೂ ಮತ್ತು ಬೈತಲೆಯಲ್ಲಿ ನೀಪಕುಸುಮ, ಇವನ್ನು ಅವರು ಬಳಸುತ್ತಾರೆ. ಅಲ್ಲದೆ ಅಲ್ಲಿನ ಹೂಗಿಡಗಳು ಸದಾ ಹೂಗಳಿಂದ ತುಂಬಿರುತ್ತವೆ. ಕೊಳಗಳು ಪುಷ್ಪಿತವಾದ ಕಮಲ ಬಳ್ಳಿ ಗಳಿಂದಲೂ ಹಂಸದ ಸಾಲುಗಳಿಂದಲೂ ಮೆರೆಯುತ್ತವೆ. ನವಿಲುಗಳು ಸದಾ ಗರಿಕೆದರಿ ನರ್ತಿಸುತ್ತವೆ ಅಲ್ಲದೆ ಅಲ್ಲಿನ ರಾತ್ರಿಗಳು ನಿತ್ಯ ಬೆಳದಿಂಗಳಿಂದ ಶೋಭಿಸುತ್ತವೆ. ಇದರ ಜೊತೆಗೆ ಅಲ್ಲಿನ ಯುವಕ ಯುವತಿಯರಿಗೆ ಆನಂದ ಬಾಷ್ಪದ ವಿನಾ ದುಃಖಾಶ್ರುವೆಂಬುದಿಲ್ಲ, ಕಾಮತಾಪದ ವಿನಾ ಬೇರೆ ತಾಪ ವಿಲ್ಲ. ನಲ್ಲನಲ್ಲೆಯರಲ್ಲಾಗುವ ಪ್ರಣಯ ಕಲಹದ ವಿನಾ ಬೇರೆ ವೈಮನಸ್ಯ ವೆಂಬುದಿಲ್ಲ, ಅಲ್ಲದೆ ಯೌವನದ ವಿನಾ ಬೇರೆ ವಯಸ್ಸೇ ಅಲ್ಲಿನವರಿಗಿರದು. ಅಲ್ಲಿನ ವಿಲಾಸಿಗಳು ಬೆಳದಿಂಗಳ ರಾತ್ರಿಯಲ್ಲಿ ರತ್ನದ ನೆಲಗಟ್ಟುಗಳುಳ್ಳ ಮಹಡಿಗಳನ್ನು ಸೇರಿ ಸಂಗೀತದ ಸವಿಯನ್ನನುಭವಿಸುತ್ತ ಮಧುಪಾನಗಳಿಂದ ಮೈಮರೆಯುತ್ತಿರುತ್ತಾರೆ. ನಗರದ ಬಳಿ ಹರಿಯುವ ಮಂದಾಕಿನೀ ನದಿಯ ದಡದಲ್ಲಿ ಬೆಳೆದ ಮಂದಾರ ವೃಕ್ಷಗಳಡಿಯಲ್ಲಿ ಕುಳಿತು ಹೊನ್ನಿನ ಮರಳುಕಣ ಗಳಲ್ಲಿ ರತ್ನಗಳನ್ನು ಬೈಚಿಟ್ಟು ಹುಡುಕುವ ಕ್ರೀಡೆಗಳಲ್ಲಿ ಎಳೆಹೆಂಗಳು ತೊಡ ಗಿರುತ್ತಾರೆ. ಅಲ್ಲಿನ ಯಕ್ಷದಂಪತಿಗಳ ರತಿಕೇಳೀ ಗೃಹಗಳಲ್ಲಿ ರತ್ನಗಳೇ

ರಾತ್ರಿದೀಪಗಳು. ಚಂದ್ರಕಿರಣಗಳ ಸೋಂಕಿನಿಂದ ತಣ್ಣೀರನ್ನೊಸರುವ ಚಂದ್ರಕಾಂತ ಶಿಲೆಗಳಿಗೆ ಅಳವಡಿಸಿದ ದಾರಗಳಿಂದ ಹರಿದುಬರುವ ತುಂತುರುಗಳ ತಂಪಿನಿಂದ ತಮ್ಮ ರತಿಖೇದವನ್ನು ಕಳೆಯುತ್ತಾರೆ. ಅಲ್ಲಿನ ನಲ್ಲನಲ್ಲೆಯರು ಪರಸ್ಪರ ಕೈಹಿಡಿದು ತಮ್ಮೊಡೆಯನಾದ ಕುಬೇರನ ಕೀರ್ತಿಯನ್ನು ಎತ್ತಿ ಹಾಡುವ ಕಿನ್ನರಿಯರ ಗಾನಸುಖವನ್ನು ಸವಿಯುತ್ತ ಸಲ್ಲಾಪಗಳಿಂದ ಚೈತ್ರರಥವೆಂಬ ಹೊರತೋಟದಲ್ಲಿ ಸುಖವನ್ನನುಭವಿಸುತ್ತಾರೆ. ಸಮೀಪದಲ್ಲಿಯೇ ಶಿವನಿರುವ ಭಯದಿಂದ ಮನ್ಮಥನಿಗೆ ಅಲ್ಲಿ ಪ್ರವೇಶವಿಲ್ಲವೆಂಬ ಶಂಕೆ ಬೇಡ. ಅವನು ಅಲ್ಲಿನ ವಿಲಾಸಿನಿಯರ ಹುಬ್ಬೆಂಬ ಬಿಲ್ಲಿನಲ್ಲಿ ಅವರ ಕುಡಿನೋಟಗಳೆಂಬ ಕಣಗಳನ್ನು ಹೂಡಿ, ತನ್ನ ದಿಗ್ವಿಜಯವನ್ನು ಸಾಗಿಸುತ್ತಾನೆ. ಅಲ್ಲದೆ ಅಲ್ಲಿನ ಸುಂದರಿಯರ ವಿಭ್ರಮಕ್ಕೆ ಬೇಕಾದ ರಂಗುರಂಗಿನ ಬೆಲೆಯುಳ್ಳ ವಸ್ತ್ರಗಳು, ಕಣ್ಣಿನವಿಲಾಸಕ್ಕೆ ಬೇಕಾದ ತಕ್ಕ ಮಧು, ಅಲಂಕಾರಗಳಿಗೆ ಸಲ್ಲುವ ವಿವಿಧಾಭರಣಗಳು ಮತ್ತು ಪಾದಗಳ ಲೇಪನಕ್ಕುಳ್ಳ ಅರಗಿನ ರಸ ಇವೆಲ್ಲವನ್ನೂ ಅಲ್ಲಿನ ಕಲ್ಪವೃಕ್ಷವೊಂದೇ ಒದಗಿಸುತ್ತದೆ.

"ಮುಗಿಲೊಡೆಯ! ಅಲ್ಲಿ ನಮ್ಮ ಭವನವನ್ನು ಗುರುತಿಸುವ ಲಕ್ಷಣಗಳಾವುದೆಂಬುದನ್ನು ಕೇಳು. ಅಲ್ಲಿನ ಕುಬೇರನರಮನೆಯಿಂದ ಉತ್ತರ ದಿಕ್ಕಿಗೆ ದಿಟ್ಟಿಸಿದರೆ ವಿವಿಧ ರತ್ನಪ್ರಭೆಯಿಂದ ಕಾಮನ ಬಿಲ್ಲಿನಂತೆ ಕಂಗೊಳಿಸುವ ತೋರಣದಿಂದಲಂಕೃತವಾದುದೇ ನಮ್ಮ ಭವನ. ಅದರ ಹೊರ ಅಂಗಳದಲ್ಲಿ ಒಂದು ಮಂದಾರ ವೃಕ್ಷವಿದೆ, ಅದನ್ನು ನಮ್ಮಾಕೆ ಮಗನಂತೆ ಪೋಷಿಸಿ ಬೆಳೆಸಿರುವಳು. ಈಗ ಅದರಲ್ಲಿ ಸ್ತನಗಳಂತೆ ಜೋಲುತ್ತಿರುವ ಹೂಗೊಂಚಲುಗಳನ್ನು ಕಾಣಬಹುದು. ಮನೆಯ ಪಕ್ಕದಲ್ಲಿಯೇ ಒಂದು ಕೊಳ. ಪಚ್ಚೆ ಕಲ್ಲುಗಳಿಂದಲೇ ಅದಕ್ಕೆ ಸೋಪಾನಗಳು. ಅದರಲ್ಲಿ ನೀರು ಬಹು ತಿಳಿ ಮಾತ್ರವಲ್ಲದೆ ವೈಢೂರ್ಯನಾಳಗಳನ್ನುಳ್ಳ ಹೊಂದಾವರೆಗಳಿಂದ ಅದು ತುಂಬಿದೆ ಮತ್ತು ಹಂಸಗಳಿಗೆ ಅದು ನಿತ್ಯನೆಲೆ. ಈ ಕೊಳದ ದಡದಲ್ಲಿ ನಮ್ಮ ಬಳಕೆಗಿರುವ ಕ್ರೀಡಾಶೈಲವೊಂದಿದೆ. ನೀಲಮಣಿಗಳಿಂದ ಅದರ ನಿರ್ಮಾಣ ಮತ್ತು ಅದರ ಸುತ್ತಲೂ ಪೊಳೆಹೊಳೆವ ಹೊನ್ನಿನ ಬಾಳೆಗಳಿದ್ದು ಅದು ಮಿಂಚಿನಬಳ್ಳಿಯಿಂದ ಕೂಡಿದ ನಿನ್ನನ್ನೇ ಹೋಲುತ್ತದೆ. ಅದರ ಒಂದೆಡೆ

ಕಾಮೋದ್ದೀಪಕವಾದ ಕೆಂಪು ಅಶೋಕವೃಕ್ಷ, ಇನ್ನೊಂದೆಡೆ ಕೇಸರ ಅಥವಾ ಪಕುಳವೃಕ್ಷ. ಇವುಗಳ ಸುತ್ತ ಕೆಂಪು ಗೋರಂಟಿಯ ಬೇಲಿ. ಈ ಎರಡು ಮರಗಳ ನಡುವೆ ಸ್ಫಟಿಕಶಿಲೆಯೊಂದರ ಮಧ್ಯೆ ನೆಟ್ಟ ಪಚ್ಚೆಯ ನಿಲುಗಂಬ. ಇದು ನಮ್ಮ ಸಾಕುನವಿಲಿನ ನೆಲೆಗಾಗಿ. ಅಲ್ಲಿಯೇ ನನ್ನ ನಲ್ಲೆ ತಾಳ ಹಾಕಿಕೊಂಡು ಅದನ್ನು ಕುಣಿಸುತ್ತಿರುವುದು. ಈ ಚಿಹ್ನೆಗಳ ಜೊತೆಗೆ ನಮ್ಮ ಮನೆಯ ಇರ್ಕಡೆಗಳಲ್ಲಿ ಶಂಖ ಪದ್ಮಗಳೆಂಬ ನಿಧಿಗಳಿವೆ. ಇವುಗಳಿಂದ ನಮ್ಮ ಭವನವನ್ನು ನೀನು ಸುಲಭವಾಗಿ ಗುರುತಿಸಬಹುದು.

"ಮೇಘರಾಜ ! ನೀನು ಕಾಮರೂಪಿಯಾದುದರಿಂದ ನಿನ್ನ ದೇಹವನ್ನು ಕುಗ್ಗಿಸಿ, ಆ ಕ್ರೀಡಾಶೈಲದ ಮೇಲೆ ಕುಳಿತು ಮಿಂಚಿದೆಯೆಂದರೆ, ಆ ಬೆಳಕು ನಮ್ಮ ಭವನದ ಗವಾಕ್ಷಿಯೊಳಗೆ ಹಾದು ಅಲ್ಲಿರುವ ನನ್ನ ಪ್ರೇಯಸಿಯನ್ನು ನಿನ್ನ ಕಣ್ಣಿಗೆ ಬೀಳುವಂತೆ ಮಾಡುತ್ತದೆ. ಆಕೆಯಾದರೋ ಒಂದು ಚೆಲುವಿನ ಗಣಿ. ಹೇಗೆಂದರೆ – ಹೊಂಬಳ್ಳಿಯಂತೆ ಕೋಮಲವಾದ ಮೈಕಟ್ಟು, ಮಧ್ಯ ಪ್ರಾಯ. ಮೊಗ್ಗೆಯಂತಿರುವ ದಂತಪಂಕ್ತಿಗಳು, ತೊಂಡೆಯ ಹಣ್ಣಿನಂತಿರುವ ಚೆಂದುಟಿ, ಸಣ್ಣ ನಡು, ಬೆದರುಗಣ್ಣಿನ ಹರಿಣಿಯಂತೆ ಚಂಚಲವಾದ ಕಣ್ಣುಗಳು. ನಿತಂಬಭಾರದಿಂದ ಮೆಲ್ನಡೆ, ಸ್ತನಗಳ ಮುಂಭಾರದಿಂದ ಬಾಗಿದ ಮೈ. ಇಂತಹ ಸೌಂದರ್ಯನಿಧಿಯು ಬ್ರಹ್ಮನ ಆದ್ಯಸೃಷ್ಟಿಯೆಂಬ ಭಾವವನ್ನು ಮೂಡಿಸುವುದು.

"ಗೆಳೆಯ ! ಆ ಸುಂದರಿಯೇ ನನ್ನೊಲವಿನ ಕಾಂತೆ. ಆಕೆ ವಿರಹ ದುಃಖದಿಂದ ಹೆಚ್ಚು ಮಾತನ್ನಾಡಳು. ಆಕೆಯೇ ನನ್ನರಸಿಯ ಜೀವ. ಎಂದಿಗೂ ನನ್ನೆಡೆಬಿಡದ ಆಕೆ ಗಂಡನ್ನಗಲಿದ ಚಕ್ರವಾಕಿಯಂತೆ. ನಮ್ಮಿರ್ವರ ವಿರಹದಿನಗಳು ಬಲು ದುಗುಡದಿಂದ ಸಾಗುತ್ತಿರಲು ನನ್ನಲ್ಲಿಯೇ ನಟ್ಟಮನವುಳ್ಳ ಆ ಎಳೆಯಳ ಮೇಲೆ ಬಹು ದುಷ್ಪರಿಣಾಮವುಂಟಾಗಿ ಹಿಮಸೋನೆಗೆ ಸೊರಗಿದ ತಾವರೆಯ ಬಳ್ಳಿಯಂತಾಗಿದೆ ಆಕೆಯ ಸ್ಥಿತಿ ಅಗಲಿಕೆಯ ದುಃಖದಿಂದ ಎಡೆಬಿಡದೆ ಕಂಬನಿ ಸುರಿಸುತ್ತಿರುವ ಆ ನನ್ನರಸಿಯ ಕಣ್ಣುಗಳು ಊದಿರಬೇಕು. ಬಿಸಿಯ ನಿಟ್ಟುಸಿರಿನಿಂದ ಕೆಳತುಟಿ ಕಂದಿರಬೇಕು. ಇಂತಹ ಆಕೆ ಕಾಂತಿಗುಂದಿದ ತನ್ನ ಮುಖವನ್ನು ಅಂಗೈಯಲ್ಲಿಟ್ಟು ನಿಡುಗೂದಲಿನ

ತಿರಿಗಳು ಆಕೆಯ ಕೆನ್ನೆಗಳಮೇಲೆ ಜೋಲುತ್ತಿರುವುದಾದರೆ ಅದು ನಿನ್ನಾವರಣ ಕ್ಕೊಳಪಟ್ಟ ಚಂದ್ರಮಂಡಲದ ದೈನ್ಯಸ್ಥಿತಿಯನ್ನು ತೋರುತ್ತದೆ. ನೀನು ಆಕೆಯನ್ನು ದಿಟ್ಟಿಸಿದಂದು ನನ್ನರಸಿಯು, ತನ್ನಧಿದೈವವನ್ನು ಪೂಜಿಸುತ್ತಿರ ಬಹುದು, ಇಲ್ಲವೆ ನನ್ನ ಭಾವಚಿತ್ರವನ್ನು ಬರೆಯುತ್ತಿರಬಹುದು. ಅಥವಾ ಪಂಜರದಲ್ಲಿರುವ ಶಾರಿಕೆಯೆಂಬ ನಮ್ಮ ಸಾಕುಗಿಳಿಯನ್ನುದ್ದೇಶಿಸಿ. 'ರಸಿಕಳೆ! ನಿನ್ನನ್ನು ಬಲು ಮುದ್ದಿಸುತ್ತಿದ್ದ ಆ ನನ್ನ ಪತಿಯನ್ನು ನೆನೆಸುತ್ತಿರುವೆಯಾ?' ಎಂದು ಕೇಳುತ್ತಿರಬಹುದು. ಹಾಗಲ್ಲದೆ ಆ ನನ್ನ ಪ್ರೇಯಸಿಯು ಗಾನದ ಮೂಲಕ ನನ್ನ ಸಂಗವನ್ನು ಬಯಸಿ ನನ್ನಂಕಿತದಿಂದ ತಾನೇ ರಚಿಸಿದ ಹಾಡೊಂದನ್ನು ನುಡಿಸಲೋಸುಗ ವೀಣೆಯನ್ನು ಮಾಸಿದ ಬಟ್ಟೆಯುಟ್ಟ ತನ್ನ ತೊಡೆಯಮೇಲಿಟ್ಟು ಹಾಡಲಾರಂಭಿಸಿದೊಡನೆಯೇ ಎಡೆಬಿಡದೆ ಸುರಿಯುವ ಕಣ್ಣೀರಿನ ಹನಿಗಳಿಂದ ತಂತಿಗಳು ನೆನೆದು ಸರಿಯಾಗಿ ನುಡಿಯ ದಿರುವುದನ್ನು ಕಂಡು ಬಿಕ್ಕಿಬಿಕ್ಕಿ ತನ್ನದಾದ ಆ ಹಾಡನ್ನು ಮತ್ತೆ ಮತ್ತೆ ನೆನಪಿಗೆ ತಂದುಕೊಳ್ಳುತ್ತಿರಬಹುದು. ಇದಲ್ಲದೆ ಆಕೆ ಹೊಸ್ತಿಲನ್ನು ಪೂಜಿ ಸುವ ನೆವದಿಂದ ವಿರಹದಿನಗಳಲ್ಲಿ ಇನ್ನುಳಿದವುಗಳೆಷ್ಟೆಂದು ಹೂಗಳ ನೆಪದಿಂದ ಎಣಿಸುತ್ತಿರುಬಹುದು ಅಥವಾ ತನ್ನ ಮನದಲ್ಲಿಯೇ ನನ್ನೊಡನೆ ಸಂಭೋಗ ಸುಖವನ್ನನುಭವಿಸುತ್ತಿರಬಹುದು ಪ್ರಾಯಶಃ ಪ್ರಿಯನ ಅಗಲಿಕೆಯ ಬೇಗೆಗೊಳಗಾದ ಪ್ರೇಯಸಿಯ ವಿನೋದಗಳು ಇಂಥವುಗಳೇ ಹೌದು.

"ಪ್ರಿಯಮಿತ್ರ! ಕೇಳು. ಆ ನನ್ನರಸಿ ಹಗಲು ಸಮಯವನ್ನು ಹೇಗಾದರೂ ಈ ಬಗೆಯಾದ ವಿನೋದಗಳಿಂದ ಕಳೆಯಬಹುದು. ಆದರೆ ಇವಕ್ಕವಕಾಶವಿರದ ರಾತ್ರಿ ವೇಳೆಯನ್ನು ಆಕೆ ಕಳೆಯುವ ಬಗೆ ಹೇಗೆ? ಆ ಕಾರಣ ನೀನು ಮಧ್ಯರಾತ್ರಿಯ ಸಮಯದಲ್ಲಿ ನಮ್ಮ ಭವನದ ಗವಾಕ್ಷಿಯ ಬಳಿ ಸೇರಿ, ನಿದ್ರೆಯಿಲ್ಲದೆ ಬರೀ ನೆಲದಮೇಲೆ ಹೊರಳಾಡುತ್ತಿರುವ ಆಕೆಯನ್ನು ಕುರಿತು ಕಿವಿಗಿಂಪನ್ನು ತರುವ ನನ್ನ ಸಂದೇಶದ ನುಡಿಗಳಿಂದ ಸಂತೈಸುವುದು ಉಚಿತ. ಹಿಂದೆ ನನ್ನೊಡನಿದ್ದಾಗ ಕ್ಷಣಮಾತ್ರದಲ್ಲಿ ಕಳೆಯುತ್ತಿದ್ದ ರಾತ್ರಿ ಗಳನ್ನು ಈಗ ವಿರಹದುಃಖದಿಂದ ಕೊರಗುತ್ತ ಶಯ್ಯೆಯಲ್ಲೊರಗಿ ಕೊನೆ ಗಾಣಿಸುವ ಬಗೆಯರಿಯದಿದ್ದಾಳೆ. ಈ ಹಿಂದೆ ಯಾವ ಚಂದ್ರನ ಬೆಳಕು

ಗವಾಕ್ಷಿಯಿಂದೊಳಹೊಕ್ಕು ಅತ್ಯಾನಂದವನ್ನು ತರುತ್ತಿದ್ದಿತೋ, ಅದು ಈಗ ನನ್ನ ಸತಿಗೆ ಅಸಹ್ಯವೆನಿಸಿ ಅತ್ತಕಡೆಗೆ ದಿಟ್ಟಿಸದೆ ಸೊರಗುತ್ತಿರುವ ಆ ನಲ್ಲೆಯ ದೈನ್ಯಸ್ಥಿತಿ ದುರ್ದಿನಗಳಲ್ಲಿ ತೆರೆಯದೆ ಮುಚ್ಚದೆ ಇರುವ ನೆಲದಾವರೆಯ ಬಗೆಯನ್ನು ಹೋಲುತ್ತದೆ. ಅಲ್ಲದೆ ತೈಲವಿಲ್ಲದ ಬರಿ ನೀರಿನ ಸ್ನಾನದಿಂದ ಒರಟಾದ ಆಕೆಯ ತಿರಿಗಟ್ಟಿದ ನೀಳಗೂದಲುಗಳು ಜೋಲುತ್ತಿದ್ದರೆ ಅವನ್ನು ತನ್ನ ಬಿಸಿಯುಸಿರಿಂದ ಮತ್ತೆ ಮತ್ತೆ ದೂಡುತ್ತ ಆ ನನ್ನ ಕಾಂತೆ ನನ್ನಂಗಸಂಗ ವನ್ನು ಕನಸಿನಲ್ಲಿಯಾದರೂ ಪಡೆಯಬೇಕೆಂದೆಳಸುವಳಾದರೂ ಕಂಬನಿ ದುಂಬಿದ ಕಣ್ಣಳಿಗೆ ನಿದ್ದೆ ಬರುವುದೆಂತು? ಮನದಳಲಿನಿಂದ ಒಂದೇ ಮಗ್ಗುಲಿನಲ್ಲಿ ನೆಲದಮೇಲೊರಗಿ ಕಣ್ಣೀರ್ಗರೆವ ಆಕೆ ಪೂರ್ವದಿಗಂತದಲ್ಲಿ ಕಾಂತಿಗುಂದಿದ ಚಂದ್ರನ ಕಳೆಯೊಂದನ್ನು ಅನುಕರಿಸುತ್ತಾಳೆ. ವಿರಹದಿನಗಳಲ್ಲಿ ಜಡೆಗಟ್ಟಿಸಿದ ಆಕೆಯ ಕೂದಲುಗಳನ್ನು ಶಾಪದ ದಿನಗಳೆದ ಬಳಿಕ ನನ್ನುಗುರುಗಳಿಂದ ನಾನೇ ಬಿಡಿಸಬೇಕಾಗಿದೆ. ಗೆಳೆಯ ! ಆ ನನ್ನ ನಲ್ಲೆಯು ಒಡವೆಗಳನ್ನೊಲ್ಲದೆ ಎಲ್ಲವನ್ನೂ ತೊರೆದು ವಿರಹಶಯ್ಯೆಯಲ್ಲಿ ಅತ್ತಿತ್ತ ಹೊರಳಾಡುತ್ತಿದ್ದರೆ ಆಕೆಯ ಶೋಚನೀಯ ಸ್ಥಿತಿಯನ್ನು ನೋಡಿದ ನಿನ್ನಂತಹ ಕರುಣೆಯು ಕಂಬನಿ ಸುರಿಸದಿರ. ವಿರಹದ ಬೇಗೆಗೊಳಗಾದ ಆ ನಿನ್ನತ್ತಿಗೆಯ ಆ ದುಃಸ್ಥಿತಿಯು ನನ್ನಲ್ಲಿ ಆಕೆಗಿರುವ ಪ್ರೇಮದ ಹೆಚ್ಚಳದಿಂದಾದುದೆಂಬುದನ್ನು ನೀನೇ ಆಕೆ ಯನ್ನು ನೋಡಿದಂದು ಮನಗಾಣುವಿ. ಪ್ರಿಯ ಬಂಧು ! ನನ್ನ ಮೇಲ್ಮೆಗಾಗಿ ನೀನು ಅಲ್ಲಿ ಸುಳಿದೊಡನೆಯೇ ಆಕೆಯ ಎಡಗಣ್ಣೂ ಎಡತೊಡೆಯೂ ಅದುರಿ ಅದರಿಂದ ಬೇಗ ನನ್ನ ಸಮಾಗಮ ಮತ್ತು ನನ್ನೊಡನೆ ಸಂಭೋಗಸುಖ ಇವುಗಳನ್ನು ಬೇಗ ಲಭಿಸುವುದೆಂದು ಆಕೆಗೆ ಸೂಚಿಸುತ್ತವೆ. ನಿನ್ನಲ್ಲಿ ಮತ್ತೊಂದು ಬೇಡಿಕೆ. ಅದೇನೆಂದರೆ ನೀನು ಅಲ್ಲಿ ಸುಳಿದ ಸಮಯದಲ್ಲಿ ಆಕೆ ನಿದ್ರಿಸುತ್ತಿದ್ದರೆ ಒಂದು ಯಾಮ ಮಾತ್ರ ಮೊಳಗದೆ ಸುಮ್ಮನಿರು. ಆ ಕಾಲ ದಲ್ಲಿ ಆಕೆ ನನ್ನೊಡನೆ ಕನಸಿನಲ್ಲಿ ರತಿಸುಖವನ್ನನುಭವಿಸುತ್ತಿದ್ದರೆ ಅದಕ್ಕೆ ಭಂಗ ಬರದಿರಲಿ. ಆ ಬಳಿಕ ನೀನು ನಿನ್ನಲ್ಲಿನ ತಂಗಾಳಿ, ತುಂತುರು ಮತ್ತು ಮಾಲತೀಹೂಮಳೆ ಇವುಗಳಿಂದ ಆಕೆಯನ್ನು ಎಚ್ಚರಗೊಳಿಸು. ಆಗ ಕಣ್ತೆರೆದು ಆನಂದದಿಂದ ಗವಾಕ್ಷದಲ್ಲಿನ ನಿನ್ನನ್ನು ದಿಟ್ಟಿಸಿದಂದು ನೀನು ಈ ಮುಂದಿನಂತೆ ಆಕೆಯನ್ನುದ್ದೇಶಿಸಿ ಸವಿನುಡಿಗಳಿಂದ ಸಂತೈಸು.

“‘ಓ ಮಂಗಳಾಂಗಿ ! ನಾನೊಬ್ಬ ಚೇತನಗೊಂಡ ಮೇಘ. ನಿನ್ನ ಪ್ರಿಯ ಪತಿಯ ಅಚ್ಚುಮೆಚ್ಚಿನ ಗೆಳೆಯ. ನಿನ್ನನ್ನು ಸಂತೈಸಲು ಆ ನಿನ್ನ ಪತಿ ಕಳುಹಿಸಿದ ಸಂದೇಶವನ್ನು ಹೊತ್ತು ತಂದಿದ್ದೇನೆ. ಅಗಲಿದ ಗಂಡ ಹೆಂಡಿರನ್ನು ಒಟ್ಟುಗೂಡಿಸುವುದೇ ನನ್ನ ಮುಖ್ಯಗುರಿ.’ ಹೀಗೆಂಬ ನಿನ್ನ ಸವಿನುಡಿಗಳನ್ನು ಕೇಳಿದೊಡನೆಯೇ ಹಿಂದೆ ಶ್ರೀರಾಮನ ವಿರಹದಿಂದ ಅಶೋಕ ವನದಲ್ಲಿ ಕೊರಗುತ್ತಿದ್ದ ಸೀತಾದೇವಿಯು ಶಿಂಶುಪಾವೃಕ್ಷದ ಟೊಂಗೆಯ ಮೇಲೆ ಕುಳಿತು ಪತಿಯ ಕುಶಲವಾರ್ತೆಯನ್ನು ನುಡಿಯುತ್ತಿದ್ದ ಹನುಮಂತನ ಕಡೆಗೆ ದಿಟ್ಟಿಸುವಂತೆ ಆ ನನ್ನ ಸತಿ ಸಂತಸದಿಂದ ನಿನ್ನ ಸವಿನುಡಿಗಳನ್ನು ಆತ್ಮಾದರದಿಂದ ಆಲೈಸುವಳು. ಏಕೆಂದರೆ, ಗೆಳೆಯನು ತಂದ ಪ್ರಿಯನ ಸಂದೇಶದಿಂದ ಪ್ರೇಯಸಿಗಾಗುವ ಸುಖ ಹೆಚ್ಚು ಕಡಿಮೆ ಅವನೊಡನೆ ಬೆರೆಯುವ ಸುಖಕ್ಕೇ, ಸಮ. ಆಗ ನೀನು ನನ್ನ ಸಂದೇಶವನ್ನು ಆಕೆಗೆ ಈ ಬಗೆಯಲ್ಲಿ ತಿಳಿಸು :– ‘ಅಬಲೆ! ನಿನ್ನ ಪ್ರಿಯನಾದ ಯಕ್ಷನು ಶಾಪಕ್ಕೊಳಗಾಗಿ ರಾಮಗಿರಿಯ ಆಶ್ರಮಗಳಲ್ಲಿ ನಿನ್ನಗಲಿಕೆಯ ಕೊರಗಿನಿಂದ ಸೊರಗುತ್ತಿದ್ದರೂ ಜೀವಂತನಾಗಿದ್ದಾನೆ. ನನ್ನ ಮೂಲಕ ನಿನ್ನ ಕುಶಲವನ್ನು ತಿಳಿಯುವ ಆತುರದಿಂದಿದ್ದಾನೆ. ದುರ್ದೈವದಿಂದ ನಿನ್ನನಗಲಿ ನಿನ್ನಂತೆಯೇ ವಿವಿಧ ವಿರಹಾವಸ್ಥೆಗೊಳಗಾಗಿದ್ದಾನೆ. ಈ ಹಿಂದೆ ಸಖಿಯರಿಂದ ಕೂಡಿದ ನಿನ್ನೊಡನಿದ್ದ ಸಮಯದಲ್ಲಿ ನಿನ್ನ ಮೊಗದ ಸೋಂಕನ್ನು ಬಯಸಿ ಗುಟ್ಟುಮಾತಿರದಿದ್ದರೂ ನಿನ್ನ ಕಿವಿಯೆಡೆ ಮೊಗವಿಟ್ಟು ನುಡಿಯುತ್ತಿದ್ದ ಆ ನಿನ್ನ ಪ್ರಿಯನು ಈಗ ನಿನ್ನಿಂದ ಬಹುದೂರವಿರುವಂತಾಗಿರಲು ನಿನ್ನನ್ನುದ್ದೇಶಿಸಿ ನನ್ನ ಮೂಲಕ ತನ್ನ ಮಾತಿನಲ್ಲಿಯೇ ಹೇಳಿದ ಬಗೆ ಈ ಮುಂದಿನಂತಿದೆ. ಕಿವಿಗೊಟ್ಟು ಕೇಳು.

“ಓ ನನ್ನ ಪ್ರಾಣಕಾಂತೆ ! ನಿನ್ನನ್ನಗಲಿದಂದಿನಿಂದ ಕೊರಗುತ್ತಿರುವ ನಾನು ನಿನ್ನ ಹೋಲಿಕೆಯ ಸೌಂದರ್ಯರಾಶಿಯನ್ನು ಒಂದೆಡೆಯಲ್ಲಿ ಕಾಣದೆ, ನಿನ್ನಂಗದ ಕೋಮಲತೆಯನ್ನು ಇಲ್ಲಿನ ಬಳ್ಳಿಗಳಲ್ಲಿಯೂ, ನಿನ್ನ ಕಣ್ಣಿನ ಸೊಬಗನ್ನು ಬೆದರಿದ ಹೆಣ್ಣೆರಳೆಗಳಲ್ಲಿಯೂ, ನಿನ್ನ ಮೊಗದಂದವನ್ನು ಇಂದುಮಂಡಲದಲ್ಲಿಯೂ, ನಿನ್ನ ನಿಡುಗೂದಲಿನ ಚಂದವನ್ನು ನವಿಲುಗಳ

ಉದ್ದವಾದ ಹಿಂಗರಿಗಳಲ್ಲಿಯೂ. ನಿನ್ನ ಹುಬ್ಬಾಟದ ಚಲುವನ್ನು ನದಿಗಳ ಲೆಗಳಲ್ಲಿಯೂ ಕಂಡು ತೃಪ್ತಿಪಡಬೇಕಾಗಿದೆ. ಪ್ರಾಣಪ್ರಿಯೆ! ಕೇಳು. ನಾನು ಚಿತ್ರದರ್ಶನದಿಂದ ವಿರಹದುಃಖವನ್ನು ತಣಿಸಲೆಳಸಿ ಈ ರಾಮಗಿರಿಯ ಬಾಡೆಯೊಂವರ ಮೇಲೆ ಗೈರಿಕಾದಿ ಧಾತುಗಳಿಂದ ನಿನ್ನಾಕಾರದ ಅಂಗಸೌಷ್ಠವವನ್ನು ನಿರ್ಮಿಸಿ, ಪ್ರಣಯಕುಪಿತಳಾದ ನಿನ್ನನ್ನು ಸಂತೈಸಲು ನಿನ್ನಡಿಗಳಿಗೆ ಎರಗಲೆಣಿಸಿದ ನನ್ನ ಕಣ್ಣುಗಳಲ್ಲಿ ನೀರು ತುಂಬಿ ನಿನ್ನನ್ನು ಮನಸಾರೆ ನೋಡುವ ನನ್ನ ಬಯಕೆಗೆ ನಿಷ್ಕರುಣಿಯಾದ ದುರ್ದೈವವು ಅಡ್ಡಿ ತಂದಿತು. ಚೆನ್ನರಸಿ! ನಿನ್ನನ್ನೇ ನೆನೆಯುತ್ತಿದ್ದ ನನಗೆ ಅಕಸ್ಮಾತ್ ನಿದ್ದೆ ಬಂದಂದು ಸ್ವಪ್ನದಲ್ಲಿ ನಿನ್ನನ್ನು ಕಂಡು ಬಾಚಿ ತಬ್ಬುವ ಸಲುವಾಗಿ ಕೈಗಳನ್ನು ಮೇಲೆ ಚಾಚುತ್ತಿದ್ದ ನನ್ನ ದುರವಸ್ಥೆಯನ್ನು ಕಂಡು ವನದೇವತೆಗಳು ಕರುಣೆಯಿಂದ ಮರದೆಲೆಗಳ ಮೇಲೆ ಕಣ್ಣೀರ್ಗರೆಯುವರು. ಹೇಗಾದರೂ ನಿನ್ನನ್ನು ಆಲಂಗಿಸುವ ಬಯಕೆಯು ನನಗೆ ಹೆಚ್ಚಿ ಉತ್ತರದಿಶೆಯಿಂದ ಅಂದರೆ ಹಿಮಾಲಯದ ಕಡೆಯಿಂದ ದೇವದಾರುವ ಕುಡಿಗಳನ್ನು ಮುರಿದು, ಅವುಗಳೊಸರುವ ಹಾಲಿನ ಸುಗಂಧವನ್ನು ಹೊತ್ತುತರುವ ಗಾಳಿಗೆ ಮೈಯೊಡ್ಡಿ, ಆ ಗಾಳಿ ನಿನ್ನನ್ನು ಸೋಂಕಿ ಮತ್ತೆ ನನ್ನನ್ನು ಮುಟ್ಟುವುದರಿಂದ ಪರೋಕ್ಷವಾದ ನಿನ್ನ ಆಲಿಂಗನಾಸುಖವನ್ನನುಭವಿಸುತ್ತಿದ್ದುದೂ ಉಂಟು. ಎಳೆಯಳೆ! ಕೇಳು. ಇಲ್ಲಿ ಮಳೆ ಧಾರಾಧಾರೆಯಾಗಿ ಸುರಿದಂದು ನೆನೆದ ಭೂಮಿಯಿಂದೆದ್ದ ಸುಗಂಧವು ನಿನ್ನ ಮುಖವಾತವನ್ನು ನೆನಪಿಗೆ ತಂದು ಆ ಮೂಲಕ ಮನ್ಮಥನು ಮೊದಲೇ ಅಗಲಿಕೆಯಿಂದ ಕೊರಗುತ್ತಿದ್ದ ನನ್ನನ್ನು ಮತ್ತಷ್ಟು ಸೊರಗಿಸುತ್ತಿದ್ದಾನೆ. ಅಲ್ಲದೆ ಪ್ರಿಯೆ! ಈ ಮಳೆಗಾಲದ ದಿನಗಳನ್ನು ನಿನ್ನಗಲಿ ನೂಕುವ ಬಗೆ ಹೇಗೆ? ನಲ್ಲೆ! ನಿನ್ನೊಡನೆ ಯಾವ ಇರುಳುಗಳನ್ನು ಸುಖದಿಂದ ಕ್ಷಣದಂದ ಕಳೆಯುತ್ತಿದ್ದೆನೋ ನೀನಿಲ್ಲದೆ ಅವೇ ಯುಗಗಳಾಗಿ ಪರಿಣಮಿಸಿ. ನಿನಗಾಗಿ ಬಾಯಿಬಿಟ್ಟು, ಬಯಕೆ ಬಲಿದಾಗಿ ದಿಕ್ಕೆಟ್ಟವನಂತೆ ತೊಳಲುತ್ತಿರುವ ಸ್ಥಿತಿ ನನಗೊದಗಿದೆ. ಆದರೂ ಕೂಡ ಶಾಪದ ದಿನಗಳು ಕಳೆದ ಬಳಿಕ ನಿನ್ನನ್ನು ಮರಳಿ ಕೂಡುವ ಹಂಬಲಿನಿಂದ 'ಜೀವವೊಂದುಳಿಸಿಕೊ. ಮಂಗಳವನ್ನು ಕಾಣುವಿ' ಎಂಬ ನಾಣ್ಣುಡಿಯಲ್ಲಿ ನಂಬುಗೆಯಿಟ್ಟು ಜೀವವನ್ನುಳಿಸಿಕೊಂಡಿದ್ದೇನೆ. ಓ ಮಂಗಳಾಂಗಿ! ಅದರಂತೆಯೇ ನೀನೂ ನಿನ್ನ

ಜೀವವನ್ನು ತೊರೆಯದಿರು. ಆತುರಪಡಬೇಡ. ಕಷ್ಟಸುಖಗಳೆಂಬುದು ಯಾವ ಜೀವಿಗೂ ಸ್ಥಿರವಲ್ಲ. ಜೀವಿತಚಕ್ರದಲ್ಲಿ ಅವು ಒಂದಾದಮೇಲೊಂದ ರಂತೆ ಬರುತ್ತಲೇ ಇರುವುದು ಸಹಜ" ಹೀಗೆಂದು ಕಾಮಾಂಧನಾದ ಯಕ್ಷನು ತನ್ನ ಕಾಮಿನಿಯನ್ನು ಉದ್ದೇಶಿಸಿ ವಿರಹದುಃಖಸ್ಥಿತಿಯನ್ನು ಬಣ್ಣಿಸಿದನು. ಇವೆಲ್ಲವೂ ಕವಿಯ ಪ್ರತಿಭೆಯಿಂದ ಹೊರಹೊಮ್ಮಿದ ವಿಪ್ರಲಂಭ ಶೃಂಗಾರದ ಪ್ರಕೃಷ್ಟ ವರ್ಣನೆ.

ಕೊನೆಗೆ ಯಕ್ಷನು ತನ್ನ ಪ್ರೇಯಸಿಯನ್ನು ಸಂತೈಸುವ ನುಡಿಗಳ ಬಗೆ ಹೀಗಿದೆ : "ಪ್ರಾಣಪ್ರಿಯೆ ! ಶಾಪದವಧಿಯು ಇನ್ನು ನಾಲ್ಕು ತಿಂಗಳು ಮಾತ್ರವಿದೆ. ಶಯನೈಕಾದಶಿಯಿಂದ ಹಿಡಿದು ಉತ್ಥಾನದ್ವಾದಶಿಯವರೆಗಿನ ನಾಲ್ಕು ತಿಂಗಳು ಚಾತುರ್ಮಾಸ್ಯ ವ್ರತಕ್ಕಾಗಿ ನಿಯಮಿಸಲ್ಪಟ್ಟಿರುವುವು. ನಾವೂ ಸಹ ಈ ಪವಿತ್ರ ದಿನಗಳನ್ನು ಕಣ್ಣುಮುಚ್ಚಿ ನಿಯಮದಿಂದಲೇ ಕಳೆಯುವ. ಆ ಬಳಿಕ ಬರುವ ಶರತ್ಕಾಲದ ಬೆಳದಿಂಗಳ ರಾತ್ರಿಗಳಲ್ಲಿ ನಾವೀರ್ವರೂ ಸೇರಿ ಈ ಹಿಂದೆ ಕಳೆದ ವಿರಹದಿನಗಳಲ್ಲಿ ನಮಗೆ ದೊರಕದಿದ್ದ ಸುಖಗಳನ್ನೂ ಸೇರಿಸಿಕೊಂಡು ಸ್ವೇಚ್ಛೆಯಿಂದ ವಿಹರಿಸುತ್ತ ಅಗಲಿಕೆಯ ದುಃಖವನ್ನು ಮರೆಯುವ. ಪ್ರಿಯೆ ! ನಾನೇ ಈ ಸಂದೇಶವನ್ನು ಕಳುಹಿಸಿ ದುದು ಎಂಬ ನಂಬಿಕೆ ನಿನ್ನಲ್ಲಿ ಮೂಡಿಸಲು ಒಂದು ಏಕಾಂತದ ಅಭಿಜ್ಞಾನದ ಕುರುಹನ್ನು ತಿಳಿಸುತ್ತೇನೆ, ಕೇಳು. ಈ ಹಿಂದೆ ನಾವಿಬ್ಬರೂ ಏಕಾಂತಸುಖ ಶಯ್ಯೆಯಲ್ಲಿ ಮಲಗಿದ್ದ ಒಂದು ರಾತ್ರಿ ನೀನು ನಿದ್ದೆಯಿಂದೆದ್ದು ಕುಳಿತು ಅಳ ತೊಡಗಿದೆ. ಅದಕ್ಕೆ ಕಾರಣ ತಿಳಿಸಲು ನಾನು ಮತ್ತೆಮತ್ತೆ ಒತ್ತಾಯ ಮಾಡಲು ನೀನು 'ಧೂರ್ತ ! ನೀನು ಮತ್ತೊಬ್ಬಳೊಡನೆ ರತಿಸುಖವನ್ನನು ಭವಿಸುತ್ತಿದ್ದುದನ್ನು ಕನಸಿನಲ್ಲಿ ಕಂಡೆ' ಎಂದು ನೀನು ಉತ್ತರಿಸಿದೆ. ಅದನ್ನು ನೆನಪಿಗೆ ತಂದುಕೊಂಡು ನಾನು ಕುಶಲನಾಗಿದ್ದೇನೆ. ನಿನ್ನಲ್ಲಿನ ಪ್ರೇಮವು ಎಂದೂ ಕುಂದಿಲ್ಲ' ಎಂಬುದನ್ನು ನಂಬು. ಸ್ನೇಹವು ಅಗಲಿಕೆಯಿಂದ ಬತ್ತು ವುದು ಎಂದು ಹೇಳುವ ವಾಡಿಕೆಯಿದೆ. ಆದರೆ ತನಗಿಷ್ಟವಾದ ವಸ್ತುವು ದೊರಕದೆ ಅದರಲ್ಲಿಯೇ ಮನಸ್ಸನ್ನು ನೆಟ್ಟುದಾದರೆ ಅದು ಪ್ರೇಮದ ರಾಶಿಯೇ ಆಗುವುದೆಂದು ತಿಳಿ" ಎಂದು ತಿಳಿಯಹೇಳಿದನು.

ಈ ಬಗೆಯಲ್ಲಿ ಯಕ್ಷನು ಮೇಘವನ್ನುದ್ದೇಶಿಸಿ ತನ್ನ ಸಂದೇಶದ ಬಗೆಯನ್ನು ತನ್ನ ಮಾತಿನಲ್ಲಿಯೇ ಪ್ರೇಯಸಿಗೆ ತಿಳಿಸಬೇಕೆಂದು ಕೇಳಿಕೊಂಡು ಮತ್ತೆ ಅದನ್ನು ಕುರಿತು. "ಮೇಘರಾಜ ! ನನ್ನ ಸಂದೇಶದ ನುಡಿಗಳಿಂದ ನನ್ನರಸಿಯನ್ನು ಸಂತೈಸಿದ ಬಳಿಕ ಆಕೆಯ ಕುಶಲವಾರ್ತೆಯನ್ನು ಏಕಾಂತದ ಹೆಗ್ಗುರುತಿನೊಡನೆ ನನಗೆ ಮುಟ್ಟಿಸಿ ನನ್ನ ಜೀವವುಳಿಯುವಂತೆ ಮಾಡು. ನೀನು ಉತ್ತರಿಸದೆ ಮೌನದಿಂದಿದ್ದರೂ ನನ್ನ ಬೇಡಿಕೆ ನೆರವೇರಿಸುವಿಯೆಂಬ ಭರವಸೆ ನನಗಿದೆ. ಏಕೆಂದರೆ. ಚಾತಕಪಕ್ಷಿಗಳು ಬಯಸುವ ನೀರುಹನಿಗಳನ್ನು ಮೌನವಾಗಿಯೇ ಅವಕ್ಕೆ ನೀನು ಸಲ್ಲಿಸುತ್ತಿದ್ದಿ. ಬೇಡುವವರ ಬೇಡಿಕೆಯನ್ನು ಸಲ್ಲಿಸುವುದೇ ಸಂತರು ಅವರಿಗೆ ಕೊಡುವ ಉತ್ತರ. ಮೇಘೋತ್ತಮ ! ನಿನ್ನಲ್ಲಿ ನನ್ನ ಈ ಬಗೆಯ ಯೊಚನೆ ಅನುಚಿತವಾಗಿರಬಹುದು. ಆದರೂ ನನ್ನಲ್ಲಿನ ಸ್ನೇಹಭಾವದಿಂದಲೋ, ನನ್ನ ದುಸ್ಥಿತಿಗಾಗಿ ಮನ ಕರಗಿಯೋ, ಇಲ್ಲವೆ ಸತಿಯನ್ನಗಲಿ ದಿಕ್ಕೆಟ್ಟವನೆಂದೋ, ಎಂದು ಭಾವಿಸಿ ನನ್ನಲ್ಲಿ ಕರುಣೆಯಿಟ್ಟು ಈ ನನ್ನ ಬೇಡಿಕೆಯನ್ನು ನೆರವೇರಿಸಿದ ಬಳಿಕ ನೀನು ನಿನ್ನಿಷ್ಟ ಬಂದೆಡೆಗೆ ಹೋಗಬಹುದು. ನಿನ್ನ ಇಂತಹ ಉಪಕಾರಕ್ಕೆ ಪ್ರತಿಯಾಗಿ 'ನಿನಗೂ ನಿನ್ನನ್ನಡೆಬಿಡದ ಮಿಂಚೆಂಬ ನಿನ್ನಪ್ರೇಯಸಿಗೂ ಎಂದೆಂದೂ ಅಗಲಿಕೆ ಬರದಿರಲಿ' ಎಂಬುದೇ ನನ್ನ ಮನಃಪೂರ್ವಕವಾದ ಹಾರೈಕೆ" ಎಂದು ಹೇಳಿ ಸುಮ್ಮನಾದನು.

ಆ ಬಳಿಕ ಚೇತನಗೊಂಡ ಆ ಮೇಘವು ಯಕ್ಷನ ಮಾತನ್ನು ಮನ್ನಿಸಿ, ಅವನ ಸಂದೇಶವನ್ನು ಅಲಕಾಪಟ್ಟಣದಲ್ಲಿನ ಅವನ ಪ್ರೇಯಸಿಗೆ ಮುಟ್ಟಿಸಿ, ಆಕೆಯ ಮನ್ನಣೆಗೆ ಪಾತ್ರನಾದನು. ಕುಬೇರನು ಯಕ್ಷದಂಪತಿಗಳ ಈ ಬಗೆಯ ಪ್ರೇಮಾತಿಶಯವನ್ನು ಈ ಪ್ರಸಂಗದಿಂದ ತಿಳಿದು ಕನಿಕರಿಸಿ, ಶಾಪದವಧಿಯನ್ನು ಅಲ್ಲಿಗೇ ನಿಲ್ಲಿಸಿ, ಆ ದಂಪತಿಗಳು ಮತ್ತೆ ಸೇರಿ ಸುಖಜೀವನವನ್ನು ನಡೆಸುವಂತೆ ಅನುಗ್ರಹಿಸಿದನು,

ಈ ಮೇಲಿನದು ಈ ಮಹಾಕಾವ್ಯದಲ್ಲಡಗಿರುವ ಬಗೆ ಇದನ್ನು ಕವಿಯು ಮನಮೆಚ್ಚುವಂತೆ ತಿಳಿಯಹೇಳಿದ್ದಾನೆ,

ಭಾಗ ೩

ಕಾವ್ಯವನ್ನು ಮೆಚ್ಚಿದ ವಿದ್ವಾಂಸರ ಅಭಿಪ್ರಾಯಗಳು

ಕಾಳಿದಾಸನ ಕಾವ್ಯಗಳನ್ನು ಪರಿಶೀಲಿಸಿ ಆನಂದಿಸಿ ತಲೆದೂಗಿ ತಮ್ಮ ನಿಷ್ಪಕ್ಷಪಾತವಾದ ಅಭಿಪ್ರಾಯಗಳನ್ನು ಎತ್ತಿ ಹೇಳಿದ ಪಾಶ್ಚಾತ್ಯ ವಿದ್ವಾಂಸರಲ್ಲಿ ಪ್ರಸಿದ್ಧರಾದವರೆಂದರೆ ಜರ್ಮನ್ ದೇಶದ ವಿಖ್ಯಾತ ನಾಟಕ ಕರ್ತೃ ಗೈಟೆ (Goethe), ರೈಡರ್ (Ryder), ಹಿಲ್ಲಿಬ್ರಾಂಟ್ (Hillebrandt), ಹಂಬೋಲ್ಟ್ (Humbolt) ವಿಲ್ಸನ್ (Wilsone), ಮೇಯರ್ (Meyer) ರೂಕ್ (Rooke) ಮತ್ತು ಅನೇಕ ಇತರರು. ಅವರಲ್ಲಿ ಕೆಲವರ ಅಭಿಪ್ರಾಯಗಳನ್ನು ಇಂಗ್ಲಿಷ್ ಭಾಷೆಯಲ್ಲಿಯೇ ಓದುಗರ ಸಲುವಾಗಿ ಈ ಮುಂದೆ ಕೊಟ್ಟಿದೆ, ಅಲ್ಲದೆ ಭಾರತೀಯ ರಾಷ್ಟ್ರಕವಿ ಶ್ರೀ ರವೀಂದ್ರನಾಥ ಟಾಗೋರ್, ಶ್ರೀಮಾನ್ ರಂಗಾಚಾರ್ಯ, ಶ್ರೀಮಾನ್ ರಾಮಸ್ವಾಮಿ ಶಾಸ್ತ್ರಿ ಇವರೇ ಮೊದಲಾದವರ ಅಭಿಪ್ರಾಯಗಳನ್ನೂ ಇಲ್ಲಿ ಸೂಚಿಸಿದೆ. ಆಂಗ್ಲೇಯ ಭಾಷಾ ಪರಿಚಯವಿರುವವರಿಗೆ ಸುಲಭವಾಗಿ ಅರ್ಥವಾಗುವುದರಿಂದ ಅದರ ಕನ್ನಡಾನುವಾದವನ್ನು ಇಲ್ಲಿ ಕೊಟ್ಟಿಲ್ಲ. ಈ ವಿಷಯದಲ್ಲಿ ಆ ಭಾಷೆ ಅರಿಯದ ಕನ್ನಡಿಗರ ಕ್ಷಮೆ ಕೋರಿದೆ.

Goethe :— "And Meghadutha, the cloud messenger,
Whoever seeks him not as a friend of the soul?
Swift-moving cloud, aerial traveller!
Whoever with thee wandered, sailed with thee.
The land of my youth greets me cordially;
I am captured, I am in bondage,
Oh! I have no other messenger,
Free in the sky is thy path,
Thou art not a subject of this Queen.

(English translation)

Hillibrandt :— "The pearl of Indian lyrics", In tenderness and beauty of invention as also of the mode of the thought, this shortest work of Kalidasa is unsurpassed". It is difficult to praise too highly either the brilliance of description of the cloud's progress or the pathos of the picture of the wife, sorrowful and alone.

Wilson : " The geographical part of the poem seems to be very accurately conceived.....We cannot help being pleased with the simplicity and propriety of taste which gives to the graceful ornamental of nature so prominent a part in the decoration of feminine beauty."

C. A. Kineaid : "The most wonderful love poem in any known language".

Ryder : "In Meghadutha Kalidasa erected a new genere in Sanskrit literature. A Majestic meter',

Schroder: " A gem of inestimable worth".

Meyer : "The most beautiful bewailing of a passionate love which can read".

Alexander Vol Humbolt : "The admirable truth of Nature.....in the Meghadutha."

Rooke : "Its subject is a sort of idyll in fairy land.',

M. Rangacharya : One of the most wonderful pro-

ducts of the poetic art known to human culture and civilization''.

K. S. Ramaswamy Sastry : '' A poem of traroscendental beauty and charm''.

Rabindranth Tagore ;

'' At youth's coronation, Kalidasa !
You took your seat.

Your beloved by your side in Love and
Primevel Paradise.

Earth spread its emerald green carpet
beneath your feet,

The sky held over your heads its company
gold embroidered''.

P. C. Lahrit : '' The Meghadutha is, in its own way, the finest elegiac poem the like of which is perhaps very difficult to find in the whole literature of the world.''

ಈ ಮೇಲಿನ ವಿದ್ವಾಂಸರುಗಳ ಅಭಿಪ್ರಾಯಗಳ ಸಾರವನ್ನು ಪೂರ್ವ ಪೀಠಿಕೆಯಲ್ಲಿಯೇ ಸೂಚಿಸಿರುವ ಕಾರಣ ಇವುಗಳ ಕನ್ನಡಾನುವಾದವು ಅನವಶ್ಯಕವೆಂದು ಬಗೆದು ಅದಕ್ಕೆ ಕೈಹಚ್ಚಿಲ್ಲ.

ಅನುವಾದ

ಮೇಘದೂತವೆಂಬ ಕಾವ್ಯವನ್ನು ಮಥಿಸಿ ಅದರಲ್ಲಡಗಿದ್ದ ತನಿರಸವೆಂಬ ಅಮೃತವನ್ನು ಸವಿದು ಆನಂದಿಸಿ ತಲೆದೂಗಿ ಮತ್ತು ಅದಕ್ಕೆ ಮರುಳಾಗಿ ಕವಿ

ಗರ್ಭವನ್ನು ಹೊರತರಲೆಳಸಿದ ವಿದ್ವಾಂಸರನೇಕರು (ಸುಮಾರು ಮೂವತ್ತೇಳು ಮಂದಿ) ತಮ್ಮ ಅಮೋಘವಾದ ವ್ಯಾಖ್ಯಾನಗಳನ್ನು ಆದಕ್ಕಳವಡಿಸಿರುವರೆಂಬ ವಿಷಯವನ್ನು ಈ ಹಿಂದೆಯೇ ಸೂಚಿಸಿದೆ. ಶ್ರುತಿ, ಸ್ಮೃತಿ. ವಿಜ್ಞಾನ, ಪುರಾಣ, ಇತಿಹಾಸಗಳು ಮಾತ್ರವಲ್ಲದೆ ವಿವಿಧ ಶಾಸ್ತ್ರಗಳಲ್ಲಿ ಪರಿಣತಿಯನ್ನು ಪಡೆದ ಇವರು ಆ ನೆರವಿನಿಂದ ಸಂಸ್ಕೃತ ಭಾಷೆಯಲ್ಲಿಯೇ ಅಮೋಘವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಸಂಸ್ಕೃತ ಭಾಷಾ ಪರಿಚಯವಿಲ್ಲದವರು ಕವಿಕುಲತಿಲಕನಾದ ಕಾಳಿದಾಸನ ಕಾವ್ಯಾಮೃತದ ರಸವನ್ನು ಸವಿಯುವ ಬಗೆಯೆಂತು? ಎಂದು ಆಲೋಚಿಸಿ ಉಭಯ ಭಾಷಾ ಪಾಂಡಿತ್ಯವನ್ನುಗಳಿಸಿದ ವಿದ್ವಾಂಸರನೇಕರು ಇತರರ ಪ್ರಯೋಜನವನ್ನು ಮನದಲ್ಲೆಣಿಸಿ. ಆಯಾ ದೇಶಭಾಷೆಯಲ್ಲಿಯೇ ಈ ಗ್ರಂಥವನ್ನು ಛಂದೋಬದ್ಧವಾಗಿ ಎರಕ ಹಾಕಲು ಪ್ರಯತ್ನಿಸಿರುತ್ತಾರೆ. ಬೆಂಗಾಲಿ, ಗುಜರಾತಿ, ಹಿಂದಿ. ಮಹಾರಾಷ್ಟ್ರ ಇವೇ ಮೊದಲಾದ ಉತ್ತರ ಭಾರತದ ಭಾಷೆಗಳಲ್ಲಿ ಪದ್ಯರೂಪವಾಗಿ ಅನುವಾದಿಸಿರುವುದು ಮಾತ್ರವಲ್ಲದೆ ತೆಲುಗು. ತಮಿಳು ಕನ್ನಡ ಮೊದಲಾದ ದ್ರಾವಿಡ ಭಾಷೆಗಳಲ್ಲಿಯೂ ಈ ಗ್ರಂಥದ ಅನುವಾದಗಳು ಬೆಳಕನ್ನು ಕಂಡಿವೆ. ಇಷ್ಟೇ ಅಲ್ಲದೆ ಕವಿಯ ಪ್ರತಿಭೆಗೆ ಮನಸೋತ ಪಾಶ್ಚಾತ್ಯ ವಿದ್ವಾಂಸರಿಂದ ಇಂಗ್ಲಿಷ್ ಜರ್ಮನ್. ಫ್ರೆಂಚ್, ರಷ್ಯನ್ ಭಾಷೆಗಳಲ್ಲಿಯೂ ಅನುವಾದ ಗ್ರಂಥಗಳು ಹೊರಬಿದ್ದು ಜನಪ್ರಿಯವಾಗಿವೆ. ಆದರೂ ಅನುವಾದಗಳು ಮೂಲ ಗ್ರಂಥದಲ್ಲಿನ ಕವಿಗರ್ಭವನ್ನು ಪೂರ್ಣವಾಗಿ ತರಲು ಸಾಧ್ಯವಿಲ್ಲವಾಗಿ 'ಅನುವಾದಕರು ಕೊಲೆಪಾತಕರು' ಎಂಬ ನಾಣ್ನುಡಿಗೆ ಎಡೆಗೂಟ್ಟಿದೆ. ಈ ವಿಷಯವನ್ನು ವಿಖ್ಯಾತ ಜರ್ಮನ್ ದೇಶದ ನಾಟಕ ಕರ್ತೃ ಗೈಟೆ ಎಂಬ ವಿದ್ವಾಂಸನು (ಕವಿಯ ಶಾಕುಂತಲ ನಾಟಕ ಮತ್ತು ಮೇಘದೂತ ಇವುಗಳನ್ನು ಅನುವಾದಿಸುವುದರಲ್ಲಿ ತನ್ನ ಅಶಕ್ತತೆಯನ್ನು ತಿಳಿದು) ಒತ್ತಿ ನುಡಿದಿರುವುದಲ್ಲದೆ ಎತ್ತಿ ತೋರಿಸಿದ್ದಾನೆ. ಇದೇ ಅಭಿಪ್ರಾಯವು ಉಳಿದೆಲ್ಲ ಭಾಷೆಗಳಲ್ಲಿನ ಅನುವಾಧಗಳಿಗೆ ಅನ್ವಯಿಸುವುದೆಂಬುದಕ್ಕೆ ಸಂದೇಹವೇ ಇರದು.

ಪ್ರಕೃತ ಕನ್ನಡ ಭಾಷೆಯಲ್ಲಿ ಈ ಕೃತಿರತ್ನಕ್ಕೆ ಬಗೆಬಗೆಯ ಅನುವಾದಗಳು ವಿವಿಧ ಛಂದೋರೂಪದಲ್ಲಿ ಪ್ರಕಟವಾಗಿವೆ. ಅನುವಾದಕರಲ್ಲಿ ಸಾಹಿತ್ಯರತ್ನಂ, ಆಸ್ಥಾನ ಮಹಾವಿದ್ವಾನ್ ಎಂಬ ಬಿರುದಾಂಕಿತರಾದ ವೇದಮೂರ್ತಿ ಬ್ರಹ್ಮಶ್ರೀ ಕುಕ್ಕೆಸುಬ್ರಹ್ಮಣ್ಯಶಾಸ್ತ್ರಗಳು, ಕರ್ನಾಟಕ ರಾಷ್ಟ್ರಕವಿಪರ್ಯ

ದ. ರಾ. ಬೇಂದ್ರೆ. ಕನ್ನಡ ಪ್ರಾಧ್ಯಾಪಕ ಪರಮೇಶ್ವರಭಟ್ಟ ಇವರನ್ನು ಮುಖ್ಯವಾಗಿ ಹೆಸರಿಸಬಹುದು. ಇವರ ಅನುವಾದಗಳು ವಿವಿಧ ಛಂದಸ್ಸಿನಲ್ಲಿವೆ. ಇಷ್ಟು ಅನುವಾದಗಳು ನಮಗೆ ಲಭ್ಯವಾಗಿದ್ದರೂ ಬೇರೊಂದು ಪದ್ಯರೂಪದ ಅನುವಾದಕ್ಕೆ ಎಡೆಯುಂಟೆ? ಎಂಬ ಪ್ರಶ್ನೆಗೆ ಕಾಳಿದಾಸನ ಕಾವ್ಯಗಳಿಗೆ ಅನೇಕ ವ್ಯಾಖ್ಯಾನಗಳಿರುವುದಕ್ಕೆ ಕಾರಣವೇನು ? ಪ್ರಸ್ಥಾನತ್ರಯಗಳಿಗೆ ವಿವಿಧ ಭಾಷ್ಯಗಳ ಅವಶ್ಯಕತೆಯೇನು ? ಎಂಬ ಪ್ರಶ್ನೆಗಳಿಗೆ ಸಲ್ಲುವ ಉತ್ತರವೇ ಇದಕ್ಕೂ ಅನ್ವಯಿಸುತ್ತದೆ. ಅಂದರೆ ಕವಿಗರ್ಭವನ್ನು ಹೊರ ತರುವುದರಲ್ಲಿ ಅನುವಾದಕರ ದೃಷ್ಟಿಕೋನಗಳು ಬೇರೆಬೇರೆಯೆಂಬುದೇ ಇಂತಹ ಶಂಕೆಗೆ ಸಮಾಧಾನ.

ಈ ಅನುವಾದದಲ್ಲಿ ಭಾಮಿನಿಷಟ್ಪದಿಯ ಔಚಿತ್ಯ

ಕವಿಯು ಮೂಲಗ್ರಂಥದಲ್ಲಿ ಮಂದಾಕ್ರಾಂತಾ'ವೃತ್ತವನ್ನು ಬಳಸಿರುತ್ತಾನೆ. ಪ್ರತಿ ಪಾದದಲ್ಲಿಯೂ ಹದಿನೇಳು ವರ್ಣಗಳಿದ್ದು ಅವುಗಳಲ್ಲಿ ನಾಲ್ಕು, ಆರು ಮತ್ತು ಏಳು ವರ್ಣಗಳ ಮೂರು ಯತಿಗಳು ಈ ವೃತ್ತಕ್ಕುಂಟು. ವೀಣೆಯಲ್ಲಿ ಗಾನ ಮಾಡುವುದಕ್ಕೆ ಯೋಗ್ಯವಾಗಿರುವಂಥ ವೃತ್ತವಿದು. ಈ ಅಭಿಪ್ರಾಯಕ್ಕೆ ಕವಿಯು ಪರೋಕ್ಷವಾದ ಸೂಚನೆಯನ್ನು ಉತ್ತರ ಮೇಘದ ಇಪ್ಪತ್ತೈದನೆಯ ಶ್ಲೋಕದಲ್ಲಿ ಕಾಣಬಹುದು. ಗಾನ ಯೋಗ್ಯವೆನಿಸಿದ ಈ ಕೃತಿಯ ಅನುವಾದವೂ ಕೂಡ ಗಮಕಿಗಳು ಸುಗಮವಾಗಿ ಹಾಡುವಂತಿರಬೇಕು. ಭಾಮಿನೀ ಷಟ್ಪದಿಯು ಈ ಉದ್ದೇಶವನ್ನು ಸಾಧಿಸತಕ್ಕದು ಎಂಬುದು ಬಲ್ಲವರ ಮತ. ಇದೂ ಅಲ್ಲದೆ ಸಂಸ್ಕೃತದ ಮಂದಾಕ್ರಾಂತಾ ವೃತ್ತದಲ್ಲಿ ಪ್ರತಿ ಪಾದದಲ್ಲಿನ ಹದಿನೇಳು ವರ್ಣಗಳು ಅಂದರೆ ಹತ್ತು ಗುರು ಮತ್ತು ಏಳು ಲಘು ಇವುಗಳು ಇಪ್ಪತ್ತೇಳು ಮಾತ್ರೆಗಳಿಗೆ ಸಮನಾಗುತ್ತದೆ. ಹೀಗೆ ಒಂದು ಶ್ಲೋಕದಲ್ಲಿ ಒಟ್ಟು ಅರವತ್ತೆಂಟು ವರ್ಣಗಳಿದ್ದು ನೂರೆಂಟು ಮಾತ್ರೆಗಳಿಗೆ ಸಮವೆನಿಸುತ್ತದೆ. ಕನ್ನಡ ಪದ್ಯಗಳಲ್ಲಿ ಅಂದರೆ ಷಟ್ಪದಿ ಮೊದಲಾದವುಗಳಲ್ಲಿ ಮಾತ್ರಾಗಣಗಳೇ ಹೆಚ್ಚು. ಭಾಮಿನೀ ಷಟ್ಪದಿಯಲ್ಲಿ ಒಂದು, ಎರಡು, ನಾಲ್ಕು, ಐದು ಪಾದಗಳಲ್ಲಿ ಪಾದಕ್ಕೆ ಹದಿನಾಲ್ಕು ಮಾತ್ರೆ

ಗಳಂತೆ ಒಟ್ಟು ಐವತ್ತಾರು ಮಾತ್ರೆಗಳೂ, ಮೂರು ಮತ್ತು ಆರನೇ ಪಾದಗಳಲ್ಲಿ ತಲಾ ಇಪ್ಪತ್ತಮೂರರಂತೆ ಒಟ್ಟು ನಲವತ್ತಾರು ಮಾತ್ರೆಗಳು. ಹೀಗೆ ಈ ಷಟ್ಪದಿಯು ಮೊತ್ತಕ್ಕೆ ನೂರೆರಡು ಮಾತ್ರೆಗಳಿಂದ ಕೂಡಿರುತ್ತದೆ. ಈ ಕಾರಣದಿಂದ ಮಂದಾಕ್ರಾಂತ ವೃತ್ತಕ್ಕೆ ಸರಿಹೋಗುವ ವೈಶಾಲ್ಯತೆ ಭಾಮಿನೀ ಷಟ್ಪದಿಯಲ್ಲಿರುವುದರಿಂದ ಆ ಶ್ಲೋಕದಲ್ಲಡಗಿರುವ ಭಾವ ತಾತ್ಪರ್ಯಗಳೆಲ್ಲವೂ ಈ ಷಟ್ಪದಿಯಲ್ಲಿ ತರಲು ಸಾಧ್ಯವೆಂದು ಬಗೆದು ಅದನ್ನೇ ಇಲ್ಲಿ ಅಳವಡಿಸಿಕೊಂಡಿದೆ. ವೇ|| ಬ್ರಂ|| ಶ್ರೀ|| ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು ಕುಸುಮ ಷಟ್ಪದಿಯನ್ನು ಬಳಸಿ ಒಂದು ಶ್ಲೋಕದ ತಾತ್ಪರ್ಯವನ್ನು ಅನುವಾದಕ್ಕಿಳಿಸಲು ಒಂದು ಷಟ್ಪದಿಯು ಸಾಕೆನಿಸದೆ ಕೆಲವೆಡೆ ಎರಡು ಶ್ಲೋಕಗಳಿಗೆ ಮೂರು ಷಟ್ಪದಿಗಳನ್ನು ಬಳಸಿಕೊಂಡಿದ್ದಾರೆ. ಒಂದು ಶ್ಲೋಕವನ್ನು ಒಂದು ಷಟ್ಪದಿಗೆ ಕುಗ್ಗಿಸಿದೆದು ಮೂಲ ಶ್ಲೋಕದಲ್ಲಿರುವ ಸಂಪೂರ್ಣ ಭಾವವು ಅನುವಾದದಲ್ಲಿರುವುದನ್ನು ಕಾಣಬಹುದು. ವಾರ್ಧಿಕ ಷಟ್ಪದಿಯ ವೈಶಾಲ್ಯ ಹೆಚ್ಚಿನದಾದುದರಿಂದ ಅನುವಾದದಲ್ಲಿ ಬಿಗಿ ತಪ್ಪಿ ಸಡಿಲವಾಗುವ ಸಂಭವವುಂಟು. ಈ ಮೇಲಿನ ಕಾರಣಗಳಿಂದ ಭಾಮಿನೀಷಟ್ಪದಿಯನ್ನೇ ಅನುವಾದದಲ್ಲಿ ಬಳಸಿಕೊಂಡು ಮೂಲದ ಒಂದೊಂದು ಶ್ಲೋಕಕ್ಕೆ ಅನುಗುಣವಾಗಿ ಒಂದೊಂದೇ ಷಟ್ಪದಿಯಂತೆ ಅನುವಾದದ ವ್ಯವಸ್ಥೆ ಕಲ್ಪಿಸಿದೆ.

ಅನುವಾದಕನ ಆಶಯ

ಕವಿ ರಚಿತವಾದ ಮೂಲ ಗ್ರಂಥವನ್ನು ಪಠಿಸುವಂದು ವಾಚಕನ ಮನೋಭಿತ್ತಿಯಲ್ಲಿ ನೆಲೆಸುವ ಚಿತ್ರಣವೇ ಅನುವಾದದಲ್ಲಿಯೂ ಬರಬೇಕೆಂಬುದು ಅನುವಾದಕನ ಆಶಯ. ಇದು ಕಷ್ಟಸಾಧ್ಯವೆಂಬ, ಮತ್ತು ಅದಕ್ಕೆ ತಕ್ಕ ಮೇಧಾಶಕ್ತಿಯ ಕೊರತೆ ತನಗಿವೆಯೆಂಬ ಅರಿವಿದ್ದರೂ ಅನುವಾದಕನು ಇಂತಹ ಸಾಹಸಕ್ಕೆ ಕೈಹಚ್ಚಿರುವುದು ತಿಳಿಗೇಡಿತನವೆಂಬುದು ನಿಶ್ಚಯ. ಆದರೂ ಜರ್ಮನ್ ಕವಿ ಗೈಟೆ ಹೇಳಿರುವಂತೆ ಗುರಿಸಾಧಿಸಲು ಪ್ರಯತ್ನಪಡದಿರುವುದಕ್ಕಿಂತಲೂ ಪ್ರಯತ್ನಿಸಿ ವಿಫಲನಾಗುವುದೇ ಲೇಸು ಎಂಬುದೇ ಈ ಅನುವಾದಕನ ಮನೋಭಾವ. ಈ ಅನುವಾದದ ಯೋಗ್ಯತೆ

ಯನ್ನು ಪ್ರಾಜ್ಞರು ಒರೆ ಹಚ್ಚಿ ನ್ಯೂನಾತಿರೇಕಗಳನ್ನು ತಿಳಿಯಪಡಿಸಿದರೆ ಮುಂದೆ ಅನುವಾದದ ಬಗೆಯನ್ನು ಉತ್ತಮಗೊಳಿಸಲು ಅವಕಾಶವಿದೆ. ಈ ಕಾರಣದಿಂದಲೇ ವಿಮರ್ಶಕರ ಅವಗಾಹನೆಗಾಗಿ ಮೂಲ ಶ್ಲೋಕ ಮತ್ತು ಅನುವಾದ ಇವುಗಳನ್ನು ಒಂದಾದ ಮೇಲೊಂದು ಬರುವ ಕ್ರಮವನ್ನನುಸರಿಸಿದೆ. ಈ ಕಾರಣದಿಂದ ಸಹೃದಯರು ತಮ್ಮ ನಿಷ್ಪಕ್ಷಪಾತವಾದ ಉತ್ತಮ ಸಲಹೆಗಳನ್ನು ಈ ದಿಕ್ಕಿನಲ್ಲಿ ನೀಡಿದುದೇ ಆದರೆ ಅನುವಾದಕನು ಅವರೆಲ್ಲರಿಗೂ ಚಿರಋಣಿ ಎಂಬುದನ್ನು ಈ ಮೂಲಕ ಬಿನ್ನಹವಮಾಡಿದೆ.

ಪದ್ಯಾನುವಾದದ ಅವಶ್ಯಕತೆ

ವಾಚಕರ ಬಳಕೆಗೆ ಗದ್ಯಾನುವಾದವು ಹೃದ್ಯವೆನಿಸಿದರೂ ವಿಷಯವು ಛಂದೋಬದ್ಧವಾದ ಪದ್ಯರೂಪದಲ್ಲಿದ್ದರೆ ಕಾವ್ಯವನ್ನು ಸುಲಭವಾಗಿ ನೆನಪಿನಲ್ಲಿಡಬಹುದು ಮತ್ತು ಅದನ್ನು ಮನನ ಮಾಡಿ ಅದರಿಂದೊಸರುವ ತನಿರಸವನ್ನು ಮತ್ತೆ ಮತ್ತೆ ಸವಿಯುತ್ತಿರಬಹುದು. ಈ ಗುರಿಯಿಂದಲೇ ಪದ್ಯಕಾವ್ಯಗಳ ರಚನೆ. ವೇದಾಂಗವೆನಿಸಿದ ಛಂದಶ್ಶಾಸ್ತ್ರದ ಉತ್ಪತ್ತಿಯೂ ಇದಕ್ಕಾಗಿಯೇ ಎಂಬುದು ತಜ್ಞರ ಅಭಿಪ್ರಾಯ. ಈ ಆಶಯವನ್ನು ಸಾಧಿಸುವ ಸಲುವಾಗಿ ಈ ಕೃತಿರತ್ನವನ್ನು ಸರಳವಾದ ಕನ್ನಡ ನುಡಿಗಳನ್ನೊಳಗೊಂಡ ಪದ್ಯರೂಪಕ್ಕಿಳಿಸಲು ಯತ್ನಿಸಿದೆ. ಈ ಹಾದಿಯಲ್ಲಿ ಅನುವಾದಕನ ಪ್ರಯತ್ನದ ಫಲವೆಷ್ಟು ಎಂಬುದು ವಾಚಕರಿಗೆ ಸಂಬಂಧಿಸಿದ ವಿಷಯ.

ಇತಿ,

ಬುರಗನಹಳ್ಳಿ ಭೀಮಸೇನಶರ್ಮಾ

(B. Bhimasena Rao)

ಮೇಘ ಸಂದೇಶ

ಪೂರ್ವಮೇಘ ಕನ್ನಡಾನುವಾದ

(ಭಾಮಿನೀ ಷಟ್ಪದಿ)

ಮೂಲ

ಶ್ಲೋಕ ಕಶ್ಚಿತ್‌ಕಾಂತಾ‡ವಿರಹಗುರುಣಾ ಸ್ವಾಧಿಕಾರಾತ್‌‡ಪ್ರಮತ್ತಃ।
॥೧॥ ಶಾಪೇನಾಸ್ತಂ-‡ಗಮಿತಮಹಿಮಾ‡ವರ್ಷಭೋಗ್ಯೇಣಭರ್ತುಃ॥
ಯಕ್ಷಃ ಚಕ್ರೇ‡ಜನಕತನಯಾ–‡ಸ್ನಾನಪುಣ್ಯೋದಕೇಷು ।
ಸ್ನಿಗ್ಧಚ್ಛಾಯಾ–‡ತರುಷು ವಸತಿಂ‡ರಾಮಗಿರ್ಯಾಶ್ರಮೇಷು ॥

ಶ್ಲೋಕ ತಸ್ಮಿನ್ನದ್ರೌ‡ಕತಿಚಿದಬಲಾ–‡ವಿಪ್ರಯುಕ್ತಃ ಸ ಕಾಮೀ ।
॥೨॥ ನೀತ್ವಾ ಮಾಸಾನ್‌‡ಕನಕವಲಯ-‡ ಭ್ರಂಶರಿಕ್ತಪ್ರಕೋಷ್ಠಃ ।
ಆಷಾಢಸ್ಯ‡ಪ್ರಥಮದಿವಸೇ ಮೇಘ‡ಮಾಶ್ಲಿಷ್ಟಸಾನುಂ ।
ವಪ್ರಕ್ರೀಡಾ–‡ಪರಿಣತಗಜ‡ಪ್ರೇಕ್ಷಣೀಯಂ ದದರ್ಶ ॥

ಶ್ಲೋಕ ತಸ್ಯ ಸ್ಥಿತ್ವಾ ‡ ಕಥಮಪಿ ಪುರಃ ‡ ಕೌತುಕಾಧಾನಹೇತೋಃ।
॥೩॥ ಅಂತರ್ಬಾಷ್ಪಃ‡ಚಿರ-ಮನುಚರೋ‡ರಾಜರಾಜಸ್ಯ ದಧ್ಯೌ ॥
ಮೇಘಾಲೋಕೇ‡ ಭವತಿ ಸುಖಿನೋಽ‡ ಪ್ಯನ್ಯಥಾವೃತ್ತಿಚೇತಃ
ಕಂಠಾಶ್ಲೇಷ-‡ಪ್ರಣಯಿನಿ ಜನೇ‡ಕಿಂ ಪುನಃ ದೂರಸಂಸ್ಥೇ ?॥

ಶ್ಲೋಕ ಪ್ರತ್ಯಾಸನ್ನೇ‡ ನಭಸಿ ದಯಿತಾ– ‡ ಜೀವಿತಾಲಂಬನಾರ್ಥೀ ।
॥೪॥ ಜೀಮೂತೇನ‡ಸ್ವಕುಶಲಮಯೀಂ‡ಹಾರಯಿಷ್ಯನ್‌ಪ್ರವೃತ್ತಿಂ॥
ಸ ಪ್ರತ್ಯಗ್ರೈಃ‡ಕುಟಜ ಕುಸುಮೈಃ‡ಕಲ್ಪಿತಾರ್ಘಾಯ ತಸ್ಮೈ।
ಪ್ರೀತಃ ಪ್ರೀತಿ-‡ಪ್ರಮುಖವಚನಂ‡ಸ್ವಾಗತಂ ವ್ಯಾಜಹಾರ ॥

ಅನುವಾದ: ತನಗೆ ವಹಿಸಿದ ಕಜ್ಜ ಕಲಸಲಿ- ।
ಕಿನೆಯು ಳಗಲಿಹ ಬರಿಸಬಾಳ್ಕಿಗೆ ।
ಧನದ ಶಪಿಸ ಲ್ಕೊರ್ವ ಯಕ್ಷಂ ಕೊರಗಿ ಕಳೆಗುಂದಿ
ಜನಕಸುತೆ ಮಿಾಯಲ್ಕೆ ತೀರ್ಥದ ।
ಘನತೆ ಜಲಕಿರೆ ನೆಳಲ ಮರಗಳ
ಮುನಿಗಳಾಶ್ರಮಗಳಲಿ ನೆಲಸಿದ ರಾಮಗಿರಿತಟದ

ಅನುವಾದ; ಆಗಿರಿಯ ಲಾಕಾಮಿ ಸತಿಯ ವಿ-।
ಯೋಗದಿಂ ಸೊರಗುತ್ತ ಹೊಂಬಳೆ ।
ನೀಗೆ ಬರಿಮುಂಗೈಗಳಲಿ ಹಲಕೆಲವು ತಿಂಗಳನು ॥
ಸಾಗಿಸಲ್ಕಾಷಾಢದಿನ ಮೊದ-
ಲಾಗೆ ಕಾರೊಂದಪ್ಪೆ ತಪ್ಪಲ-
ನಾಗ ಕಂಡನು ವಪ್ರಕೇಳಿಯ ಗಜದ ಸೊಂಪದಕೆ ॥

ಅನುವಾದ: ನಾರಿಸಂಗಕೆ ಬಯಕೆ ಪುಟ್ಟಿಪ ।
ಕಾರ ಮುಂಗಡೆ ನಿಂದು ಕು- ।
ಬೇರನಾ ಳೊಳಗಂಬನಿಯ ಲತಿಕಾಲ ಚಿಂತಿಸಿದಂ ॥
ನೀರದವ ಕಂಡೊಡನೆ ಮನದ ವಿ- ।
ಕಾರ ವಹು ದತಿಸುಖಿಗು ಮೆನೆ ಬಹು-
ದೂರವಿರೆ ಗಳವಪ್ಪಿ ಸುಖಿಸುವ ಜನಕೆ ಮತ್ತೇನು ? ॥

ಅನುವಾದ: ಶ್ರಾವಣವು ಬಳಿಸರಿಯ ಲಿನೆಯಳ ।
ಜೀವ ವುಳಿಸಲಿ ಕೆಳಸಿದಾ ಬಡ- ।
ಜೀವಿ ತನ್ನಯ ‡ ಕುಶಲವಾರ್ತೆಯ ಮುಗಿಲ ನೆರವಿಂದ ॥
ಓವಿ ತಾ ಗಿರಿ ಮಲ್ಲಿಗೆಯ ಹೊಸ- ।
ಹೂವ ತತಿಯಿಂ ದದಕೆ ಪೂಜಿಪ ।
ಸೇವೆ ಗೈದಾದರದ ಸವಿನುಡಿ ಯುಬ್ಬು ತವನೊರೆದಂ ॥

ಶ್ಲೋಕ ಧೂಮಜ್ಯೋತಿಃ‡ಸ್ಸಲಿಲಮರುತಾಂ‡ ಸನ್ನಿಪಾತಃ ಕ್ವ ಮೇಘಃ?।
॥೫॥ ಸಂದೇಶಾರ್ಥಾಃ‡ಕ್ವ ಪಟುಕರಣೈಃ‡ಪ್ರಾಣಿಭಿಃ ಪ್ರಾಪಣೀಯಾಃ ।
ಇತ್ಯೌತ್ಸುಕ್ಯಾತ್‡ಅಪರಿಗಣಯನ್‡ಗುಹ್ಯಕಃ ತಂ ಯಯಾಚೇ ।
ಕಾಮಾರ್ತಾ ಹಿ ‡ ಪ್ರಕೃತಿಕೃಪಣಾಃ ‡ ಚೇತನಾ ಚೇತನೇಷು ॥

ಶ್ಲೋಕ ಜಾತಂ ವಂಶೇ ‡ ಭುವನವಿದಿತೇ ‡ ಪುಷ್ಕಲಾವರ್ತಕಾನಾಂ ।
॥೬॥ ಜಾನಾಮಿತ್ವಾಂ‡ಪ್ರಕೃತಿ ಪುರುಷಂ‡ಕಾಮರೂಪಂಮಘೋನಃ॥
ತೇನಾರ್ಥಿತ್ವಂ‡ತ್ವಯಿ ವಿಧಿವಶಾತ್‡ದೂರಬಂಧುರ್ಗತೋಽಹಂ।
ಯಾಚ್ಞಾ ಮೋಘಾ‡ವರ ಮಧಿಗುಣೇ‡ನಾಧಮೇ ಲಬ್ಧಕಾಮಾ॥

ಶ್ಲೋಕ ಸಂತಪ್ತಾನಾಂ ‡ ತ್ವಮಸಿ ಶರಣಂ‡ತತ್ಪಯೋದ ಪ್ರಿಯಾಯಾಃ
॥೭॥ ಸಂದೇಶಂ ಮೇ ‡ ಹರ ಧನಪತಿ- ‡ ಕ್ರೋಧವಿಶ್ಲೇಷಿತಸ್ಯ ।
ಗಂತವ್ಯಾ ತೇ ‡ ವಸತಿ ರಲಕಾ-‡ನಾಮ ಯಕ್ಷೇಶ್ವರಾಣಾಂ ।
ಬಾಹ್ಯೋದ್ಯಾನ-‡ಸ್ಥಿತ-ಹರಶಿರ-‡ಶ್ಚಂದ್ರಿಕಾ ಧೌತಹರ್ಮ್ಯಾ ॥

ಶ್ಲೋಕ ತ್ವಾಮಾರೂಢಂ‡ಪವನಪದವಿಂ‡ಉದ್ಗೃಹೀತಾಲಕಾಂತಾಃ ।
॥೮॥ ಪ್ರೇಕ್ಷಿಷ್ಯಂತೇ ಪಥಿಕವನಿತಾಃ‡ಪ್ರತ್ಯಯಾ ದಾಶ್ವಸಂತ್ಯಃ
ಕಃ ಸನ್ನದ್ಧೇ‡ವಿರಹವಿಧುರಾಂ‡ತ್ವಯ್ಯು–ಪೇಕ್ಷೇತಜಾಯಾಂ।
ನ ಸ್ಯಾದನ್ಯೋ‡ಽಪ್ಯಹಮಿವ ಜನೋ‡ಯಃ ಪರಾಧೀನವೃತ್ತಿಃ॥

ಅನುವಾದ: ಮಿಂಚು_ಪೊಗೆ-ನೀರ್ಗಾಳಿ ಯಿವುಗಳ ।
ಸಂಚಯುದ ಮುಗಿಲೆತ್ತ ? ಕರಣಗ ।
ಳಿಂ ಚತುರ ಜೀವಿಗಳು ವಾರ್ತೆಯ ನೊಯ್ವ ಬಗೆಯತ್ತ ?
ಮುಂಚೆ ಯಿಂತೆಣಿಸದೆಯೆ ಯಕ್ಷನು ।
ಮಿಂಚಿ ದೆಣಿಕೆಯ ಲದಕೆ ಬಾಯ್ದೆರೆ- ।
ದಂ ಚರಾಚರಗಳಲಿ ಕಾಮಾಂಧರಿಗೆ ಮತಿ ಬರದೌ ॥

ಅನುವಾದ: ಅರಿವೆ ನೀ ನಿಂದ್ರಂಗೆ ಮೆಚ್ಚಿನ ।
ಪುರುಷ. ನಾಗುವೆ ಬಗೆದವೊಲು, ಜಗ- ।
ವರಿಯಲುದಿಸಿಹೆ ಪುಷ್ಕಲಾವರ್ತಕರ ವಂಶದಲಿ; ॥
ತರುಣಿ ಯಿಹಳತಿದೂರ ವಿಧಿಯಿಂ-. ।
ದಿರದೆ ಬೇಡುವ ನಿನ್ನೊಳಾಂ, ಗುಣ- ।
ವರ ನೊಳೆಣಿಕೆಯು ಲೋಪ ಲೇಸಧಮನೊಳು ಪಡೆವುದಕಿಂ ॥

ಅನುವಾದ: ಗತಿಯು ನೀಂ ಮನಬೆಂದರಿಗೆ, ।
ಪತಿಯು ಮುನಿಸಿಂ ಪ್ರಿಯಳು ನಗಲಿಹೆ ।
ಸತಿಗೆ ನನ್ನೀ ಸುಡಿಯು ನೊಯ್ಯೈಲ ಜಲದ ! ನೀನದರಿಂ ॥
ಹಿತನೆ ತೆರಳೈ ಯಕ್ಷರಲಕಾ- ।
ಪತಿಗೆ ಹೊರದೋಟಗಳ ನೆಲೆ ಪಶು- ।
ಪತಿಯು ತಲೆಸಸಿಜೊನ್ನ ವಾಪುರಸೌಧಗಳ ತೊಳೆಯೆ ॥

ಅನುವಾದ: ಗಾಳಿಬಟ್ಟೆ ಯಡರ್ದ ನಿನ್ನಂ ।
ಮೇಲೆ ಮುಂಗುರುಳೆತ್ತಿ ಪಥಿಕರ ।
ಲೋಲೆಯರು ನಿಟ್ಟಿಪರು ಬಿಸಿಯುಸಿರಳಿವ ನಮ್ಮುಗೆಯಿಂ
ಪೇಳು ನೀಂ ಹೊರಸೂಸ ಲಗಲಿಕೆ ।
ತಾಳಿದಿನೆಯುಳ ಮರೆವನಾರ್ ? ಪರ- ।
ರಾಳುತನದನ್ನಂತೆ ಜೀವಿಪನನ್ಯನಲ್ಲದೊಡೆ ॥

ಶ್ಲೋಕ ಮಂದಂ ಮಂದಂ‡ನುದತಿ ಪವನ-ಶ್ಚಾನುಕೂಲೋಯಥಾ ತ್ವಾಂ
||೯|| ವಾಮಶ್ಚಾಯಂ‡ನದತಿ ಮಧುರಃ‡ಚಾತಕಸ್ತೇ ಸಗಂಧಃ ||
ಗರ್ಭಾಧಾನ-‡ಕ್ಷಣಪರಿಚಯಾತ್‡ನೂನಮಾಬದ್ಧಮಾಲಾಃ ।
ಸೇವಿಷ್ಯಂತೇ‡ನಯನಸುಭಗಂ‡ಖೇ ಭವಂತಂ ಬಲಾಕಾಃ ॥

ಶ್ಲೋಕ ತಾಂ ಚಾವಶ್ಯಂ‡ದಿವಸಗಣನಾ-‡ತತ್ಪರಾ ಮೇಕಪತ್ನೀಂ ।
||೧೦|| ಅವ್ಯಾಪನ್ನಾ-‡ಮವಿಹತಗತಿಃ‡ದ್ರಕ್ಷ್ಯಸಿ ಭ್ರಾತೃಜಾಯಾಂ ।
ಆಶಾಬಂಧಃ‡ಕುಸುಮಸದೃಶಂ‡ಪ್ರಾಯಶೋಹ್ಯಂಗನಾನಾಂ ।
ಸದ್ಯಃಪಾತಿ‡ಪ್ರಣಯಿ ಹೃದಯಂ‡ವಿಪ್ರಯೋಗೇ ರುಣದ್ಧಿ ॥

ಶ್ಲೋಕ ಕರ್ತುಂ ಯಚ್ಚ‡ಪ್ರಭವತಿ ಮಹೀ-‡ಮುಚ್ಛಿಲೀಂದ್ರಾಮವಂಧ್ಯಾಂ
||೧೧|| ತತ್ಶ್ರುತ್ವಾ ತೇ‡ಶ್ರವಣಸುಭಗಂ‡ಗರ್ಜಿತಂ ಮಾನಸೋತ್ಕಾಃ ।
ಆಕೈಲಾಸಾತ್ ‡ ಬಿಸಕಿಸಲಯ- ‡ ಚ್ಛೇದಪಾಥೇಯವಂತಃ ।
ಸಂಪತ್ಸ್ಯಂತೇ ‡ ನಭಸಿ ಭವತೋ‡ರಾಜಹಂಸಾಃ ಸಹಾಯಾಃ ॥

ಶ್ಲೋಕ ಆಪೃಚ್ಛಸ್ವ‡ಪ್ರಿಯಸಖ ಮಮುಂ‡ತುಂಗ ಮಾಲಿಂಗ್ಯಶೈಲಂ ।
||೧೨|| ವಂದ್ಯೈಃಪುಂಸಾಂ§ರಘುಪತಿಪದೈ-§ರಂಕಿತಂ ಮೇಖಲಾಸು ॥
ಕಾಲೇ ಕಾಲೇ§ಭವತಿ ಭವತಾ§ಯಸ್ಯಸಂಯೋಗ-ಮೇತ್ಯ ।
ಸ್ನೇಹವ್ಯಕ್ತಿಃ§ಚಿರವಿರಹಜಂ§ಮುಂಚತೋ ಬಾಷ್ಪಮುಷ್ಣಂ ॥

ಅನುವಾದ: ಮೆಲ್ಲಮೆಲ್ಲನೆ ಸೊಗದೆಲರು ಮುಂ-।
ತಳ್ಳುವುದು ನಿನ್ನನ್ನು, ನಿನಗೆಡ-।
ದಲ್ಲಿನೀ ಚಾತಗಯು ಸುಲಿವುದು ಸೊಂಪಿನಿಂಪಿನಲಿ ।
ಕೊಳ್ಳೆ ಗಬ್ಬದ ಪರಿಚಯುವ ನಭ-।
ದಲ್ಲಿ ಸೊಗಯಿಪ ನಿನಗೆ ಸೇವೆಯು ।
ಸಲ್ಲಿಸುವುವು ಬಲಾಕಿಗಳು ನಿಜ ಸುತ್ತ ಸಾಲ್ಗಟ್ಟಿ ।

ಅನುವಾದ: ಪತಿಯು ನೆನಹಿಂ ದಸುವ ಪಿಡಿದಿಹ ।
ಪತಿಯು ಬಹ ದಿನದಿನದೆಣಿಕೆಯೊಳಗನು ।
ರತಳು ನಿನ್ನತ್ತಿಗೆಯು ತಡೆಯಿರದವಳ ನೀಂ ಕಾಂಬೈ ॥
ಸತಿಗಳೊಲುಮೆಯು ಮನವು ಪೂವೊಲು ।
ಪತಿಗಳಗಲಿಕೆಗೊಡನೆ ಬೀಳ್ವ-
ಸ್ಥಿತಿಯೊಳಿದೊರ್ಡ-ಮಾಸೆಯೆನೆ ಕಟ್ಟದಕೆ ತಡೆ ತಹುದೈ ॥

ಅನುವಾದ: ತಿಳಿಯೆ ನಾಯೊಗ್ಗಡೆ ಬೆಳಸ ನೆಬ್ಬಿಸು- ।
ತಿಳಿಯು ಬಂಜನು ಕಳೆವ ನಿನ್ನಯು ।
ಮೊಳಗಿ ನಿಂಪನು ಕೇಳು ತರಸಂಜೆಗಳು ಮಾನಸಕೆ ॥
ಎಳೆಸಿ ತಾವರೆ ತಳಿರ ತುಂಡನು ।
ಕೊಳುತ ತಮ್ಮಯು ಬುತ್ತಿಸ್ಸ ಗಾಗಸ- ।
ದೊಳಗೆ ನಿನ್ನೊಡ ನೈದುಷ್ಪವು ಕೈಲಾಸ ಗಿರಿವರೆಗುಂ ॥

ಅನುವಾದ. ನರರ ನತಿಗಿಹ ರಘುಜ ನಡಿಗಳ ।
ಗುರುತ ತಪ್ಪಲ ನುಳ್ಳ ದೀಗಿರಿ- ।
ಯುರುಗೆಳೆಯು ನುನ್ನತನು ಪೇಳ್ದವ ಗಪ್ಪಿ ನೀಂ ತೆರಳ್ಳೆ ॥
ಬರಬರಲು ಕಾಲದಲಿ ನಿನ್ನೊಡ- ।
ಬೆರೆತು ನೇಹವೆ ನಾತ ಸೂಸುವ- ।
ನಿರದೆ ಬಹುದಿನ ವಗಲ ಲ ದಿಸುವ ಬಿಸಿಯುಸಿರ ಬಿಡುತಂ ॥

ಶ್ಲೋಕ ಮಾರ್ಗಂ ತಾವತ್‌ ಶೃಣು ಕಥಯತಃ ತ್ವತ್ಪ್ರಯಾಣಾನುರೂಪಂ।
॥೧೩॥ ಸಂದೇಶಂ ಮೇ ತದನು ಜಲದ! ಶ್ರೋಷ್ಯಸಿ ಶ್ರೋತ್ರಪೇಯಂ ॥
ಖಿನ್ನಃ ಖಿನ್ನಃ ಶಿಖರಿಷು ಪದಂ ನ್ಯಸ್ಯ ಗಂತಾಸಿ ಯತ್ರ ।
ಕ್ಷೀಣಃ ಕ್ಷೀಣಃ ಪರಿಲಘು ಪಯಃ ಸ್ರೋತಸಾಂ ಚೋಪಯುಜ್ಯ॥

ಶ್ಲೋಕ ಅದ್ರೇಃ ಶೃಂಗಂ ಹರತಿ ಪವನಃ ಕಿಂಸ್ವಿದಿತ್ಯುನ್ಮುಖೀಭಿಃ ।
॥೧೪॥ ದೃಷ್ಟೋತ್ಸಾಹಃ ಚಕಿತಚಕಿತಂ ಮುಗ್ಧಸಿದ್ಧಾಂಗನಾಭಿಃ ॥
ಸ್ಥಾನಾದಸ್ಮಾತ್‌ ಸರಸನಿಚುಳಾ- ದುತ್ಪತೋದಙ್ಮುಖಃ ಖಂ ।
ದಿಙ್ನಾಗಾನಾಂ ಪಥಿ ಪರಿಹರನ್ ಸ್ಥೂಲಹಸ್ತಾವಲೇಪಾನ್ ॥

ಶ್ಲೋಕ ರತ್ನಚ್ಛಾಯಾ ವ್ಯತಿಕರ ಇವ ಪ್ರೇಕ್ಷ್ಯಮೇತತ್ ಪುರಸ್ತಾತ್ ।
॥೧೫॥ ವಲ್ಮೀಕಾಗ್ರಾತ್ ಪ್ರಭವತಿ ಧನುಃ- ಖಂಡ ಮಾಖಂಡಲ ॥
ಯೇನ ಶ್ಯಾಮಂ ವಪುರತಿತರಾಂ ಕಾಂತಿ ಮಾಪತ್ಸ್ಯತೇ ತೇ ।
ಬರ್ಹೇಣೇವ ಸ್ಫುರಿತರುಚಿನಾ ಗೋಪವೇಷಸ್ಯ ವಿಷ್ಣೋಃ ॥

ಶ್ಲೋಕ ತ್ವಯ್ಯಾಯತ್ತಂ ಕೃಷಿಫಲಮಿತಿ ಭ್ರೂವಿಕಾರಾನಭಿಜ್ಞೈಃ ।
॥೧೬॥ ಪ್ರೀತಿಸ್ನಿಗ್ಧೈಃ ಜನಪದವಧೂ- ಲೋಚನೈಃ ಪೀಯಮಾನಃ॥
ಸದ್ಯಃ ಸೀರೋ ತ್ಕಷಣಸುರಭಿ ಕ್ಷೇತ್ರ ಮಾರುಹ್ಯ ಮಾಲಂ ।
ಕಿಂಚಿತ್ ಪಶ್ಚಾತ್ ವ್ರಜಲಘುಗತಿಃ ಭೂಯ ಏವೋತ್ತರೇಣ॥

ಅನುವಾದ; ನಿನ್ನ ಪಯಣಕ್ಕೆ ತಕ್ಕ ಹಾದಿಯ ।
ಮುನ್ನ ಪೇಳುವೆ ಕೇಳು. ಕಿವಿಗುಡಿ- ।
ವೆನ್ನ ನುಡಿ ನೀ ನುಯ್ವುದನು ಬಳಿಕಾಲಿಪ್ಪೈ ಜಲದ ! ॥
ಇನ್ನು ನೀಂ ಬಳಬಳಲೆ ಕುಳಿಕುಳಿ- ।
ತುನ್ನತದ ಗಿರಿಗಳಲಿ ಪಯಣಿಸು ।
ಸಣ್ಣಸಣ್ಣಗೆ ನವೆಯ ತೊರೆಗಳ ತಿಳಿಯ ನೀರ್ಮೊಗೆಯ್ಯೆ ॥

ಅನುವಾದ: ಗಿರಿಯ ಶಿಖರವ ನನಿಲನೇ ನಪ- ।
ಹರಿಪನೆಂದೆನೆ ಬೆಚ್ಚಿ ಸಿದ್ಧರ ।
ತರುಣಿಯರು ಮೊಗ ಮೆತ್ತಿ ಸೋಜಿಗ ದರಿಯ ದೀಕ್ಷಿಸಲು ।
ಸರಸನಿಚುಳಗ ಳಿಕ್ಕೆ ಯಿಡಕು- ।
ತ್ತರದ ದಿಸೆಯಾಂಗಸಕೆ ಚಿಗಿದಿ- ।
ಕ್ಕರಿಗಳುರುಗೈ ತೋರ್ಪ ಸೊಕ್ಕನು ಪಥದೊಳಿಳಿಸುತ್ತ ॥

ಅನುವಾದ; ಪರಿಪರಿಯ ರನ್ನಗಳ ಹೊಳಪಿನ ।
ಬೆರೆಕೆಯೊಲು ಕಂಗೊಳಿಪ ದಿಂದ್ರನ ॥
ವರಧನುವ ತುಂಡಿದು ಜನಿಪ್ಪುದಾ-ಹುತ್ತದಂಚಿನಲಿ ॥
ಮೆರುಗು ಹಿರಿದದರಿಂದ ಸಿನ್ನೀ- ।
ಕರಿಯ ತನುವಿಗೆ ಗೋಪವೇಷದ ।
ಹರಿಯ ದೇಹಕೆ ನವಿಲುಗರಿಯಿಂ ಸೊಬಗು ಬೆಳೆವಂತೆ ॥

ಅನುವಾದ: ನಿನಗದೀನವು ಕೃಷಿಯ ಫಲವೆಂ- ।
ದೆನುತ ಹಳ್ಳಿಯ ಹೆಂಗಳೊಲವಿನ ।
ಹೊಸಲ ಮೊಣ್ ಹುಬ್ಬಾಟ ವರಿಯದ ಕಂಗಳಿಂ ಪೀರ್ದು:
ತನಿಯುಳುಮೆ ಯಿನಿಗಂಪ ಮಾಲೇ- ।
ದೆನಿಪ ತಪ್ಪಲ ಹೊಲವ ನೇರುತ- ।
ಲೆನಿಸು ಪಿಂದಕೆ ಸರಿದು ಹಗುರಿಂ ದುತ್ತರಕೆ ಸರಿ ಮತ್ತೆ ॥

ಶ್ಲೋಕ ತ್ವಾಮಾಸಾರ-‡ಪ್ರಶಮಿತವನೋ-‡ಪಪ್ಲವಂ ಸಾಧು ಮೂರ್ಧ್ನಾ
॥೧೭॥ ವಕ್ಷ್ಯತ್ಯಧ್ವ-‡ ಶ್ರಮಪರಿಗತಂ‡ ಸಾನುಮಾನಾಮ್ರಕೂಟಃ॥
ನ ಕ್ಷುದ್ರೋಽಪಿ‡ಪ್ರಥಮ ಸುಕೃತಾ-‡ ಪೇಕ್ಷಯಾಸಂಶ್ರಯಾಯ।
ಪ್ರಾಪ್ತೇ ಮಿತ್ರೇ‡ಭವತಿ ವಿಮುಖಃ‡ಕಿಂ ಪುನಃಯಸ್ತಥೋಚ್ಚೈಃ॥

ಶ್ಲೋಕ ಛನ್ನೋಪಾಂತಃ‡ಪರಿಣತ ಫಲ-‡ ದ್ಯೋತಿಭಿಃ ಕಾನನಾಮ್ರೈಃ।
॥೧೮॥ ತ್ವಯ್ಯಾರೂಢೇ ಶಿಖರ ಮಚಲಃ‡ ಸ್ನಿಗ್ಧವೇಣೀಸವರ್ಣೇ॥
ನೂನಂ ಯಾಸ್ಯ-‡ತ್ಯಮರಮಿಥುನ-‡ಪ್ರೇಕ್ಷಣೀಯಾಮವಸ್ಥಾಂ।
ಮಧ್ಯೇ ಶ್ಯಾಮಃ‡ಸ್ತನ ಇವ ಭುವಃ‡ಶೇಷವಿಸ್ತಾರಪಾಂಡುಃ॥

ಶ್ಲೋಕ ಸ್ಥಿತ್ವಾ ತಸ್ಮಿನ್‡ವ ನಚರವಧೂ-‡ ಭುಕ್ತಕುಂಜೇ ಮುಹೂರ್ತಂ।
॥೧೯॥ ತೋಯೋತ್ಸರ್ಗ-‡ ದ್ರುತತರಗತಿಃ‡ತತ್ಪರಂ ವರ್ತ್ಮ ತೀರ್ಣಃ॥
ರೇವಾಂ ದ್ರಕ್ಷ-‡ಸ್ಯುಪಲವಿಷಮೇ‡ವಿಂಧ್ಯಪಾದೇ ವಿಶೀರ್ಣಾಂ।
ಭಕ್ತಿಚ್ಛೇದೈ-‡ ರಿವ ವಿರಚಿತಾಂ ‡ ಭೂತಿ ಮಂಗೇ ಗಜಸ್ಯ॥

ಶ್ಲೋಕ ತಸ್ಯಾಸ್ತಿಕ್ತೈಃ‡ವನಗಜಮದೈಃ‡ವಾಸಿತಂ ವಾಂತವೃಷ್ಟಿಃ।
॥೨೦॥ ಜಂಬೂಕುಂಜ-‡ಪ್ರತಿಹತರಯಂ‡ತೋಯ ಮಾದಾಯ ಗಚ್ಛೇ।
ಅನ್ತಸ್ಸಾರಂ‡ಘನ!ತುಲಯಿತುಂ‡ನಾನಿಲಃ ಶಕ್ಷ್ಯತಿ ತ್ವಾಂ।
ರಿಕ್ತಃ ಸರ್ವೋ‡ಭವತಿ ಹಿ ಲಘುಃ‡ಪೂರ್ಣತಾ ಗೌರವಾಯ॥

ಅನುವಾದ: ನೀರಧಾರೆಯು ಲಡವಿವೆಂಕಿಯು-।
ನಾರಿಸಿದ ಮೇಣ್ ಹಾದಿ ಬಳಲಿನ ।
ಕಾರೆ ! ನಿನ್ನನು ತಲೆಗಿಡುವ ನೊಲಿದಾಮ್ರಕೂಟಗಿರಿ ॥
ಕೋರಿ ತನ್ನಾಸರೆಗೆ ಗೆಳೆಯಂ ।
ಸಾರೆ ಮೊಗದಿರುಪ ನೆನೆ ಮೊದಲುಪ- ।
ಕಾರವಂ ನೆನೆ ದಲ್ಪನುಂ ಶ್ರೇಷ್ಠನೊಳು ಮತ್ತೇನು? ॥

ಅನುವಾದ: ಬಣ್ಣ ಕರಿಜಡೆ ನುಣ್ಪ ಪ್ರೋ ಲುವ ।
ನಿನ್ನ ನೆಲೆಯಿರೆ ಮಲೆಯ ತುದಿಯಲಿ ।
ಹಣ್ಣು ಪಣ್ಣೀರು ವಡವಿ ಮಾಮರ ಸುತ್ತ ಕವಿದಿರಲು ||
ತನ್ನ ನಡು ಕಪ್ಪೆತ್ತಲುಂ ಬಿಳಿ- ।
ಬಣ್ಣವಿರೆ ತಿರೆವೆಣ್ಣ ಮೊಲೆಯೊಲು ।
ಕಣ್ಣ ತಣಿಸುವು ದಮರದಂಪತಿಗಳಿಗೆ ಶೈಲವದು ॥

ಅನುವಾದ: ಬೇಡರಂಗನೆಯುರಿಗೆ ಸುಖಗಳ।
ನೀಡುತಿಹ ಹೊದರುಗಳ ಗಿರಿಯಲಿ ।
ಕೂಡುತಲಿ ತುಸುಹೊತ್ತು ನೀಂ ನೀ ರ್ಗಾರಿ ಮುಂದೋಡೆ ॥
ನೋಡುವೈ ವಿಂಧ್ಯಾದ್ರಿತಟದೊಳ- ।
ಗೋಡಿ ಕಲ್ಗಳ ಲೊಡೆದ ರೇವೆಯ ।
ಮೋಡಿಯನು ಗಜದೊಡಲ ಸಿಂಗರ ಕಟ್ಟ ಗೆರೆಗಳೊಲು ॥

ಆನುವಾದ; ಮಳೆಯ ಕಾರುತ ಲಡವಿ ಯಾನೆಯ ಮದ- ।
ಜಲದ ಕಂಪಿನ ನೇರಳೆಯ ಪೊದೆ- ।
ಗಳಲಿ ವೇಗವು ಕುಗ್ಗಿದಾ ನದಿಯೆಂಬ ಸವಿದು ಸರಿ ॥
ಒಳಗೆ ತುಂಬಿರೆ ಸಾರ ನಿನ್ನಂ ।
ಜಲದ ! ಕದಲಿಡ ಲಾರನನಿಲಂ ।
ತಿಳಿಯ ಹಗುರಹನೆಲ್ಲ ಬಡವಂ ತುಂಬೆ ಗುರುವಹನು ॥

ಶ್ಲೋಕ ನೀಪಂ ದಷ್ಟ್ವಾ ‡ ಹರಿತಕಪಿಶಂ ‡ ಕೇಸರೈ ರರ್ಧರೂಢೈಃ ।
॥೨೧॥ ಆವಿರ್ಭೂತಂ-‡ಪ್ರಥಮಮುಕುಳಾಃ‡ಕಂದಳೀಶ್ಚಾನುಕಚ್ಛಂ ॥
ಜಗ್ಧ್ವಾಽರಣ್ಯೇ- ‡ ಷ್ವಧಿಕಸುರಭಿಂ ‡ ಗಂಧ ಮಾಘ್ರಾಯ
ಚೋರ್ವ್ಯಾಃ ।
ಸಾರಂಗಾಸ್ತೇ ‡ ಜಲಲವಮುಚಃ ‡ ಸೂಚಯಿಷ್ಯಂತಿ ಮಾರ್ಗಂ ॥

ಶ್ಲೋಕ ಅಂಭೋಬಿಂದು- ‡ ಗ್ರಹಣಚತುರಾರ್ ‡ ಚಾತಕ್ಷಾರ್ ‡
॥೨೨॥ ವೀಕ್ಷಮಾಣಾಃ ।
ಶ್ರೇಣೀಭೂತಾಃ ‡ ಪರಿಗಣನಯಾ ‡ ನಿರ್ದಿಶಂತೋ ಬಲಾಕಾಃ ।
ತ್ವಾ ಮಾಸಾದ್ಯ ‡ ಸ್ತನಿತಸಮಯೇ ‡ ಮಾನಯಿಷ್ಯಂತಿ ಸಿದ್ಧಾಃ ।
ಸೋತ್ಕಂಠಾನಿ ‡ ಪ್ರಿಯಸಹಚರೀ- ‡ ಸಂಭ್ರಮಾಲಿಂಗಿತಾನಿ ॥

ಶ್ಲೋಕ ಉತ್ಪಶ್ಯಾಮಿ ‡ ದ್ರುತಮಪಿ ಸಖೇ ! ಮತ್ಪ್ರಿಯಾರ್ಥಂ
॥೨೩॥ ಯಿಯಾಸೋಃ ।
ಕಾಲಕ್ಷೇಪಂ ‡ ಕಕುಭಸುರಭೌ ‡ ಪರ್ವತೇ ಪರ್ವತೇ ತೇ ॥
ಶುಕ್ಲಾಪಾಂಗೈಃ ‡ ಸಜಲನಯನೈಃ ‡ ಸ್ವಾಗತೀಕೃತ್ಯ ಕೇಕಾಃ ।
ಪ್ರತ್ಯುದ್ಯಾತಃ ‡ ಕಥಮಪಿ ಭವಾನ್ ‡ ಗಂತು ಮಾಶು
ವ್ಯವಸ್ಯೇತ್ ? ॥

ಶ್ಲೋಕ ಪಾಂಡುಚ್ಛಾಯೋ- ‡ ಪವನವೃತಯಃ ‡ ಕೇತಕೈಃ
॥೨೪॥ ಸೂಚಿಭಿನ್ನೈಃ ।
ನೀಡಾರಂಭೈಃ ‡ ಗೃಹಬಲಿಭುಜಾ- ‡ ಮಾಕುಲಗ್ರಾಮಚೈತ್ಯಾಃ ॥
ತ್ವಯ್ಯಾಸನ್ನೇ ‡ ಪರಿಣತ ಫಲ- ‡ ಶ್ಯಾಮಜಂಬೂವನಾಂತಾಃ ।
ಸಂಪತ್ಸ್ಯಂತೇ ‡ ಕತಿಪಯದಿನ-‡ಸ್ಥಾಯಿ ಹಂಸಾಃ ದಶಾರ್ಣಾಃ ॥

ಅನುವಾದ; ಅರೆವೊಳೆತ ಕರಿಹಸರು ಕಂದಲಿ ।
ಮೆರೆವ ಕೇಸರ ವುಳ್ಳ ನೀಪವ ।
ತರಿದು ಜೌಗಲಿ ಹೊಸಮುಕುಳ ನೆಲಬಾಳೆಗಳ ಮೆದ್ದು ॥
ಧರಣ ಯುರುಗಂಪಿಂಪ ಮೂಸಿಸು– ।
ತಿರುವ ಸಾರಂಗಗಳು ಸೂಚಿಪು– ।
ವಿರದ ಲಡವಿಗಳೊಳಗೆ ನೀಂ ಮಳೆ–ಗರೆವ ಹಾದಿಯನು ॥

ಅನುವಾದ: ಕುಡಿಯೆ ಮಳೆಹನಿಗಳನು ನಭದಲಿ ।
ಪಿಡಿವ ಜಾಣ್ಮೆಯ ಚಾದಗೆಗಳಂ ।
ಬಿಡದೆ ನಿಟ್ಟಿಪ ಸಾಲುಗೊಂಡ ಬಲಾಕಿಗಳ ನೆಣಿಸೆ ॥
ಸಡಗರದಿ ಕೈ ತೋರ್ವ ಸಿದ್ಧರು ।
ಗುಡುಗುವಂ ದುರು ಬೆದರಿ ದಿನೆಯರು ।
ಬಿಡಿದು ತಬ್ಬುವ ಸೊಗವ ನೊಂದುತ ನಿನ್ನ ಮನ್ನಿಪರೈ ॥

ಅನುವಾದ: ಗೆಳೆಯ ! ಹಿತವೆನಗೆಸಗೆ ಧಾವಿಸಿ– ।
ಲೆಳಸಿದರು ಗಿರಿಮೊಲ್ಲೆಗಂಪಿಹ ।
ಮಲೆಮಲೆಗಳಲಿ ನಿನಗೆ ತಡವಹು ದೆನುತಲೂಹಿಪೆನು ॥
ಬಿಳುಪು ಕಣ್ಣೊನೆಯುಂಬು ನವಿಲಿಗೆ ।
ತುಳುಕೆ ಕೇಕಾದನಿಯ ನೊಲವಿಂ ।
ಕೊಳುತ ನೀನಿರ ದೆಂತೊ ಬೇಗನೆ ತೆರಳಲನುವಾಗೈ ॥

ಅನುವಾದ: ಪುರದ ಹೊರತೋಟಗಳ ಬೇಲಿಗೆ ।
ಬಿರಿದ ಕೇದಿಗೆ ಬಿಳುಹುದು ಸಾ– ।
ಲ್ಮರಗಳಲಿ ಕಾಗೆಗಳು ಗೂಡನು ಕಟ್ಟಲೆರಸುವುವು ॥
ಬರಲು ನೀಂ ನೇರಳೆಯ ಬನಗಳು ।
ಕರಿಯ ಹಣ್ಣಲಿ ಮೆರೆವು ವಂಚೆಗ– ।
ಳಿರದೆ ಬಹುದಿನ ನೆಲೆಸುತಿಹವು ದಶಾರ್ಣನಾಡಿನೊಳು

ಶ್ಲೋಕ ತೇಷಾಂ ದಿಕ್ಷು ‡ ಪ್ರಥಿತವಿದಿಶಾ- ‡ ಲಕ್ಷಣಾಂ ರಾಜಧಾನೀಂ ।
॥೨೫॥ ಗತ್ವಾ ಸದ್ಯಃ ‡ ಫಲಮವಿಕಲಂ ‡ ಕಾಮುಕತ್ವಸ್ಯ ಲಬ್ಧಾ ॥
ತೀರೋಪಾಂತ- ‡ ಸ್ತನಿತಸುಭಗಂ ‡ ಪಾಸ್ಯಸಿ ಸ್ವಾದು ಯತ್ತ್ರಾತ್ ।
ಸಭ್ರೂಭಂಗಂ‡ಮುಖಮಿವ ಪಯಃ ‡ ವೇತ್ರವತ್ಯಾಃ ಚಲೋರ್ಮಿ ॥

ಶ್ಲೋಕ ನೀಚೈರಾಖ್ಯಂ ‡ ಗಿರಿಮಧಿವಸೇಃ ‡ ತತ್ರ ವಿಶ್ರಾಮಹೇತೋಃ ।
॥೨೬॥ ತ್ವತ್ಸಂಪರ್ಕಾತ್ ‡ ಪುಲಕಿತಮಿವ ‡ ಪ್ರೌಢಪುಷ್ಪೈಃ ಕದಂಬೈಃ ॥
ಯಃ ಪಣ್ಯಸ್ತ್ರೀ-‡ರತಿಪರಿಮಳೊ- ‡ ದ್ಗಾರಿಭಿಃ ನಾಗರಾಣಾಂ ।
ಉದ್ದಾಮಾನಿ ‡ ಪ್ರಥಯತಿ ಶಿಲಾ-‡ ವೇಶ್ಮಭಿಃ ಯೌವನಾನಿ ॥

ಶ್ಲೋಕ ವಿಶ್ರಾಂತ ಸ್ಸನ್ ‡ ವ್ರಜ ವನನದೀ-‡ ತೀರಜಾತಾನಿ ಸಿಂಚನ್ ।
॥೨೭॥ ಉದ್ಯಾನಾನಾಂ ‡ ನವಜಲಕಣೈಃ ‡ ಯೂಧಿಕಾಜಾಲಕಾನಿ ॥
ಗಂಡಸ್ವೇದಾಽ ‡ ಪನಯನರುಜಾ- ‡ ಕ್ಲಾಂತಕರ್ಣೋತ್ಪಲಾನಾಂ ।
ಛಾಯಾದಾನಾತ್‡ ‡ ಕ್ಷಣಪರಿಚಿತಃ ‡ ಪುಷ್ಪಲಾವೀಮುಖಾನಾಂ ॥

ಶ್ಲೋಕ ವಕ್ರಃ ಪಂಥಾಃ ‡ ಯದಪಿ ಭವತೋ ‡ ಪ್ರಸ್ಥಿತಸ್ಯೋತ್ತರಾಶಾ ।
॥೨೮॥ ಸೌಧೋತ್ಸಂಗ ‡ ಪ್ರಣಯಿ ವಿಮುಖೋ ‡ ಮಾಸ್ಮಭೂ
ರುಜ್ಜಯಿನ್ಯಾಃ ॥
ವಿದ್ಯುದ್ದಾಮಾ- ‡ ಸ್ಫುರಿತಚಕಿತೈಃ ‡ ಯತ್ರ ಪೌರಾಂಗನಾನಾಂ ।
ಲೋಲಾಪಾಂಗೈಃ ‡ ಯದಿ ನ ರಮಸೇ ‡ಲೋಚನೈಃವಂಚಿತಃ ಸ್ಯಾಃ

ಅನುವಾದ : ದಿಸೆಗಳಲಿ ಜಸಗೊಂಡ ವಿದಿಶೆಯು ।
ವಸತಿ ಯಾನಾಡಾಳ್ವರಿಗೆ ಸುರತದ ।
ರಸಕೆ ಕೊಂಕದ ಫಲವು ನಿನಗಹು ದಲ್ಲಿ ಪೋದೊಡನೆ ॥
ಬೆಸೆದ ಹುಬ್ಬಲಿ ಸೊಬಗಿನಿಂ ಗುಡು- ।
ಗಿಸುತ ತಡಿಯೆಡೆ ಚಲಿಸು ವಲೆಗಳ ।
ರಸವ ಸವಿಯುವೆ ವೇತ್ರವತಿತೊರೆವೆಣ್ಣ ಮೊಗವೆನಲು ॥

ಅನುವಾದ : ಬಳಿಯು ನೀಚೈ ಪೆಸರ ಗಿರಿಯೊಳು ।
ಬಳಲಿಕೆಯು ಕಳೆ ನಿನ್ನ ಸೋಂಕಲಿ ।
ಪುಲಕ ಮಾಂತುದೋ ಗಿರಿಯೆನಲು ಪೂತುಪ್ಪವು ನೀಪಗಳು ॥
ಬೆಲೆಯು ಪೆಣ್ಗಳ ರತಿಸುಗಂಧವ ।
ತುಳುಕಿ ಪಲ್ಲಿನ ಕಲ್ಲಮನೆಗಳು ।
ಹೊಳಲ ಜನ ಯೌವನದ ಮೇಲ್ಮೆಯ ನಿರವ ಪೊಗಳುವುವು

ಅನುವಾದ ; ಅಲ್ಲಿ ತಣಿಗೊಂಡಡವಿತೊರೆ ತಡಿ- ।
ಯಲ್ಲಿನುಪವನದಲ್ಲಿ ಬೆಳೆದಿಹ ।
ಮೊಲ್ಲೆ ಮುಗುಳಂ ನೆನೆಸು ಹೊಸಹನಿಗಳಲಿ ಪೂಗೊಯ್ವ ॥
ಚೆಲ್ಲೆಯರು ಕೆನ್ನೆ ಬೆವರಂ ತೊಡೆ- ।
ವಲ್ಲಿ ಕಿವಿನೈದಿಲೆಯು ಸೊರಗಲಿ- ।
ಕಲ್ಲಿ ನೆಳಲಿತ್ತೊಡನೆ ಪರಿಚಯವಿತ್ತು ನೀಂ ತೆರಳೈ ॥

ಅನುವಾದ ; ಉತ್ತರಕೆ ನೀಂ ಸರಿವ ಹಾದಿಯು ।
ಸುತ್ತುಗೊಂಡರು ಮುಜ್ಜಯಿನಿಯೆನೆ ।
ಪತ್ತನದಮಹಡಿಗಳತೊಡೆಗೇರ್ವ ಮೊಗ ತಿರುಹದಿರು ॥
ಸುತ್ತ ಮಿರುಗುವ ಮಿಂಚುಬಳ್ಳಿಗೆ ।
ತತ್ತರಿಪ ಸುಂದರಿಯ ರಲು ।
ಗುತ್ತಿರುವ ಕಣ್ಗೊನೆಗಳತಿಸುಖ ವಿರದೊಡದುಮೋಸಂ ॥

ಶ್ಲೋಕ ವೀಚೀಕ್ಷೋಭ-‡ ಸ್ತನಿತವಿಹಗ-‡ ಶ್ರೇಣಿಕಾಂಚೀಗುಣಾಯಾಃ ।
॥೨೯॥ ಸಂಸರ್ಪಂತ್ಯಾಃ ‡ ಸ್ಖಲಿತಸುಭಗಂ ‡ ದರ್ಶಿತಾವರ್ತನಾಭೇಃ ॥
ನಿರ್ವಿಂಧ್ಯಾಯಾಃ ‡ ಪಥಿ ಭವ ರಸಾ-‡ ಭ್ಯಂತರಃ ಸನ್ನಿಪತ್ಯ ।
ಸ್ತ್ರೀಣಾ ಮಾದ್ಯಂ ‡ ಪ್ರಣಯಿ ವಚನಂ ‡ ವಿಭ್ರಮೋ ಹಿ ಪ್ರಿಯೇಷು ।

ಶ್ಲೋಕ ವೇಣೀಭೂತ- ‡ ಪ್ರತನು ಸಲಿಲಾ ‡ ಸಾ ತ್ವತೀತಸ್ಯ ಸಿಂಧುಃ ।
॥೩೦॥ ಪಾಂಡುಚ್ಛಾಯಾ-‡ ತಟರುಹತರು-‡ ಭ್ರಂಶಿಭಿಃ ಜೀರ್ಣಪರ್ಣೈಃ ॥
ಸೌಭಾಗ್ಯಂ ತೇ ‡ ಸುಭಗ! ವಿರಹಾ- ‡ ವಸ್ಥಯಾವ್ಯಂಜಯಂತೀ।
ಕಾರ್ಶ್ಯಂ ಯೇನ ‡ ತ್ಯಜತಿ ವಿಧಿನಾ ‡ ಸತ್ವಯೈವೋಪಪಾದ್ಯಃ ॥

ಶ್ಲೋಕ ಪ್ರಾಪ್ಯಾವಂತೀ ನುದಯನಕಥಾ-‡ ಕೋವಿದಗ್ರಾಮವೃದ್ಧಾನ್ ।
॥೩೧॥ ಪೂರ್ವೋದ್ದಿಷ್ಟಾ- ‡ ಮನುಪರಪುರೀಂ ‡ ಶ್ರೀವಿಶಾಲಾಂ ವಿಶಾಲಾಂ॥
ಸ್ವಲ್ಪೀಭೂತೇ‡ಸುಚರಿತಫಲೇ‡ಸ್ವರ್ಗಿಣಾಂ ಗಾಂ ಗತಾನಾಂ ।
ಶೇಷೈಃ ಪುಣ್ಯೈಃ‡ಹೃತಮಿವ ದಿವಃ‡ಕಾಂತಿಮತ್ ಖಂಡ ಮೇಕಂ ।

ಶ್ಲೋಕ ದೀರ್ಘೀಕುರ್ವನ್‡ಪಟುಮದಕಲಂ‡ಕೂಜಿತಂ ಸಾರಸಾನಾಂ ।
॥೩೨॥ ಪ್ರತ್ಯೂಷೇಷು‡ಸ್ಫುಟಿತಕಮಲಾ- ‡ ಮೋದಮೈತ್ರೀ ಕಷಾಯಃ ॥
ಯತ್ರ ಸ್ತ್ರೀಣಾಂ‡ ಹರತಿ ಸುರತ-‡ ಗ್ಲಾನಿ ಮಂಗಾನುಕೂಲಃ ।
ಶಿಪ್ರಾವಾತಃ ‡ ಪ್ರಿಯತಮ ಇವ ‡ ಪ್ರಾರ್ಥನಾಚಾಟುಕಾರಃ ॥

ಅನುವಾದ: ತೆರೆಗಳಲುಗಲು ಪೊರೆಯುಪಂಚಿಯು ।
ಸರವಿ-ಡಾಬಿನ ಬೀಳುತೇಳುತ ।
ಪರಿವ ಸೊಬಗಿಂ ದೆಸೆವ ಮೇಣ್ ಸುಳಿನಾಭಿಗಳ ತೋರ್ವ ॥
ತೊರೆಯಿಹಳು ನಿರ್ವಿಂಧ್ಯೆ ಪಥದಳು ।
ಬೆರೆತು ನೀ ಸವಿಯೊಳರಸವಸವಿ ।
ತರುಣಿಯರ ವಿಭ್ರಮವೆ ಮೊದಲೊಲವುನುಡಿ ಯಿನಿಯರೊಳ್ಳೆ॥

ಅನುವಾದ: ಕರಿಯ ಜಡವ್ರೊಲು ಪರಿಪ ಜಲವತಿ- ।
ಸೊರಗೆ ತಡಿಗಳಲಿರುವ ಮರಗಳು ।
ಸುರಿದ ಹಣ್ಣೆಲೆಗಳಲಿ ಬೆಳ್ಚಿರೆ, ವಿರಹದ ತಿಬಗೆಯುಂ ॥
ತೊರೆಯುವಣ್ಣದು ದಿನೆಗಳೆದು ಬಂ-
ದಿರುವ ನಿನ್ನತಿಸೊಬಗ ನೋಟವುದು ।
ಸೊರಗಣಗಿಪ ಬಗೆಯು ಪಲಿಸುವ ಚೆಲುವ ನೀನೋರ್ವಂ ॥

ಅನುವಾದ; ಉದಯನನ ಕತೆಯರಿವಿನೊಳು ಬ- ।
ಲ್ಲಿದರೆನಿಪ ಹಿರಿಹಳ್ಳಿಗರ ಜನ- ।
ಪದ ವವಂತಿಯು ಹೊಕ್ಕು ಮೊದಲೊರೆ ಮಜ್ಜಯಿನಿಗೆ ಸರಿ ॥
ಅದು ಸಿರಿಗೆ ನೆಲೆ ಸುಕೃತಕಳೆದುಳಿ- ।
ದುದರ ಪುಣ್ಯದೊ ಳಿಳೆಗಿಳಿದ ದಿವಿ- ।
ಪದರು ಸೆಳೆತಂ ದಿಟ್ಟ ಸಗ್ಗದ ಹೊಳೆವ ತುಂಡೆನಲು ॥

ಆನುವಾದ; ಅಲ್ಲಿ ಮುಂಜೆಗಳಲ್ಲಿ ಸಾರಸ-
ದುಲ್ಲಸದ ಸವಿದನಿಯು ಹಿಗ್ಗಿಪ ।
ಫುಲ್ಲನಳಿನದ ಕಂಪ ಪೊತ್ತಿಹ ಶಿಪ್ರತೊರೆಯೊಡೆಯ ॥
ಮೆಲ್ಲೆಲರು ಸೊಂಪೀಯು ತೊಡಲಿಗೆ ।
ನಲ್ಲೆಯರ ರತಿಬಳಲ ನಳಿಪುದು ।
ಲಲ್ಲೆನುಡಿಯಿಂ ರತಿಸುಖಕೆ ಬಾಯ್ಬಿಡುವ ನಲ್ಲನೊಲು ॥

ಶ್ಲೋಕ ಹಾರಾಂ ತಾರಾಂ‡ತರಳಘುಟಿಕಾಂ‡ಕೋಟಿಶಃ ಶಂಖಶುಕ್ತೀಃ ।
॥೩೩॥ ಶಾಸಶ್ಯಾಮಾಂ‡ಮರಕತಮಣೀ-‡ನುನ್ಮುಖ ಪುರೋಹಾಂ ॥
ದೃಷ್ಟ್ವಾ ಯಸ್ಯಾಂ‡ವಿಪಣಿರಚಿತಾಂ‡ವಿದ್ರುಮಾಣಾಂ ಚ ಭಂಗಾಂ।
ಸಂಲಕ್ಷ್ಯತೇ ‡ ಸಲಿಲನಿಧಯಃ ‡ ತೋಯಮಾತ್ರಾವಶೇಷಾಃ ॥

ಶ್ಲೋಕ ಪ್ರದ್ಯೋತಸ್ಯ ‡ ಪ್ರಿಯದುಹಿತರಂ ‡ ವತ್ಸರಾಜೋಽತ್ರ ಜಹ್ರೇ ।
೩೪॥ ಹೈಮಂ ತಾಳ- ‡ ದ್ರುಮವನಮಭೂ- ‡ ದತ್ರ ತಸ್ಯೈವರಾಜ್ಞಃ ॥
ಅತ್ರೋದ್ಭ್ರಾಂತಃ ‡ ಕಿಲ ನಲಗಿರಿಃ ‡ ಸ್ತಂಭ ಮುತ್ಪಾಟ್ಯ
ದರ್ಪಾತ್ ।
ಇತ್ಯಾಗಂತೂಂ‡ರಮಯತಿ ಜನೋ‡ಯತ್ರಬಂಧೂ ನಭಿಜ್ಞಃ ॥

ಶ್ಲೋಕ ಪತ್ರಶ್ಯಾಮಾಃ‡ದಿನಕರಹಯ-‡ಸ್ಪರ್ಧಿನೋ ಯತ್ರ ವಾಹಾಃ ।
॥೩೫॥ ಶೈಲೋದಗ್ರಾಃ‡ತ್ವಮಿವ ಕರಿಣಃ‡ವೃಷ್ಟಿಮಂತಃ ಪ್ರಭೇದಾತ್ ॥
ಯೋಧಾಗ್ರಣ್ಯಃ‡ಪ್ರತಿ ದಶಮುಖಂ ಸಂಯುಗೇ ತಸ್ಥಿವಾಂಸಃ ।
ಪ್ರತ್ಯಾದಿಷ್ಟಾ-‡ಭರಣರುಚಯಃ‡ಚಂದ್ರಹಾಸವ್ರಣಾಂಕೈಃ ॥

ಶ್ಲೋಕ ಜಾಲೋದ್ಗೀರ್ಣೈ‡ರುಪಚಿತವಪುಃ‡ತತ್ರ ಸಂಸ್ಕಾರ-ಧೂಪೈಃ ।
॥೩೬॥ ಬಂಧು ಪ್ರಿತ್ಯಾ‡ಭವನ ಶಿಖಿಭಿಃ‡ದತ್ತನೃತ್ಯೋಪಹಾರಃ ॥
ಹರ್ಮ್ಯೇಷ್ವಸ್ಯಾಃ‡ಕುಸುಮ ಸುರಭಿ-‡ಷ್ವಧ್ವಖೇದಂ ನಯೇಥಾಃ ।
ಪಶ್ಯನ್ ಲಕ್ಷ್ಮೀಂ‡ಲಲಿತ ವನಿತಾ-‡ಪಾದರಾಗಾಂಕಿತೇಷು ॥

ಅನುವಾದ; ಇರುಳು ಕಗ್ಗತ್ತಲೆಯು ಲಾಪುರ- ।
ದರಸುಬೀದಿಯೊ ಳೋಪರಿರುವೆಡೆ ।
ತೆರಳುತಿಹ ತರುಣಿಯರ ನೋಟಕೆ ಹೆಚ್ಚುತಡೆ ಯೊದಗೆ ॥
ಕರುಣೆ ನೀಂ ಹೊಂಬಳ್ಳಿ ಮಿಂಚನು ।
ಮಿರಗುತವರಿಗೆ ಹಾದೀದೋರ್ಕೈ ।
ಸೂಸದಿರು ಮಳೆ, ಮೊಳಗಬೇಡಳ್ಕೆದೆಯ ರವರಹರ್ಕೈ ॥

ಅನುವಾದ: ಥಳಿಸು ತೊಡನೊಡ ಸರಸಿ ಮಿಂಚತಿ- ।
ಬಳಲೆ ನಿದ್ರಿಪ ಪಾರ್ವೆಯಿಹ ಗೃಹ- ।
ವಲಭಿಯೊಂದರೊಳಿರುತಲಾ ರಾತ್ರಿಯನು ನೀಂ ಕಳೆದು ॥
ಸುಳಿಯೆ ರವಿ ನೀಂ ಮತ್ತೆ ಪಯಣದೊ- ।
ಳುಳಿದ ಹಾದಿಯು ಕಳೆಯ ಲಿಹುದೈ ।
ಗೆಳೆಯ ರರ್ಥವ ಸಲಿಪ ಹೊಣೆ ಹೊತ್ತಿರುವ ರಲಸರಲಾ ॥

ಅನುವಾದ; ಸಮಯ ವದರೊಳು ಖಂಡಿತೆಯರಹ ।
ರಮಣಿಯರ ಕಣ್ಣೀರ ನೋಪರು ।
ಶಮನಗೊಳಿಪರು ಬೇಗ ಬಿಡು ಹಾದಿಯನು ರವಿ ಗದರಿಂ ॥
ಕಮಲ ಮುಖದಿಂದವನು ನಳಿನಿಯ ।
ಹಿಮದ ಕಂಬನಿ ಯೊರಸೆ ಮತ್ತಾ- ।
ಗಮಿಪ ನವನಾ ಕರವ ತಡೆದೊಡೆ ಹೆಚ್ಚು ಕಿಚ್ಚಹುದೈ ॥

ಅನುವಾದ; ಚೆಲುವ ನೀ ಹುಟ್ಟಿನಲಿ ಮನದೊಲು ।
ಬಲುತಿಳಿಯ ಗಂಭೀರನದಿಯಾ- ।
ಜಲದ ಹೊಗುವುನು ಬಿಂಬವಾದರು ನಿನ್ನ ರೂಪಿದನು ॥
ಜಲದ ! ನೀನದರಿಂದ ಬಿಳೆನ್ಯೆ- ।
ದಿಲೆಯ ಹೋಲುವ ಚಟುಲ ಶಫರಿಯು ।
ತೊಳಲೆ ತೊರೆ ಕಣ್ಗೊನೆಯು ವಿಫಲತೆ ಯದಕೆ ಸಲ್ಲದಲಾ ॥

ಶ್ಲೋಕ ತಸ್ಯಾಃ ಕಿಂಚಿತ್ ‡ ಕರಧೃತಮಿವ ‡ ಪ್ರಾಪ್ತವಾನೀರಶಾಖಂ ।
||೪೫|| ಹೃತ್ವಾ ನೀಲಂ ‡ ಸಲಿಲವಸನಂ ‡ ಮುಕ್ತರೋಧೋನಿತಂಬಂ ॥
ಪ್ರಸ್ಥಾನಂ ತೇ‡ಕಥಮಪಿ ಸಖೇ! ‡ ಲಂಬಮಾನಸ್ಯ ಭಾವಿ ।
ಜ್ಞಾತಾಸ್ವಾದೋ‡ವಿವೃತಜಘನಾಂ‡ಕೋ ವಿಹಾತುಂ ಸಮರ್ಥಃ ॥

ಶ್ಲೋಕ ತ್ವನ್ನಿಷ್ಯಂದೋಚ್ಛ್ವ‡ಸಿತವಸುಧಾ-‡ಗಂಧಸಂಪರ್ಕರಮ್ಯಃ ।
||೪೬|| ಸ್ರೋತೋರಂಧ್ರ-‡ಧ್ವನಿತಸುಭಗಂ‡ದಂತಿಭಿಃ ಪೀಯಮಾನಃ ॥
ನೀಚೈರ್ವಾಸ್ಯ-‡ತ್ಯುಪಜಿಗಮಿಷೋಃ ದೇವಪೂರ್ವಂ ಗಿರಿಂ ತೇ ।
ಶಿತೋವಾತಃ‡ಪರಿಣಮಯಿತಾ‡ಕಾನನೋದುಂಬರಾಣಾಂ ॥

ಶ್ಲೋಕ ತತ್ರ ಸ್ಕಂದಂ‡ನಿಯತವಸತಿಂ‡ಪುಷ್ಪಮೇಘೀಕೃತಾತ್ಮಾ ।
||೪೭|| ಪುಷ್ಪಾಸಾರೈಃ‡ಸ್ನಪಯತು ಭವಾನ್‡ವ್ಯೋಮಗಂಗಾಜಲಾರ್ದ್ರೈಃ ॥
ರಕ್ಷಾಹೇತೋಃ‡ನವಶಶಿಭೃತಾ‡ವಾಸವೀನಾಂ ಚಮೂನಾಂ ।
ಅತ್ಯಾದಿತ್ಯಂ‡ಹುತವಹಮುಖೇ॥ಸಂಭೃತಂ ತದ್ಧಿ ತೇಜಃ ॥

ಶ್ಲೋಕ ಜ್ಯೋತಿರ್ಲೇಖಾ-‡ವಲಯಿ ಗಳಿತಂ‡ಯಸ್ಯ ಬರ್ಹಂ ಭವಾನೀ ।
||೪೮|| ಪುತ್ರಪ್ರೇಮ್ಣಾ‡ಕುವಲಯದಳಪ್ರಾಪಿ‡ಕರ್ಣೇ ಕರೋತಿ ॥
ಧೌತಾಪಾಂಗಂ‡ಹರಶಶಿರುಚೇಃ‡ಪಾವಕೇಃ ತಂ ಮಯೂರಂ
ಪಶ್ಚಾದದ್ರಿ-‡ಗ್ರಹಣಗುರುಭಿ-‡ಗರ್ಜಿತೈಃ ನರ್ತಯೇಥಾಃ ॥

ಅನುವಾದ : ಗೆಳೆಯ ತೊರೆ-ಗಂಭೀರವದು ನಿಜ- ।
ಜಲದ ಕಪ್ಪಡೆ ತಟನಿತಂಬಗ- ।
ಳುಳಿದು ಜೊಂಡಿನ ಕೈಗಳಿಂದದ ನಿನಿಸು ಪಿಡಿದೊಲಿರೆ ।
ಕಳಚುತದ ಮೇಲಾಡುತಿಹ ನೀಂ ।
ಬೆಳೆಸೆ ಪಯಣದ ಕಷ್ಟವೆನಿಪುದು ।
ತಿಳಿದು ರಸವಂ ತೆರೆದ ಜಘನವ ನಾರು ಬಿಡಲಹುದು ? ॥

ಅನುವಾದ : ನೀ ಸುರಿವ ಮಳೆಯಿಂ ದಿಳೆ ಯುಗಿಯು-
ವಾ ಸುಗಂಧದಿ ಬೆರೆತ ಕರಿಗಳು ।
ನಾಸಿಕದ ಹೊಳ್ಳೆಯಲಿ ಪೀರ್ವಂದು ಸೊಬಗುದನಿಗೈವ ॥
ಸ್ಫೂಸಿ ವನಪತ್ತಿಯಲಿ ಪಣ್ಗಳ ।
ಗೈಸುತಿಹ ತಂಗಾಳಿ ಮೆಲ್ಲನೆ ।
ಬೀಸಿ ಕೊಳ್ವುದು ದೇವಗಿರಿಯೆಡೆಗೆ ಪೋಗಲಿಹ ನಿನ್ನ ॥

ಅನುವಾದ ; ಅಲ್ಲಿ ಗುಹನಿಗೆ ನಿತ್ಯನೆಲೆ, ಹೂ- ।
ವುಳ್ಳೊಡಲ ಕೈ ಕೊಳ್ಳು ತಾಗಸ-
ದಲ್ಲಿ ಗಂಗೆಯೊಳದ್ದು ಹೂಸೋನೆಯಲಿ ತೊಳೆಯುವನಂ ॥
ಸಲ್ಲಿಸಿಹ ಶಶಿಮೌಳಿ ಭಾಸ್ಕರ- ।
ನಲ್ಲೆಗಳೆವಾ ತೇಜ ಶಿಖಿಮುಖ- ।
ದಲ್ಲಿ ಶಕ್ರನ ಸೇನೆಗಳ ಪೊರೆವುದಕೆ ಹೇತುವಲಾ ॥

ಅನುವಾದ : ಉದುರಿ ಸುತ್ತಲು ಬೆಳಗುತಿಹ ಯಾ- ।
ವುದರ ಗರಿಯಿಂ ಭವಸರಸಿ ಕ- ।
ರ್ಣದೊಳು ನೈದಿಲೆ ಯೆನಲು ತಳೆವ್ಳೊ ಸುತನ ನೇಹದಲಿ ॥
ಅದು ಗುಹನ ಶಿಖಿ; ಶಿವನ ಸಸಿವೆಳ-।
ಗದರ ಕಣ್ಗೊನೆ ಬಿಳುಪು ಹೆಚ್ಚಿಪ್ಪು-।
ದದನು ಕುಣಿಸೈ ಮಲೆಯು ಸುರು ಮಾರ್ದನಿಪ ಮೊಳಗಿಂದ

ಶ್ಲೋಕ ಆರಾಧ್ಯೈನಂ ಶರವಣಭವಂ‡ದೇವ ಮುಲ್ಲಂಘಿತಾಧ್ವಾ ।
॥೪೯॥ ಸಿದ್ಧದ್ವಂದ್ವೈಃ‡ಜಲಕಣಭಯಾತ್‡ವೀಣಿಭಿಃ ಮುಕ್ತಮಾರ್ಗಃ॥
ವ್ಯಾಲಂಬೇಥಾಃ‡ಸುರಭಿತನಯಾ–‡ಲಂಭಜಾಂ ಮಾನಯಿಷ್ಯನ್
ಸ್ರೋತೋಮೂರ್ತ್ಯಾ‡ಭುವಿ ಪರಿಣತಾಂ‡ರಂತಿದೇವಸ್ಯ ಕೀರ್ತಿಂ ॥

ಶ್ಲೋಕ ತ್ವಯ್ಯಾದಾತುಂ‡ಜಲ ಮವನತೇ‡ಶಾರ್ಙ್ಗಿಣೋ ವರ್ಣಚೋರೇ! ।
॥೫೦॥ ತತ್ಯಾಃಸಿಂಧೋಃ‡ಪೃಥುಮಪಿ ತನುಂ‡ದೂರಭಾವಾತ್ಪ್ರವಾಹಂ ।
ಪ್ರೇಕ್ಷಿಷ್ಯಂತೇ‡ಗಗನಗತಯೋ‡ನೂನ ಮಾವರ್ಜ್ಯ ದೃಷ್ಟೀಃ ।
ಏಕಂ ಮುಕ್ತಾ–‡ಗುಣಮಿವ ಭುವಃ‡ಸ್ಥೂಲಮಧ್ಯೇಂದ್ರನೀಲಂ ॥

ಶ್ಲೋಕ ತಾ ಮುತ್ತೀರ್ಯ‡ವ್ರಜ ಪರಿಚಿತ‡ಭ್ರೂಲತಾ ವಿಭ್ರಮಾಣಾಂ ।
॥೫೧॥ ಪಕ್ಷ್ಮೋತ್ಕ್ಷೇಪಾ-‡ದುಪರಿವಿಲಸ–‡ತ್ಕೃಷ್ಣಶಾರಪ್ರಭಾಣಾಂ ॥
ಕುಂದಕ್ಷೇಪಾ-‡ನುಗ-ಮಧುಕರ‡ ಶ್ರೀಮುಷಾಮಾತ್ಮಬಿಂಬಂ॥
ಪಾತ್ರೀಕುರ್ವನ್‡ದಶಪುರವಧೂ‡ನೇತ್ರಕೌತೂಹಲಾನಾಂ ॥

ಶ್ಲೋಕ ಬಹ್ಮಾವರ್ತಂ‡ಜನಪದ ಮಥ‡ಛಾಯಯಾ ಗಾಹಮಾನಃ ।
॥೫೨॥ ಕ್ಷೇತ್ರ- ಕ್ಷತ್ರಂ‡ಪ್ರಧನಪಿಶುನಂ‡ಕೌರವಂ ತದ್ಭಜೇಥಾಃ ॥
ರಾಜನ್ಯಾನಾಂ‡ಶಿತಶರಶತೈಃ‡ಯತ್ರ ಗಾಂಡೀವಧನ್ವಾ ।
ಧಾರಾಪಾತೈಃ‡ತ್ವಮಿವ ಕಮಲಾ-‡ನ್ಯಭ್ಯವರ್ಷನ್ಮುಖಾನಿ

ಅನುವಾದ: ಅಲ್ಲಿನಂಗಡಿ ಬೀದಿ ರಚನೆಗ- ।
ಳಲ್ಲಿ ನಾಯಿಕರತ್ನಗಳು, ಮು- ।
ತ್ತುಳ್ಳ ಸರಗಳು ಕೋಟಿಲೆಕ್ಕದ ಶಂಖಶುಕ್ತಿಗಳು॥
ಚೆಲ್ಲೆ ಹವಳದ ತುಂಡುಗಳು ಹಸಿ- ।
ಹುಲ್ಲ ಪಸಿರೊಗರುಗವ ಪಚ್ಚೆಗ- ।
ಳುಳ್ಳುದಂ ಕಂಡಬುಧಿಗಂಬೊಂದಿಲ್ಲ ವೆನೆ ತೋರ್ಕುಂ ॥

ಅನುವಾದ: ಇಲ್ಲಿಯೇ ಪ್ರದ್ಯೋತ ನೃಪನೊಲ- ।
ವುಳ್ಳ ಕುವರಿಯು ನೊಯ್ದುದುದಯುನ- ।
ನಿಲ್ಲಿನಾದೊರೆ ಯೋರ್ವಗಿರ್ದುದು ಹೊನ್ನತಾಳೆವನಂ ॥
ಇಲ್ಲಿ ಸೊಕ್ಕಿಂ ಕಿತ್ತು ಕಂಭವ ।
ಚೆಲ್ಲಿ ನಲಗಿರಿ ಸುತ್ತಿತೆನುವಾ- ।
ಸೊಲ್ಲಿನಲಿ ಹೊರಸಂಟರನು ರಂಜಿಪರು ತಿಳಿದವರು ॥

ಅನುವಾದ: ಹಯುಗಳೆಲೆ ಹಸುರಲ್ಲಿರಲು ರವಿ- ।
ಹಯಕೆ ಹೆಗಲೆಣೆ; ಮದಸುರಿವ ಕರಿ- ।
ಚಯವು ಗಿರಿಯೆತ್ತರವು: ನಿನ್ನೊಲು ಸೊಕ್ಕಿ ಸುರಿಯುವುವು ॥
ಹೊಯಲಿನಲಿ ದಶಮುಖನೆದುರು ನಿ- ।
ರ್ಭಯದಿ ನಿಂತವನಸಿಯ ಗಾಯುಳ ।
ಬಯುಸುವರು ವೀರಾಗ್ರಣಿಗಳೊಡವೆಗವು ಮಿಗಿಲೆನುತ ॥

ಅನುವಾದ: ಗೃಹಗವಾಕ್ಷೆಗಳುಗಿವ, ಶುದ್ಧಿನೆ- ।
ಗಹಿಪ ಧೂಪದ ಹೊಗೆಯು ಲೊಡಲು- ।
ಬ್ಬಹುತ ಮನೆಸೋಗೆಗಳ ಕುಣಿಕಾಣಿಕೆಯು ನಂಟೊಲವಂ ॥
ವಹಿಸಿ ಹೂಗಂಪೊಗೆವ ಚೆಲುವೆಯು ।
ರಹರ ರಂಗಿನ ಹೆಜ್ಜೆಗುರುತಿಹ ।
ಮಹಡಿಗಳ ಲೈಸಿರಿಯು ನೋಡುತ ಹಾದಿದಣು ಕಳೆಯೈ ॥

ಶ್ಲೋಕ ಭರ್ತುಃ ಕಂಠ‡ಚ್ಛವಿ ರಿತ ಗಣೈಃ ‡ ಸಾದರಂ ವೀಕ್ಷ್ಯಮಾಣಃ ।
॥೩೭॥ ಪುಣ್ಯಂ ಯಾಯಾಃ‡ತ್ರಿಭುವನಗುರೋಃ‡ಧಾಮ ಚಂಡೀಶ್ವರಸ್ಯ ॥
ಧೂತೋದ್ಯಾನಂ‡ಕುವಲಯರಜೋ-‡ಗಂಧಿಭಿಃಗಂಧವತ್ಯಾಃ ।
ತೋಯಕ್ರೀಡಾ-‡ನಿರತಯುವತಿ-‡ಸ್ನಾನತಿಕ್ತೈಃ ಮರುದ್ಭಿಃ ॥

ಶ್ಲೋಕ ಅಪ್ಯನ್ಯಸ್ಮಿನ್‡ಜಲಧರ ! ಮಹಾ-‡ಕಾಳ ಮಾಸಾದ್ಯ ಕಾಲೇ ।
॥೩೮॥ ಸ್ಥಾತವ್ಯಂ ತೇ‡ನಯನವಿಷಯಂ‡ಯಾವದತ್ಯೇತಿ ಭಾನುಃ ॥
ಕುರ್ವನ್ ಸಂಧ್ಯಾ-‡ಬಲಿಪಟಹತಾಂ‡ಶೂಲಿನಃಶ್ಲಾಘನೀಯಾಂ ।
ಆಮಂದ್ರಾಣಾಂ‡ಫಲ ಮವಿಕಲಂ‡ಲಪ್ಸ್ಯಸೇ ಗರ್ಜಿತಾನಾಂ ॥

ಶ್ಲೋಕ ಪಾದನ್ಯಾಸ-‡ಕ್ವಣಿತರಶನಾಃ‡ತತ್ರ ಲೀಲಾವಧೂತೈಃ ।
॥೩೯॥ ರತ್ನಚ್ಛಾಯಾ‡ಖಚಿತವಳಿಭಿಃ‡ಚಾಮರೈಃ ಕ್ಲಾಂತಹಸ್ತಾಃ ॥
ವೇಶ್ಯಾಃ ತ್ವತ್ತೋ ‡ ನಖಪದಸುಖಾನ್‡ಪ್ರಾಪ್ಯ
ವರ್ಷಾಗ್ರಬಿಂದೂನ್ ।
ಆಮೋಕ್ಷ್ಯಂತೇ ‡ ತ್ವಯಿ ಮಧುಕರ-‡ಶ್ರೇಣಿದೀರ್ಘಾನ್
ಕಟಾಕ್ಷಾನ್

ಶ್ಲೋಕ ಪಶ್ಚಾದುಚ್ಚೈಃ‡ಭುಜತರುವನಂ‡ಮಂಡಲೇ ನಾಭಿಲೀನಃ
॥೪೦॥ ಸಾಂಧ್ಯಂ ತೇಜ ಪ್ರತಿನವಜಪಾ-‡ಪುಷ್ಪರಕ್ತಂ ದಧಾನಃ ।
ನೃತ್ಯಾರಂಭೇ ‡ ಹರ ಪಶುಪತೇ-‡ರಾರ್ದ್ರನಾಗಾಜಿನೇಚ್ಛಾಂ ।
ಶಾಂತೋದ್ವೇಗ- ‡ ಸ್ತಿಮಿತನಯನಂ‡ದೃಷ್ಟಭಕ್ತಿಃಭವಾನ್ಯಾ ॥

ಅನುವಾದ : ಪ್ರಮಥ ರೊಡೆಯನ ಕೊರಳ ಹೊಳಪೆಂ- ।
ದಮಿತ ಮುದದಿಂ ನಿನ್ನಿ ನಿಟ್ಟಿಸೆ ।
ಗಮಿಸು ಮುಲ್ಲೋಕಗುರು ಚಂಡೀಶ್ವರನ ಶುಭಾಲಯಕೆ ॥
ರಮಣಿಯರು ತೊರೆ-ಗಂಧವತಿಯೊಳು ।
ರಮಿಸಲಿನಿಗಂಪೊಂದಿ ಕುವಲಯ ।
ಸುಮದ ಹುಡಿಗಂಪೆಲರುಗಳು ಗುಡಿತೋಪ ನಲುಗಿಪುವು ॥

ಅನುವಾದ : ಕಾಲ ಮೀರ್ದೈದಿದರು ಸುಮಹಾ-
ಕಾಳನಿಲಯಕೆ ರವಿಯು ದಿಟ್ಟಿಯ ।
ಸೋಲಿಪನ್ನೆಗ ಮಲ್ಲಿಯೇ ನೀ ನೆಲಸು ಮಳೆರಾಯ! ॥
ಶೂಲಿ ಮೆಚ್ಚಲು ಸಂಜೆಪೂಜೆಯ ।
ಮೇಳದಲಿ ನೀಂ ಮೊಳಗೆ ಭೇರಿಯ
ಬಾಳಿನಿಂ ಗಂಭೀರಘೋಷದ ಪೂರ್ಣ-ಫಲವಡೆವೈ ॥

ಅನುವಾದ : ಅಂದು ನಟಿಯರು ಪದಗಳಿಡುತಿಹ ।
ಚಂದದಿಂ ದುಡುಗೆಜ್ಜೆ ಘಲ್ಲಿಸೆ ।
ಸಂದ ಮಣಿರುಚಿಯಿಂದ ಬೆಳಗುವ ಹಿಡಿಯ ಚಮರಗಳಂ ॥
ಪೊಂದಿ ಬೀಸುವ ಸೊಗಸುಗೈ ಬಳ- ।
ಲಂದುಗುರ ತಳ ನಿನ್ನ ಹೊಸಹನಿ- ।
ಯಿಂ ದಣಿಯೆ ನೀಳ್ದಳಿಯ ಸಾಲ್ಕುಡಿದಿಟ್ಟಿ ನಿನಗೊಗೆವರ್

ಅನುವಾದ : ಎತ್ತರದ ಭುಜತರುವನವ ಬಳ- ।
ಸುತ್ತ ಬಳಿಕಲ್ಲಡಗಿ ದಾಸಣ ।
ಬಿತ್ತರಿಪ ಹೊಸ ಹೂವ ಕೆಂಪಿನ ಸಂಜೆವೆಳಗನ್ನು ॥
ಪೊತ್ತು ಪಶುಪತಿ ಕುಣಿವ ಮೊದಲಲಿ ।
ನೆತ್ತರಿಪ ಗಜಚರ್ಮ ದಾಸೆಯ ।
ಕಿತ್ತು, ನಿಟ್ಟಿಪ ದೇವಿಯಂಬಿಕೆ ಯೊಲವ ನೀಂ ಗಳಿಸೈ ॥

ಶ್ಲೋಕ ಗಚ್ಛಂತೀನಾ ‡ ರಮಣವಸತಿಂ ‡ ಯೋಷಿತಾಂ ತತ್ರ ನಕ್ತಂ ।
॥೪೧॥ ರುದ್ಧಾಲೋಕೆ ‡ ನರಪತಿಪಥೇ ‡ ಸೂಚಿಭೇದ್ಯೈಃ ತಮೋಭಿಃ ।
ಸೌದಾಮಿನ್ಯಾ ‡ ಕನಕನಿಕಷ- ‡ ಸ್ನಿಗ್ಧಯಾ ದರ್ಶಯೋರ್ವೀಂ ।
ತೋಯೋತ್ಸರ್ಗ‡ಸ್ತನಿತಮುಖರೋ‡ಮಾಸ್ಮಭೂಃ ವಿಕ್ಲಬಾ ಸ್ತಾಃ

ಶ್ಲೋಕ ತಾಂ ಕಸ್ಯಾಂಚಿತ್ ‡ ಭವನವಲಭೌ ‡ ಸುಪ್ತಪಾರಾವತಾಯಾಂ ।
॥೪೨॥ ನೀತ್ವಾ ರಾತ್ರಿಂ ‡ ಚಿರವಿಲಸನಾತ್ ‡ ಖಿನ್ನವಿದ್ಯುತ್ಕಳತ್ರಃ ।
ಸೂರ್ಯೇ ದೃಷ್ಟೇ ‡ ಪುನರಪಿ ಭವಾನ್‡ವಾಹಯೇ-ದಧ್ವಶೇಷಂ ।
ಮಂದಾಯಂತೇ‡ನ ಖಲು ಸುಹೃದಾ-‡ಮಭ್ಯುಪೇತಾರ್ಥಕೃತ್ಯಾಃ।

ಶ್ಲೋಕ ತಸ್ಮಿನ್ ಕಾಲೇ ‡ ನಯನ ಸಲಿಲಂ ‡ ಯೋಷಿತಾಂ ಖಂಡಿತಾನಾಂ ।
॥೪೩॥ ಶಾಂತಿಂ ನೇಯಂ‡ಪ್ರಣಯಿಭಿರತೋ‡ವರ್ತ್ಮ ಭಾನೋಃ ತ್ಯಜಾಶು
ಪ್ರಾಲೇಯಾಸ್ರಂ‡ಕಮಲವದನಾತ್‡ಸೋಽಪಿ ಹರ್ತುಂ ನಳಿನ್ಯಾಃ
ಪ್ರತ್ಯುದ್ಯಾತಃ ‡ ತ್ವಯಿ ಕರರುಧಿ ‡ ಸ್ಯಾದನಲ್ಪಾಭ್ಯಸೂಯಃ ॥

ಶ್ಲೋಕ ಗಂಭೀರಾಯಾಃ‡ಪಯಸಿ ಸರಿತಃ‡ಚೇತಸೀವ ಪ್ರಸನ್ನೇ ।
॥೪೪॥ ಛಾಯಾತ್ಮಾಪಿ ‡ ಪ್ರಕೃತಿಸುಭಗೋ‡ಲಪ್ಸ್ಯಸೇ ತೇ ಪ್ರವೇಶಂ ॥
ತಸ್ಮಾದಸ್ಯಾಃ‡ಕುಮುದವಿಶದಾ-‡ನ್ಯರ್ಹಸಿ ತ್ವಂ ನ ಧೈರ್ಯಾತ್।
ಮೋಘೀಕರ್ತುಂ ‡ ಚಟುಲಶಫರೋ-‡ದ್ವರ್ತನಪ್ರೇಕ್ಷಿತಾನಿ ॥

ಅನುವಾದ: ನೀನು ಶರಭವದೇವ ನಿವಸಂ ।
ಮಾನಿಸುತ ಸೀರ್ಪನಿಗೆ ಬೆದರಿದ ।
ವೀಣೆ ಸಿದ್ಧರ ಜೋಡಿಗಳು ಬಿಡೆ ಹಾದಿ ಮುಂದರಿದು ॥
ಕ್ಷೋಣಿಯೊಳಗಾ ರಂತಿದೇವನ ।
ಧೇನು ಯಜ್ಞದಿ ಪುಟ್ಟಿರುವ ಯಶ- ।
ವಾನದಿಯ ರೂಪಿಂ ದೆಸಿಯ ನೀಂ ಬಾಗಿ ಮನ್ನಿಸದಂ ॥

ಅನುವಾದ: ಹರಿಯು ಬಣ್ಣವ ಕಸಿದ ನೀನಾ- ।
ತೊರೆಯ ನೀರನು ಮೊಗೆಯಲಿಕೆ ಬಾ- ।
ಗಿರಲು ಖಚರರು ದಿಟ್ಟಿ ತಗ್ಗಿಸಿ ದೂರದಿಂದದರ ॥
ಹಿರಿಯದಾದರು ಹೊನಲ ಕಿರಿದನು ।
ತಿರೆಯ ಕೊರಳಿನ ಮುತ್ತುಸರದೊಳ- ।
ಗುರುವ ನಡುವಣ ನೀಲಮಣಿಯೆನೆ ಕಾಂಬರೈ ನಿನ್ನಂ ॥

ಅನುವಾದ: ತೊರೆಯ-ನದ-ನೆಡೆಹಾಯ್ದು ನೀಂ ದಶ-
ಪುರದ ಹೆಂಗಳ ಕಣ್ಣ ಕೌತುಕ-
ಕಿರಿಸಿ ನಿಜಬಿಂಬವನು ನಡೆ ನೀಂ ಹುಬ್ಬಕುಣಿತಗಳಂ ||
ಅರಿತ ಕಂಗಳು ಮೇಲೆ ಕಣ್ಣವೆ
ಹರಿಸೆ ಕರಿಬಿಳಿಕೆಂಪ ಬೆಳಗಿಪು-
ವೆರೆಚೆ ಕುಂದಕೆ ಪರಿಯುವಳಿಸಾಲ್ಸಿರಿಯ ಕಸಿಯುವುವು ||

ಅನುವಾದ: ಬಳಿಕ ನಾಡಂ ಬ್ರಹ್ಮವರ್ತವ ।
ನೆಳಲಿನಿಂ ನೀಂ ಹೊಕ್ಕರಸುಕ- ।
ಗ್ಗೊಲೆ ನಡೆದುದನು ಸೂಚಿಪ ಕುರುಕ್ಷೇತ್ರ ವದನೊಂದ್ಯೆ ॥
ಸ್ಥಳವು ಗಾಂಡೀವಿ ಯರಸರ ತಲೆ- ।
ಗಳನು ಸುರಿಸಿದುದದುವೆ ಕಣೆನೂ- ।
ರ್ಗಳಲಿ ತಾವರೆ ಹೂವ ಮಳೆ-ಸುರಿಸುರಿವ ನಿನ್ನಂತೆ ॥

ಶ್ಲೋಕ ಹಿತ್ವಾ ಹಾಲಾ-‡ಮಭಿಮತರಸಾಂ‡ರೇವತೀಲೋಚನಾಂಕಾಂ ।
॥೫೩॥ ಬಂಧುಪ್ರೀತ್ಯಾ‡ಸಮರವಿಮುಖೋ‡ಲಾಂಗಲೀಯಾಃಸಿಷೇವೇ ॥
ಕೃತ್ವಾ ತಾಸಾ-‡ಮಭಿಗಮಮಪಾಂ‡ಸೌಮ್ಯ!ಸಾರಸ್ವತೀನಾಂ ।
ಅಂತಶ್ಶುದ್ಧಃ‡ತ್ವಮಸಿ ಭವಿತಾ‡ವರ್ಣಮಾತ್ರೇಣಕೃಷ್ಣಃ ॥

ಶ್ಲೋಕ ತಸ್ಮಾತ್ ಗಚ್ಛೇ-‡ರನುಕನಖಲಂ‡ಶೈಲರಾಜಾವತೀರ್ಣಾಂ ।
॥೫೪॥ ಜಹ್ನೋಃ ಕನ್ಯಾಂ‡ಸಗರತನಯ-‡ಸ್ವರ್ಗಸೋಪಾನಪಂಕ್ತಿಂ ॥
ಗೌರೀವಕ್ತ್ರ-‡ಭ್ರುಕುಟಿರಚನಾಂ‡ಯಾ ವಿಹಸ್ಯೇವಫೇನೈಃ ।
ಶಂಭೋಃ ಕೇಶಗ್ರಹಣ-ಮಕರೋ-‡ದಿಂದುಲಗ್ನೋರ್ಮಿಹಸ್ತಾ॥

ಶ್ಲೋಕ ತಸ್ಯಾಃ ಪಾತುಂ‡ಸುರಗಜ ಇವ‡ವ್ಯೋಮ್ನಿ ಪಶ್ಚಾರ್ಧಲಂಬೀ ।
॥೫೫॥ ತ್ವಂ ಚೇದಚ್ಛ-‡ಸ್ಫಟಿಕವಿಶದಂ‡ತರ್ಕಯೇಃ ತಿರ್ಯಗಂಭಃ ॥
ಸಂಸರ್ಪಂತ್ಯಾಃ‡ಸಪದಿ ಭವತಃ‡ಸ್ರೋತಸಿ ಛಾಯಯಾಸೌ ॥
ಸ್ಯಾದಸ್ಥಾನೋ-‡ಪಗತಯಮುನಾ-‡ಸಂಗಮೇವಾಭಿರಾಮಾ ॥

ಶ್ಲೋಕ ಆಸೀನಾನಾಂ‡ಸುರಭಿತಶಿಲಂ‡ನಾಭಿಗಂಧೈಃಮೃಗಾಣಾಂ ।
॥೫೬॥ ತಸ್ಯಾ ಏವ‡ಪ್ರಭವಮಚಲಂ‡ಪ್ರಾಪ್ಯಗೌರಂ ತುಷಾರೈಃ ।
ವಕ್ಷ್ಯಸ್ಯಧ್ವ-‡ಶ್ರಮವಿನಯನೇ‡ತಸ್ಯ ಶೃಂಗೇನಿಷಣ್ಣಃ ।
ಶೋಭಾಂ ಶುಭ್ರ‡ತ್ರಿಣಯನವೃಷೋ‡ತ್ಖಾತಪಂಕೋಪಮೇಯಾಂ॥

ಅನುವಾದ; ನೆಂಟರೊಲವಿಂ ಹಲಿಯು ಯುದ್ಧದ ।
ತಂಟೆಗೆರಗದೆ ಸುರೆಯು ರಸ ಮನ- ।
ಕಂಟಿರಲು ರೇವತಿಯ ಕಣ್ಬಿಂಬಿಸಿಹುದನಂ ತೊರೆದು ॥
ಅಂಟಿದಘವನು ತೊಳೆಯಲಾವುದ- ।
ಕುಂಟೆ ಸರಸತಿ ತೊರೆಯ ಜಲ ವದ- ।
ನೀಂಟ ಲಂತಃಶುದ್ಧನೈ ನೀಂ ಬಣ್ಣ ಕರಿ ಮಾತ್ರ ॥

ಅನುವಾದ: ತೆರಳು ನೀ ನಲ್ಲಿಂದ ಕನಖಲ- ।
ಗಿರಿಯ ಬಳಿ ಗಿರಿರಾಜನಿಂ ಕೆಳ-
ಬರುವ, ಮೇಣ್ ಸಗರಜರು ದಿವಕೇರ್ವೇಣಿ ಜಾಹ್ನವಿಯ ॥
ತೊರೆಗೆ; ಹುಬ್ಬಂಟುಮೆಯ ನಾವಳು ।
ನೊರೆಯ ಲಣಕಿಪಳೆನಲು ತಲೆಸಸಿ-
ಗಿರಿಸಿದಲೆಗೈಗಳಲಿ ಶಂಭುವ ಮುಡಿಯ ಪಿಡಿದಿಹಳೋ ॥

ಅನುವಾದ: ಸುರಗಜದೊ ಲಂಬರದಿ ಹಿಂಬದಿ- ।
ಯರೆಯುಜೋಲಿಡು ತದರ ಪಟಿಕದ ।
ಪರಿಯ ತಿಳಿನೀರಡ್ಡಗಿಸಿ ನೀಂ ಕುಡಿವ ತರ್ಕವಿಡೆ ॥
ತೊರೆಯೆ ಹೊನಲಲಿ ನಿನ್ನ ನೆಳಲದು ।
ಹರಡ ಲಾಕ್ಷಣ ಬೇರೆಯೊಳೊಡ- ।
ಬೆರತಿಹುದೊ ತಾ ಯಮುನೆಗೆಂಬಾ ಚಂದ ತೋರುವುದು ॥

ಅನುವಾದ; ಕುಳಿತ ಕಸ್ತೂರಿ ಮೃಗದ ಹೊಕ್ಕಳು ।
ಬಳಿಯೆ ಕಂಪುಳ್ಳರೆಯ, ಹಿಮದಿಂ ।
ಬಿಳುಪ, ಮೇಣಾತೊರೆಗೆ ತೌರಹ ಗಿರಿಯ ಸಾರ್ದದರ ॥
ತಲೆಯನಪ್ಪಿರೆ ಹಾದಿದಣಿವಂ ।
ಕಳೆಯೆಲಿಕೆ ಮುಕ್ಕಣ್ಣನಾ ಬಲು- ।
ಬಿಳಿಬಸವ ಮೇಲ್ತಿವಿದ ಕೆಸರಂದದಲಿ ನೀಂ ಮೆರೆವೈ ॥

ಶ್ಲೋಕ ತಂ ಚೇದ್ವಾಯೌ ‡ ಸರತಿ ಸರಳ- ‡ ಸ್ಕಂಧಸಂಘಟ್ಟಜನ್ಮಾ ।
॥೫೭॥ ಬಾಧೇತೋಲ್ಕಾ-‡ ಕ್ಷಪಿತಚಮರೀ- ‡ ವಾಲಭಾರೋಽದವಾಗ್ನಿಃ॥
ಅರ್ಹಸ್ಯೇನಂ ‡ ಶಮಯಿತು ಮಲಂ ‡ ವಾರಿಧಾರಾಸಹಸ್ರೈಃ ।
ಆಪನ್ನಾರ್ತಿ- ‡ ಪ್ರಶಮನಫಲಾಃ ‡ ಸಂಪದೋಽಹ್ಯುತ್ತಮಾನಾಂ ॥

ಶ್ಲೋಕ ಯೇ ಸಂರಂಭೋ-‡ ತ್ಪತನರಭಸಾ ‡ ಸ್ವಾಂಗಭಂಗಾಯ ತಸ್ಮಿನ್ ।
॥೫೮॥ ಮುಕ್ತಾಧ್ವಾನಂ ‡ ಸಪದಿ ಶರಭಾಃ ‡ ಲಂಘಯೇಯುರ್ಭವಂತಂ॥
ತಾನ್ ಕುರ್ವೀಥಾಃ ‡ ತಮುಲಕರಕಾ- ‡ ವೃಷ್ಟಿಪಾತಾವಕೀರ್ಣಾನ್ ।
ಕೇ ವಾ ನ ಸ್ಯುಃ ‡ ಪರಿಭವಪದಂ ‡ ನಿಷ್ಫಲಾರಂಭಯತ್ನಾಃ ॥

ಶ್ಲೋಕ ತತ್ರ ವ್ಯಕ್ತಂ ‡ ದೃಷದಿ ಚರಣ- ‡ ನ್ಯಾಸಮರ್ಧೇಂದುಮೌಳೇಃ ।
॥೫೯॥ ಶಶ್ವತ್ಸಿದ್ಧೈ- ‡ ರುಪಚಿತಬಲಿಂ ‡ ಭಕ್ತಿನಮ್ರಾಃ ಪರೀಯಾಃ ॥
ಯಸ್ಮಿನ್ ದೃಷ್ಟೇ ‡ ಕರಣವಿಗಮಾ-‡ ದೂರ್ಧ್ವಮುದ್ಧೂತಪಾಪಾಃ।
ಕಲ್ಪಿಷ್ಯಂತೇ ‡ ಸ್ಥಿರಗಣಪದ- ‡ ಪ್ರಾಪ್ತಯೇ ಶ್ರದ್ದಧಾನಾಃ ॥

ಶ್ಲೋಕ ಶಬ್ದಾಯಂತೇ‡ಮಧುರ ಮನಿಲೈಃ ‡ ಕೀಚಕ್ಯೈಃ ಪೂರ್ಯಮಾಣಾಃ ।
॥೬೦॥ ಸಂಸಕ್ತಾಭಿಃ ‡ ತ್ರಿಪುರವಿಜಯೋ ‡ ಗೀಯತೇ ಕಿನ್ನರೀಭಿಃ ॥
ನಿರ್ಹ್ರಾದ ಸ್ತೇ‡ಮುರಜ ಇವ ಚೇತ್‡ಕಂದರೇಷುಧ್ವನಿಃ ಸ್ಯಾತ್ ।
ಸಂಗೀತಾರ್ಥೋ ‡ ನನು ಪಶುಪತೇಃ ‡ ತತ್ರ ಭಾವೀ ಸಮಗ್ರಃ ॥

ಅನುವಾದ : ಗಾಳಿ ಬೀಸಲು ಸರಳಬೊಡ್ಡು ಘ- ।
ಡಾಳಿಸಲು ಹೊರೆಬಿದ್ದ ಕಿಡಿಗಳು ।
ಬೀಳೆ ಚಮರಿಗಳೊತ್ತು ಬಾಲವನುರಿಪ ಕಾಡ್ಗಿಚ್ಚು ॥
ಧಾಳಿಯಿಡೆ ಗಿರಿಗದನು ಸಾಸಿರ- ।
ಪಾಲು ಮಳೆಗರೆದದನೊರಸು ದುಃ- ।
ಖಾಳಿಯಾರ್ತರ ತೊಡೆವುದುತ್ತಮ ರೈಸಿರಿಗೆ ಫಲವೈ ॥

ಅನುವಾದ ; ಆ ಗಿರಿಯ ಶರಭಗಳು ಸಂಭ್ರಮ- ।
ವೇಗದಲಿ ಮೇಲ್ಜಿಗಿಯೆ ನಿನ್ನೆಡೆ- ।
ಗಾಗಿ, ನೀನೆಡೆಬಿಡಲೊಡನೆ ಬೀಳವುವು ಮೈಮುರಿಯೆ ॥
ಆಗಳೆಡೆಬಿಡ ದಾಲಿಕಲ್ಮಳೆ- ।
ನೀ ಗರೆದು ಕೆಡಹವನು ಫಲಬರಿ- ।
ದಾಗೆ ಕಾರ್ಯದೊಳೆರಗುತಿಹರಾರೊಂದರವಮತಿಯಂ ॥

ಅನುವಾದ : ಮೆರೆವುದಲ್ಲೊಂದರೆಯೊಳಗೆ ಶಶಿ- ।
ಧರನ ಪದಚಿಹ್ನೆ, ಯದ ಸಿದ್ಧರು
ನಿರುತ ಪೂಜಿಪರದನು ಸುತ್ತಿಡು ಭಕುತಿಯಲಿ ಬಾಗಿ ॥
ಹರನ ಭಕ್ತರು ನೋಡುತದ ನೀ
ದುರಿತವೆಲ್ಲವ ಕೊಡಹುತೊಡಲನು ।
ತೊರೆದ ಬಳಿಕೊಂದುವರು ಗಣಗಳಲಳಿಯದಿಹ ನೆಲೆಯಂ॥

ಅನುವಾದ : ಗಾಳಿ ತುಂಬಲು ದನಿಗುಡುವ ಬಿದಿರುಗ- ।
ಳೋಳಿ, ಯಿಂಚರ ಗೈವುವಲ್ಲಿಯೆ, ।
ಮೇಳದಿಂ ತ್ರಿಪುರವಿಜಯುವ ಪಾಡುವರು ಕಿನ್ನರಿಯರ್, ॥
ಶೈಲಗುಹೆಯೊಳು ಮದ್ದಳೆಯ ದನಿ- ।
ಯೋಲೆ ನಿನ್ನಯ ಮೊಳಗು, ಪಶುಪತಿ- ।
ಯೋಲ್ಲಗದಿ ಸಂಗೀತದರ್ಥವು ಪೂರ್ಣಗೊಳ್ಳುವುದೈ ॥

ಶ್ಲೋಕ ಪ್ರಾಲೇಯಾದ್ರೇ-‡ರುಪತಟಮತಿ-‡ಕ್ರಮ್ಯತಾಂಸ್ತಾನ್ ವಿಶೇಷಾನ್ ।
॥೬೧॥ ಹಂಸದ್ವಾರಂ‡ಭೃಗುಪತಿಯಶೋ-‡ವರ್ತ್ಮಯತ್ ಕ್ರೌಂಚರಂಧ್ರಂ
ತೇನೋದೀಚೀಂ‡ದಿಶಮನುಸರೇಃ‡ ತಿರ್ಯಗಾಯಾಮಶೋಭೀ ।
ಶ್ಯಾಮಃ ಪಾದೋ ‡ ಬಲಿನಿಯಮನಾ-‡ಭ್ಯುದ್ಯತಸ್ಯೇವ ವಿಷ್ಣೋಃ

ಶ್ಲೋಕ ಗತ್ವಾಚೋರ್ಧ್ವಂ‡ ದಶಮುಖಭುಜೋ-‡ಚ್ಛ್ವಾಸಿತಪ್ರಸ್ಥಸಂಧೇಃ
॥೬೨॥ ಕೈಲಾಸಸ್ಯ‡ತ್ರಿದಶವನಿತಾ-‡ದರ್ಪಣಸ್ಯಾತಿಥಿಃ ಸ್ಯಾಃ ।
ಶೃಂಗೋಚ್ಛ್ರಾಯೈಃ‡ಕುಮುದವಿಶದೈಃ‡ಯೋ ವಿತತ್ಯ ಸ್ಥಿತಃ ಖಂ
ರಾಶೀಭೂತಃ‡ ಪ್ರತಿದಿನಮಿವ ‡ ತ್ರ್ಯಂಬಕಸ್ಯಾಟ್ಟಹಾಸಃ ॥

ಶ್ಲೋಕ ಉತ್ಪಶ್ಯಾಮಿ ತ್ವಯಿ ತಟಗತೇ ‡ ಸ್ನಿಗ್ಧಭಿನ್ನಾಂಜನಾಭೇ ।
॥೬೩॥ ಸದ್ಯಃ ಕೃತ್ತ-‡ದ್ವಿರದರದನ-‡ಚ್ಛೇದಗೌರಸ್ಯ ತಸ್ಯ ॥
ಶೋಭಾ ಮದ್ರೇಃ‡ಸ್ತಿಮಿತನಯನ-‡ಪ್ರೇಕ್ಷಣೀಯಾಂ ಭವಿತ್ರೀಂ ।
ಅಂಸನ್ಯಸ್ತೇ ‡ ಸತಿ ಹಲಭೃತಃ ‡ ಮೇಚಕೇ ವಾಸಸೀವ ॥

ಶ್ಲೋಕ ಹಿತ್ವಾ ತಸ್ಮಿನ್ ‡ ಭುಜಗವಲಯಂ ‡ ಶಂಭುನಾ ದತ್ತಹಸ್ತಾ ।
॥೬೪॥ ಕ್ರೀಡಾಶೈಲೇ ‡ ಯದಿ ಚ ವಿಹರೇತ್ ‡ ಪಾದಚಾರೇಣ ಗೌರೀ॥
ಭಂಗೀಭಕ್ತ್ಯಾ ‡ ವಿರಚಿತವಪುಃ ‡ ಸ್ತಂಭಿತಾಂತರ್ಜಲೌಘಃ ।
ಸೋಪಾನತ್ವಂ‡ಕುರು ಮಣಿತಟಾ-‡ರೋಹಣಾಯಾಗ್ರಯಾಯೀ॥

ಅನುವಾದ: ಮಂಜುಮಲೆತಪ್ಪಲೊಳು ಬಗೆಬಗೆ-।
ರಂಜನೆಗೆ ಮಸಗುಡದೆ ಭಾರ್ಗವ-।
ಶಿಂಜಿನಿಗೆ ಯಶ, ಮಂಚೆಗಿಹ ಪಥ, ಕ್ರೌಂಚ ಕಾವ ಬಿಲಂ ॥
ಮುಂಜರುಗು ಬಡಗದೆಸೆಗಪರಿಂ ।
ರಂಜಿಪ್ಪೈಯುದ್ಧಡ್ಡವಲಿ ಬಲಿ-
ಭಂಜನೆಗೆ ಮೈಗೊಟ್ಟ ವಿಷ್ಣುವ ಕರಿಯ ಹಜ್ಜೆಯೊಲು ॥

ಅನುವಾದ: ಮೇಲಕೇರುತ ಹತ್ತು ಮೊಗದನ ।
ತೋಳಿಗದುರಿದ ತಪ್ಪಲಿಹ, ಸುರ-
ಬಾಲೆಯರ ಕನ್ನಡಿಯು, ಕೈಲಾಸ ಕಹೆ ನೀನತಿಥಿ ॥
ಶೈಲವದು ಬಿಳಿಕುಮುದಶಿಖರದ ।
ಸಾಲಿನಿಂ ನಭ ತುಂಬುತೆಸೆವುದು ।
ನೀಲಗಳನತಿಸಗೆಯು ದಿನದಿನ ರಾಶಿಗೊಂಡವೊಲು ॥

ಅನುವಾದ: ನುಣ್ಣಗರೆದಿಹ ಕಣ್ಣಕಾಡಿಗೆ-।
ಚೆನ್ನೆಸೆವ ನೀಂ ಸಾನುವಪ್ಪಿರೆ ।
ಭಿನ್ನಿಸಿದ ಪೊಸತಾನೆಪಲ್ಲ ಳ ಬಿಳುಪಿನಾಗಿರಿಗೆ ॥
ತನ್ನ ಹೆಗಲೊಳು ಮೆರೆಯುತಿರೆ ಕರಿ-।
ಬಣ್ಣ ಹೊದಿಕೆಯು ಹಲಧರಂಗೆನೆ ।
ಕಣ್ಣ ದಿಟ್ಟಿಯ ನಿಲಿಪ ಶೋಭೆಯ ತಹುದ ನೂಹಿಪೆನು ॥

ಅನುವಾದ; ಹರನು ಹಾವ್ಬಳೆ ತೊರೆದ ತನ್ನಯ ।
ಕರವ ಕೊಡಲದ ಪಿಡಿದ ಗೌರಿಯು ।
ಬರಿಯ ಕಾಲಿಂ ಕ್ರೀಡೆ ಗಾಗಿರಿಯಲ್ಲಿ ವಿಹರಿಪೊಡೆ ॥
ಸರಿದು ಮುಂದೊಳಹೊನಲ ನಿಲುವಿಗೆ ।
ಶರಿಸಿದೊಡಲಿಂ ರಚಿಸಿ ಹಂತವ ।
ಗಿರಿಯ ಮಣಿತಟವೇರೆ ಮೆಟ್ಟಿಲ ಬಗೆಯ ನೀಂ ಮೆರೆಸೈ॥

ಶ್ಲೋಕ ತತ್ರಾವಶ್ಯಂ ‡ ವಲಯಕುಲಿಶೋ-‡ದ್ಘಟ್ಟನೋದ್ಗೀರ್ಣತೋಯಂ
॥೬೫॥ ನೇಷ್ಯಂತಿ ತ್ವಾಂ ‡ ಸುರಯುವತಯೋ‡ ಯಂತ್ರಧಾರಾಗೃಹತ್ವಂ॥
ತಾಭ್ಯೋ ಮೋಕ್ಷಃ‡ತವ ಯದಿ ಸಖೇ!‡ ಘರ್ಮಲಬ್ಧಸ್ಯ ನಸ್ಯಾತ್।
ಕ್ರೀಡಾಲೋಲಾಃ ‡ ಶ್ರವಣಪರುಷೈಃ‡ಗರ್ಜಿತೈಃ ಭಾಯಯೇಸ್ತಾಃ

ಶ್ಲೋಕ ಹೇಮಾಂಭೋಜ-‡ ಪ್ರಸವಿಸಲಿಲಂ ‡ ಮಾನಸಸ್ಯಾದದಧಾನಃ ।
॥೬೬॥ ಕುರ್ವನ್ ಕಾಮಂ ‡ ಕ್ಷಣಮುಖಪಟ-‡ ಪ್ರೀತಿಮೈರಾವಣಸ್ಯ ॥
ಧುನ್ವನ್ ಕಲ್ಪದ್ರುಮಕಿಸಲಯಾ-‡ ನ್ಯಂಶುಕಾನಿ ಸ್ವವಾತೈಃ ।
ನಾನಾಚೇಷ್ಟೈಃ ‡ ಜಲದ ! ಲಲಿತೈಃ‡ ನಿರ್ವಿಶೇಃ ತಂ ನಗೇಂದ್ರಂ॥

ಶ್ಲೋಕ ತಸ್ಯೋತ್ಸಂಗೇ ‡ ಪ್ರಣಯಿನ ಇವ ‡ ಸ್ರಸ್ತಗಂಗಾದುಕೂಲಾಂ ।
॥೬೭॥ ನ ತ್ವಂ ದೃಷ್ಟ್ವಾ ‡ ನ ಪುನರಲಕಾಂ ‡ ಜ್ಞಾಸ್ಯಸೇ ಕಾಮಚಾರಿನ್!
ಯಾ ವಃ ಕಾಲೇ‡ವಹತಿ ಸಲಿಲೋ-‡ದ್ಗಾರ-ಮುಚ್ಚೈಃವಿಮಾನಾಃ
ಮುಕ್ತಾಜಾಲ- ‡ ಗ್ರಥಿತಮಲಕಂ ‡ ಕಾಮಿನೀವಾಭ್ರವೃಂದಂ ॥

ಪೂರ್ವಮೇಘಃ ಸಮಾಪ್ತಃ

ಅನುವಾದ; ಅಲ್ಲಿ ಸುರಯುವತಿಯರು ಬಳೆಯಂ-।
ಚಲ್ಲಿ ಬಿಡದುಜ್ಜುತಿರೆ ಜಲ ಹೊರ-।
ಚೆಲ್ಲೆ ನಿನ್ನಂ ಯಂತ್ರಧಾರೆಯ ಮನೆಯನಾಗಿಪರು ॥
ಒಲ್ಲದೊಡೆ ಬಿಡಲಿಕ್ಕೆ ಬೇಸಿಗೆ-।
ಯಲ್ಲಿ ನೀಂ ದೊರಕಿರಲು ಕಿವಿಗಡು-
ಸುಳ್ಳ ವೊಳಗಲಿ ಬೆಚ್ಚಿಸೈ ನೀನಾಟಕಿಹರವರು ॥

ಅನುವಾದ: ಹೊನ್ನಬುಜವಿಹ ಮಾನಸದ ನೀ-
ರನ್ನು ವೊಗೆಯುತ, ವೊಗ ಮುಸುಕ ಚೆಲು-
ವನ್ನು ಚಣದ-ಲೈರಾವತಕೆ ಕಲ್ಪಿಸುತ, ಕಾಮುರ್ಗಿಲೆ!॥
ನಿನ್ನೆಲರಿನಲಿ ಸುರತರುವ ಚಿಗು-
ರೆನ್ನು-ವಂಶುಕ ವಲುಗಿಸುತ, ಮನ-।
ಬಣ್ಣಿಸುವ ಬಗೆಯಾಟದಿಂ ಹರಗಿರಿಯ ಸೊಗವ್ಹೊಂದೈ॥

ಅನುವಾದ; ನಲ್ಲನಂಕದೊಳಚಲಕೇರಿದ ।
ನಲ್ಲೆಯೊಲು ಹರಿಗಂಗೆದುಗುಲವ-।
ನುಳ್ಳಲಕೆಯಂ ಕಂಡರಿಯದಿರಲಾರೆ ಕಾಮಚರ ! ॥
ಕೊಳ್ಳುವುದು ಹೊಳಲೆತ್ತು ಮಹಡಿಗ-।
ಳಲ್ಲಿ ಕಾಲದಿ ಮಳೆಗರೆವ ಮುಗಿ-।
ಲೆಲ್ಲವನು ಸತಿಯಂತೆ ಮುತ್ತಲಿ ಪೆಣೆದ ಮುಂಗುರುಳಂ ॥

ಪೂರ್ವಮೇಘವು ಮುಗಿದುದು

ಉತ್ತರ ಮೇಘ

ಶ್ಲೋಕ ವಿದ್ಯುತ್ವಂತಂ ‡ ಲಲಿತವನಿತಾಃ ‡ ಸೇಂದ್ರಚಾಪಂ ಸಚಿತ್ರಾಃ ।
॥೧॥ ಸಂಗೀತಾಯ ‡ ಪ್ರಹತಮುರಜಾಃ ‡ ಸ್ನಿಗ್ಧಗಂಭೀರಘೋಷಂ ॥
ಅಂತಸ್ತೋಯಂ‡ಮಣಿಮಯಭುವಃ ‡ ತುಂಗ ಮಭ್ರಂಲಿಹಾಗಾಃ ।
ಪ್ರಾಸಾದಾ ಸ್ತ್ವಾಂ‡ತುಲಯಿತು ಮಲಂ‡ಯತ್ರ ತೈಸ್ತೈಃ ವಿಶೇಷೈಃ॥

ಶ್ಲೋಕ ಹಸ್ತೇ ಲೀಲಾ- ‡ ಕಮಲ, ಮಲಕೇ ‡ ಬಾಲಕುಂದಾಸುವಿದ್ಧಂ, ।
॥೨॥ ನೀತಾ ಲೋಧ್ರ-‡ ಪ್ರಸವರಜಸಾ ‡ ಪಾಂಡುತಾ ಮಾನಸಶ್ರೀಃ, ॥
ಚೂಡಾಪಾಶೇ ‡ ನವಕುರುಪಕಂ, ‡ ಚಾರುಕರ್ಣೇ ಶಿರೀಷಂ, ।
ಸೀಮಂತೇ ಚ ‡ ತ್ವದುಪಗಮಜಂ ‡ ಯತ್ರ ನೀಪಂ ವಧೂನಾಂ ॥

ಶ್ಲೋಕ ಯತ್ರೋನ್ಮತ್ತ-‡ಭ್ರಮರಮುಖರಾಃ ‡ ಪಾದಪಾಃ ನಿತ್ಯಪುಷ್ಪಾಃ,।
॥೩॥ ಹಂಸಶ್ರೇಣೀ- ‡ ರಚಿತರಶನಾಃ ‡ ನಿತ್ಯಪದ್ಮಾಃ ನಳಿನ್ಯಃ, ॥
ಕೇಕೋತ್ಕಂಠಾಃ ‡ ಭವನಶಿಖಿನಃ ‡ ನಿತ್ಯಭಾಸ್ವತ್ಕಲಾಪಾಃ, ।
ನಿತ್ಯಜ್ಯೋತ್ಸ್ನಾಃ‡ಪ್ರತಿಹತತಮೋ‡ವೃತ್ತಿರಮ್ಯಾಃಪ್ರದೋಷಾಃ,

ಶ್ಲೋಕ ಆನಂದೋತ್ಥಂ ‡ ನಯನಸಲಿಲಂ ‡ ಯತ್ರ ನಾನ್ಯೈಃ ನಿಮಿತ್ತೈಃ,।
॥೪॥ ನಾನ್ಯಸ್ತಾಪಃ ‡ ಕುಸುಮಶರಜಾತ್ ‡ ಇಷ್ಟಸಂಯೋಗಸಾಧ್ಯಾತ್॥
ನಾಪ್ಯನ್ಯಸ್ಮಾತ್ ‡ ಪ್ರಣಯಕಲಹಾತ್‡ವಿಪ್ರಯೋಗೋಪಪತ್ತಿಃ ।
ವಿತ್ತೇಶಾನಾಂ ‡ ನ ಚ ಖಲು ವಯೋ ‡ ಯೌವನಾ ದನ್ಯದಸ್ತಿ ॥

ಅನುವಾದ; ಚಲುವೆಯೆನೆ ಕುಡಿಮಿಂಚು, ಚಿತ್ರದ ।
ಕಲೆಯೆ ಕಾಮನ ಬಿಲ್ಲು, ಹಾಡಿಗೆ ।
ಸಲುವ ಮದ್ದಳೆದನಿಯೆ ಗಂಭೀರತೆಯ ಮೊಳಗಿಂಪು; ॥
ಹೊಳೆವ ರನ್ನದ ನೆಲವೆ ನೀರ್ಪನಿ-।
ಯೊಳಗು, ಮುಗಿಲನು ನಾಕುವೆತ್ತರ; ।
ತುಲನೆ ಮಹಡಿಗಳೊಡನೆ ನಿನಗಹುದಲ್ಲಿ ಗುಣಗುಣದಿಂ ॥

ಅನುವಾದ: ಹೆಂಗಳಾಟಿಕೆ ಕೈಯ್ಯೊಳಬುಜವು, ।
ಮುಂಗುರುಳ ಲೆಳೆಮೊಲ್ಲೆಹೆಣಿಗೆ, ಮೊ-
ಗಂಗಳಲಿ ಬಿಣ್ಪುಸಿರಿ ಮೊಳೆವುದು ಲೋಧ್ರ ಹೂ ಹುಡಿಯಿಂ;॥
ತಂಗಿಹುದು ಹೊಸಗೋರಟೆಯು ಕೇ- ।
ಶಂಗಳಲಿ, ಕಿವಿಯೊಳು ಶಿರೀಷವು, ।
ಸಂಗ ನಿನಗಿಹ ನೀಪಸುಮ ಬೈತಲೆಯೊಳಿಹವಲ್ಲಿ ॥

ಅನುವಾದ: ಮರಗಳೆಂದುಂ ಪೂತಿರಲು ಮಧು-।
ಕರದಮದಝೇಂಕಾರ ವುಂಟನ- ।
ವರತವರಳಿಹ ತಾವರೆಗೆ ಸಾಲಂಚೆ ಡಾಬುಂಟು; ॥
ಗರಿಮೆರೆಸಿ ಮನೆನವಿಲು ನಿರುತಂ ।
ಮೊರೆಯುತಿಹುದುಂಟಲ್ಲಿ, ಜೊನ್ನದ ।
ತೊರೆಯು ದಿರುಳುಗಳೆಸವುದುಂಟತಿತಮದ ಸೋಂಕಿರದ ॥

ಅನುವಾದ: ಕಂಬನಿಗ ಳಾನಂದದಿಂ ಬಹು- ।
ದೆಂಬುದಲ್ಲದೆ ಬೇರಿರ, ದಿನೆಯು- ।
ಳಂ ಬೆರೆತು ಕಳೆ-ವರಳಕಣೆ ನೋವುಳಿದು ಮತ್ತಿಲ್ಲ ॥
ಇಂಬು ವಿರಹಕೆ ರತಿಕಲಹ ವೊಂ- ।
ದೆಂಬು ದುಳಿ ದೆರಡಿಲ್ಲ, ಜೌವನ- ।
ವೆಂಬ ದೆಸೆ ತೊರೆ ದನ್ಯವಯ ಸಲ್ಲಿಲ್ಲ ಯಕ್ಷರಿಗೆ ॥

ಶ್ಲೋಕ ಯಸ್ಯಾಂ ಯಕ್ಷಾಃ‡ಸಿತಮಣಿಮಯಾ- ‡ ನ್ಯೇತ್ಯ ಹರ್ಮ್ಯಸ್ಥಲಾನಿ ।
॥೫॥ ಜ್ಯೋತಿಶ್ಛಾಯಾ-‡ಕುಸುಮರಚಿತಾ-‡ ನ್ಯುತ್ತಮಸ್ತ್ರೀಸಹಾಯಾಃ ॥
ಆಸೇವಂತೇ ‡ ಮಧುರತಿಫಲಂ ‡ ಕಲ್ಪವೃಕ್ಷಪ್ರಸೂತಂ ।
ತ್ವದ್ಗಂಭೀರ-‡ಧ್ವನಿಷು ಶನಕೈಃ ‡ಪುಷ್ಕರೇಷ್ವಾಹತೇಷು ॥

ಶ್ಲೋಕ ಮಂದಾಕಿನ್ಯಾಃ ‡ ಸಲಿಲ ಶಿಶಿರೈಃ ‡ ಸೇವ್ಯಮಾನಾಃ ಮರುದ್ಭಿಃ ।
॥೬॥ ಮಂದಾರಾಣಾ-‡ಮನು ತಟರುಹ-‡ಚ್ಛಾಯಯಾ ವಾರಿತೋಷ್ಣಾಃ
ಅನ್ವೇಷ್ಟವ್ಯೈಃ‡ಕನಕಸಿಕತಾ‡ ಮುಷ್ಟಿನಿಕ್ಷೇಪಗೂಢೈಃ ।
ಸಂಕ್ರೀಡನ್ತೇ‡ಮಣಿಭಿ ರಮರ-‡ಪ್ರಾರ್ಥಿತಾಃ ಯತ್ರ ಕನ್ಯಾಃ ॥

ಶ್ಲೋಕ ನೀವೀಬಂಧೋ-‡ಚ್ಛ್ವಸಿತಶಿಥಿಲಂ‡ಯತ್ರ ಬಿಂಬಾಧರಾಣಾಂ ।
॥೭॥ ಕ್ಷೌಮಂ ರಾಗಾ-‡ದನಿಭೃತಕರೇ-‡ಷ್ವಾಕ್ಷಿಪತ್ಸು ಪ್ರಿಯೇಷು ॥
ಅರ್ಚಿ ಸ್ತುಂಗಾ-‡ ನಭಿಮುಖಮಪಿ ‡ ಪ್ರಾಪ್ಯ ರತ್ನ ಪ್ರದೀಪಾನ್।
ಹ್ರೀಮೂಢಾನಾಂ ‡ ಭವತಿ ವಿಫಲ-‡ಪ್ರೇರಣಾ ಚೂರ್ಣಮುಷ್ಟಿಃ

ಶ್ಲೋಕ ಯತ್ರ ಸ್ತ್ರೀಣಾಂ‡ ಪ್ರಿಯತಮ-ಭುಜೋಚ್ಛ್ವಸಿತಾಲಿಂಗಿತಾನಾಂ।
॥೮॥ ಅಂಗಗ್ಲಾನಿಂ ‡ ಸುರತಜನಿತಾಂ ‡ ತಂತುಜಾಲಾವಲಂಬಾಃ ॥
ತ್ವತ್ಸಂರೋಧಾ-‡ ಪಗಮವಿಶದೈಃ ‡ ಚಂದ್ರಪಾದೈಃ ನಿಶ್ರೀಥೇ ।
ವ್ಯಾಲುಂಪಂತಿ‡ಸ್ಫುಟಜಲಲವ-‡ ಸ್ಯಂದಿನಃ ಚಂದ್ರಕಾಂತಾಃ ॥

ಅನುವಾದ: ಅಲ್ಲಿ ಯಕ್ಷರು ರಮಣಿಯರ ಜೊತೆ-।
ಯಲ್ಲಿ ಚುಕ್ಕಿಗಳ ಪಡಿನೆಳ ಲಲ-।
ರುಳ್ಳ ಹಾಲ್ಗಲ್ಲಿಂದೆಸೆವ ಮನೆಮಹಡಿಗಳ ಸೇರಿ ॥
ಮೆಲ್ಲಮೆಲ್ಲಗೆ ಬಡಿವ ಮದ್ದಳೆ-।
ಯಲ್ಲಿ ನಿನ್ನಯ ದಿಟ್ಟದನಿ ಮೊರೆ-।
ವಲ್ಲಿ ಸುರತರು ಪೆತ್ತ ರತಿಫಲಮಧುವ ಸೇವಿಪರು ॥

ಅನುವಾದ: ಮಿಂದು, ಮಂದಾಕಿನಿಯ ತಂಬೆಲ-।
ರಿಂದ ಸೇವೆಯ ಕೊಳುತ, ಹೊಳೆ-।
ಗೊಂದಿರುವ ಮಂದಾರನೆಳಲಿಂ ಬೇಗೆ ಯೊರೆಸುತ್ತ,।
ಸಂದ ಮಣಿಗಳ ಹೊನ್ನ ಹಿಡಿಮಳ-।
ಲಿಂ ದದುಕಿ ಬೈಚಿಟ್ಟು, ಹುಡುಕುವ ।
ಚಂದ ದಾಟದೊಳಲ್ಲಿಹರು ಸುರಕಾಮಿಕನ್ನೆಯರು ॥

ಅನುವಾದ: ಪ್ರಿಯರು ನಡುಗುವ ಕೈಗಳಲಿ ರಮ-।
ಣಿಯರ ನಡುಗಂಟೊಡೆಯೆ ಸಡಿಲುಡಿ-।
ಗೆಯನು ಬಹುರಾಗದಲಿ ಸೆಳೆಯು ಲಬಲೆಯ ರತಿನಾಚಿ-॥
ಕೆಯಲಿ ಮತಿಗೆಟ್ಟೆದುರೊಳಿಹ ಮಣಿ-।
ಮಯದ ಸಿರಿಸೊಡರುಗಳ ಹಿಡಯ ಹು-।
ಡಿಯೊಳ ಗಾರಿಸಲೆರಗಿ ಫಲವನು ಗಳಿಸದಿಹ ರಲ್ಲಿ ॥

ಅನುವಾದ: ಅಲ್ಲಿ ನಡುನಿಸೆ ನಿನ್ನತಡೆ ಯಳಿ-।
ವಲ್ಲಿ ತಿಳಿಸಸಿಯ ಕಳೆಗಳ ಸೋಂ-।
ಕಲ್ಲಿ ನೀರ್ಪನಿ ಯೊಸರ, ಲವುಗಳನು ಶಶಿಕಾಂತವನೆ ।
ಕಲ್ಲುಗಳು ಜೋತಿರುವ ತಂತುಗ-
ಳಲ್ಲಿ ಸುರಿಸು ತಿನೆಯರ ಬಿಗಿಯ-
ಪ್ಪುಳ್ಳ ತೋಳ್ ಸಡಿಲಲಳಿಪುವು ಪೆಣ್ಗಳಿಗೆ ರತಿಬಳಲಂ ॥

ಶ್ಲೋಕ ನೇತ್ರಾನೀತಾಃ ‡ ಸತತಗತಿನಾ ‡ ಯದ್ವಿಮಾನಾಗ್ರಭೂಮೀಃ ।
॥೯॥ ಆಲೇಖ್ಯಾನಾಂ‡ ಸ್ವಜಲಕಣಿಕೈಃ‡ ದೋಷಮುತ್ಪಾದ್ಯ ಸದ್ಯಃ ॥
ಶಂಕಾಸ್ಪೃಷ್ಟಾ‡ಇವ ಜಲಮುಚಃ‡ ತ್ವಾದೃಶೋ ಜಾಲಮಾರ್ಗೈಃ
ಧೂಮೋದ್ಗಾರಾ-‡ನುಕೃತನಿಪುಣಾಃ‡ ಜರ್ಝರಾಃ ನಿಷ್ಪತಂತಿ ॥

ಶ್ಲೋಕ ಅಕ್ಷಯ್ಯಾಂತ-‡ರ್ಭವನಪತಯಃ‡ ಪ್ರತ್ಯಹಂ ರಕ್ತಕಂಠೈಃ ।
॥೧೦॥ ಉದ್ಗಾಯದ್ಭಿಃ ‡ ಧನಪತಿಯಶಃ ‡ ಕಿನ್ನರೈಃ ಯತ್ರ ಸಾರ್ಧಂ ॥
ವಿಭ್ರಾಜಾಖ್ಯಂ ‡ ವಿಬುಧವನಿತಾ-‡ವಾರಮುಖ್ಯಾಸಹಾಯಾಃ ।
ಬಧ್ಧಾಲಾಪಾಃ ‡ ಬಹಿರುಪವನಂ ‡ ಕಾಮಿನೋ ನಿರ್ವಿಶಂತಿ ॥

ಶ್ಲೋಕ ಗತ್ಯುತ್ಕಂಪಾ-‡ದಲಕಪತಿತೈಃ‡ಯತ್ರ ಮಂದಾರಪುಷ್ಪೈಃ ।
॥೧೧॥ ಪತ್ರಚ್ಛೇದೈಃ ‡ ಕನಕಕಮಲೈಃ ‡ ಕರ್ಣವಿಭ್ರಂಶಿಭಿಶ್ಚ ॥
ಮುಕ್ತಾಜಾಲೈಃ ‡ ಸ್ತನಪರಿಸರ-‡ಚ್ಛಿನ್ನಸೂತ್ರೈಶ್ಚ ಹಾರೈಃ ।
ನೈಶೋ ಮಾರ್ಗಃ‡ ಸವಿತುರುದಯೇ ‡ಸೂಚ್ಯತೇ ಕಾಮಿನೀನಾಂ ॥

ಶ್ಲೋಕ ಮತ್ವಾ ದೇವಂ ‡ಧನಪತಿಸಖಂ ‡ ಯತ್ರ ಸಾಕ್ಷಾತ್ ವಸಂತಂ ।
॥೧೨॥ ಪ್ರಾಯಃ ಚಾಪಂ ‡ ನ ವಹತಿ ಭಯಾತ್ ‡ ಮನ್ಮಥಃ ಷಟ್ಪದಜ್ಯಂ
ಸಭ್ರೂಭಂಗಂ ‡ ಪ್ರಹಿತನಯನೈಃ ‡ ಕಾಮಿಲಕ್ಷ್ಯೇಷ್ವಮೋಘೈಃ ।
ತಸ್ಯಾರಂಭಃ ‡ ಚತುರವನಿತಾ-‡ ವಿಭ್ರಮೈರೇವ ಸಿದ್ಧಃ ॥

ಅನುವಾದ: ಗಾಳಿ, ಪುರವದ ರೇಳ್ಮಹಡಿವುನೆ-।
ಮಾಳಿಗೆಗೆ ಬಿಡದೊಯ್ದು, ನಿನ್ನನು ।
ಹೋಲು ಮಬ್ಧಿಗ ಳಂಬುಕಣದಿಂ ಕೆಡೆಸಿ ಚಿತ್ರಗಳಂ ॥
ನೀಲಧೂಮದ ಚತುರರೂಪವ ।
ತಾಳುತಲಿ ಭಯಗೊಂಡವೆನೆ ಗೃಹ-
ಜಾಲಗಳ ಪಥವಿಡಿದು ಸರಸರನೊಡನೆ ಹೊರಬಹವು ॥

ಅನುವಾದ; ವಿತ್ತಪತಿಕೀರ್ತಿಯನು ಕಿನ್ನರ-।
ರೆತ್ತಿದಿಂಪಿನ ದನಿಗಳಲಿ ಪಾ-।
ಡುತ್ತಿರಲು ಸವೆಯದಿಹ ನಿಧಿಗಧಿಪರಹ ಕಾಮಿಗಳು, ॥
ಉತ್ತಮದ ಸುರಗಣಿಕೆಯರ ಜೊತೆ-।
ಪೊತ್ತು ಸುಖಿಸುವ ರಲ್ಲಿ ಸಲ್ಲಪಿ-।
ಸುತ್ತ ವೈಭ್ರಾಜವೆನೆ ಹೊರತೋಟದಲಿ ದಿನದಿನದಿ ॥

ಅನುವಾದ: ನಡೆವ ಸಡಗರ ಕಲುಗಿ ಮುಂಗುರು-।
ಳಿಡೆಕೆಡೆದ ಮಂದಾರ ಹೂಗಳು ।
ಸಡಲಿ ಕಿವಿಯಿಂ ಖಂಡಪತ್ರದ ಹೊನ್ನಿನಭುಜಗಳು ॥
ಮುಡಿದ ಮುತ್ತಿನ ವಿಸರಗಳು ಮೊಲೆ
ಯೆಡೆ ಹರಿದೆಳೆಯ ಹಾರಗಳು ಗುರು-।
ತಿಡುವುವ ಲ್ಲಬಿಸಾರಿಕೆಯ ರುದಯದಲಿ ನಿಶಿಪಥವಂ ॥

ಅನುವಾದ: ಧನಪಸಖ ಶಿವಗಲ್ಲಿ ನಿಜರೂ-।
ಪಿನಲಿ ನೆಲೆಯೆಂದರಿತು ಭಯದಿಂ ।
ಮನಸಿಜನು ಪೊತ್ತದಿಹ ನಾರಡಿಪೆದೆಯ ನಿಜ ಧನುವಂ ।
ನೆನೆಯುಲವನಾರಂಭ ಕಾಮುಕ-।
ಜನಕೆ ಗುರಿಗೆಡದಿಟ್ಟ ದಿಟ್ಟಿಯ ।
ವನಿತೆಯುರ ಕುಡಿಹುಬ್ಬ ಜಾಣ್ಮೆಯ ಲಿರದ ಸಿದ್ಧಿಪುದು॥

ಶ್ಲೋಕ ವಾಸಃ ಚಿತ್ರಂ‡ಮಧು ನಯನಯೋಃ‡ವಿಭ್ರಮಾದೇಶದಕ್ಷಂ ।
॥೧೩॥ ಪುಷ್ಪೋದ್ಭೇದೈಃ ‡ ಸಹಕಿಸಲಯೈಃ ‡ ಭೂಷಣಾನಾಂ ವಿಕಲ್ಪಾ
ಲಾಕ್ಷಾರಾಗಂ ‡ ಚರಣಕಮಲ-‡ ನ್ಯಾಸಯೋಗ್ಯಂ ಪ್ರಿಯಾಯಾಃ ।
ಏಕಃ ಸೂತೇ ‡ ಸಕಲಮಬಲಾ-‡ಮಂಡನಂ ಕಲ್ಪವೃಕ್ಷಃ ॥

ಶ್ಲೋಕ ತತ್ರಾಗಾರಂ ‡ ಧನಪತಿಗೃಹಾ-‡ನುತ್ತರೇಣಾಸ್ಮದೀಯಂ ।
॥೧೪॥ ದೂರಾಲ್ಲಕ್ಷ್ಯಂ ‡ ಸುರಪತಿಧನು-‡ಶ್ಚಾರುಣಾ ತೋರಣೇನ ॥
ಯಸ್ಯೋಪಾಂತೇ ‡ಕೃತಕತನಯಃ ‡ ಕಾಂತಯಾ ವರ್ಧಿತೋ ಮೇ
ಹಸ್ತಪ್ರಾಪ್ಯ ‡ ಸ್ತಬಕ ನಮಿತೋ ‡ ಬಾಲಮಂದಾರವೃಕ್ಷಃ ॥

ಶ್ಲೋಕ ವಾಪೀ ಚಾಸ್ಮಿನ್ ‡ ಮರಕತ ಶಿಲಾ-‡ಬದ್ಧ ಸೋಪಾನ ಮಾರ್ಗಾ
॥೧೫॥ ಹೈಮೈಃ ಛನ್ನಾಃ‡ ವಿಕಚಕಮಲೈಃ ‡ ಸ್ನಿಗ್ಧವೈಡೂರ್ಯನಾಳೈಃ
ಯಸ್ಯಾಃ ತೋಯೇ ‡ ಕೃತವಸತಯಃ ‡ ಮಾನಸಂ ಸನ್ನಿಕೃಷ್ಟಂ ।
ನಾಧ್ಯಾಸ್ಯಂತಿ ‡ ವ್ಯಪಗತಶುಚಃ‡ ತ್ವಾಮಪಿ ಪ್ರೇಕ್ಷ್ಯ ಹಂಸಾಃ ॥

ಶ್ಲೋಕ ತಸ್ಯಾಸ್ತೀರೇ ‡ ರಚಿತಶಿಖರಃ ‡ ಪೇಶಲೈ ರಿಂದ್ರನೀಲೈಃ ।
॥೧೬॥ ಕ್ರೀಡಾಶೈಲಃ ‡ ಕನಕಕದಳೀ-‡ವೇಷ್ಟನಪ್ರೇಕ್ಷಣೀಯಃ ॥
ಮದ್ಗೇಹಿನ್ಯಾಃ ‡ ಪ್ರಿಯ ಇತಿ ಸಖೇ ! ‡ ಚೇತಸಾ ಕಾತರೇಣ ।
ಪ್ರೇಕ್ಷ್ಯೋಪಾಂತ-‡ಸ್ಫುರಿತತಟಿತಂ ‡ ತ್ವಾಂ ತಮೇವ ಸ್ಮರಾಮಿ ॥

ಅನುವಾದ: ಕಂಗಳಾಟಕೆ ಸಲುವ ಮಧುವನು, ।
ರಂಗುರಂಗುಡುಗೆತೊಡಿಗೆಗಳ, ಚಿಗು-।
ರಂಗಳೊಡನಿಹ ಹೂಗಳಂ, ಬಗೆಬಗೆಯ ತೊಡವುಗಳಂ, ॥
ಪೆಂಗಳಡಿಗಿಡ ಲುಚಿತ ದರಗಿನ ।
ರಂಗುರಸ, ಮಿಂತಲ್ಲಿ ವಧುಗಳ-।
ಸಿಂಗರಿಸಲುಳ್ಳೆಲ್ಲವನು ಹೆರುವುದು ಕಲ್ಪತರು ವೊಂದೆ ॥

ಅನುವಾದ: ಧನದ ನರಮನೆ ಗೆಮ್ಮಮನೆ ಬಡ-।
ಗಣದು, ಮಳೆಬಿಲ್ಲಂದವಿಹ ತೋ-।
ರಣದ ಹೊಳಪಿಂ ದದನು ಗುರುತಿಪೆ ದೂರದಿಂದಲ್ಲಿ ॥
ಮನೆಯೆಡೆಯೊಳೆನ್ನಿನೆಯುಳಿಂ ನಿಜ-।
ತನಯನೊಲು ಬೆಳೆಸಿರುವ ಕೈಗಳಿ-।
ಗೆ ನಿಲುಕುವ ಗೊಂಚಲಲಿ ಜಗ್ಗಿಹುದೆಳೆಯ ಮಂದಾರಂ ॥

ಅನುವಾದ: ಬಳಿಯು ಲದಕಿಹು ದಿಳಿವ ಭಾವಿಯು, ।
ತಳಿದಿರುವುದದು ಪಚ್ಚೆಪಟ್ಟಲ, ।
ಹೊಳೆವ ವೈಡೂರ್ಯಗಳ ನಾಳದ ಬಿರಿದ ಹೊನ್ನಬುಜಂ ॥
ಗಳಲಿ ಮುಸುಕಿಹ ತಿಳಿಯು ಜಲದಲಿ ।
ನೆಲಸಿ ದಂಚೆಗಳ ಳಳಿದ ದುಗುಡದ-।
ಲೆಳಸ ಪೆಡೆಯಿಹ ಮಾನಸಸರಕೆ ನೋಡಿಯುಂ ನಿನ್ನಂ ॥

ಅನುವಾದ; ಅದರ ಕರೆಗಿರುವಾಟ ದದ್ರಿಯು ।
ತುದಿಯ ಸೊಗಯಿ ಪುದಿಂದ್ರನೀಲಗ-
ಳದನು ಸುತ್ತಿಹ ಹೊನ್ನಬಾಳೆಯು ಕಣ್ಣ ಸೆಳೆಯುವುದು ॥
ಮುದವ ತಹು ದೆನ್ನಾಕೆಗೆಂದಾಂ ।
ಕುದಿವ ಮನದಿಂ ಥಳಿಪ ಮಿಂಚನು ।
ಹೊದೆದ ನಿನ್ನಂ ನೋಡಿ ನೆನೆನೆನೆಸುತಿಹೆ ನದ ಗೆಳೆಯ! ।

ಶ್ಲೋಕ ರಕ್ತಾಶೋಕಃ ‡ ಚಲಕಿಸಲಯಃ ‡ ಕೇಸರಶ್ಚಾತ್ರ ಕಾಂತಃ ।
॥೧೭॥ ಪ್ರತ್ಯಾಸನ್ನೌ ‡ ಕುರವಕವೃತೇಃ ‡ ಮಾಧವೀಮಂಟಪಸ್ಯ ॥
ಏಕಃ ಸಖ್ಯಾಃ ‡ ತವ ಸಹ ಮಯಾ ‡ ವಾಮಪಾದಾಭಿಲಾಷೀ ।
ಕಾಂಕ್ಷತ್ಯನ್ಯೋ ‡ ವದನಮದಿರಾಂ ‡ ದೋಹದಛದ್ಮನಾ ಸ್ಯಾಃ॥

ಶ್ಲೋಕ ತನ್ಮಧ್ಯೇ ಚ ‡ ಸ್ಫಟಿಕ-ಫಲಕಾ ‡ ಕಾಂಚನೀ ವಾಸಯಷ್ಟಿಃ ।
॥೧೮॥ ಮೂಲೇ ಬದ್ಧಾ ‡ ಮಣಿಭಿರನತಿ-‡ಪ್ರೌಢವಂಶಪ್ರಕಾಶೈಃ
ತಾಳೈಃ ಶಿಂಜಾ– ‡ ವಲಯ-ಸುಭಗೈಃ‡ ನರ್ತಿತಃ ಕಾಂತಯಾ ಮೇ॥
ಯಾ ಮಧ್ಯಾಸ್ತೇ ‡ ದಿವಸವಿಗಮೇ ‡ ನೀಲಕಂಠಃ ಸುಹೃದ್ವಃ

ಶ್ಲೋಕ ಏಭಿಃ ಸಾಧೋ ! ‡ ಹೃದಯನಿಹಿತೈಃ ‡ ಲಕ್ಷಣೈಃ ಲಕ್ಷಯೇತಾಃ
॥೧೯॥ ದ್ವಾರೋಪಾಂತೇ ‡ ಲಿಖಿತವಪುಷೌ‡ ಶಂಖಪದ್ಮೌ ಚ ದೃಷ್ಟ್ವಾ॥
ಕ್ಷಾಮಚ್ಛಾಯಂ ‡ ಭವನ ಮಧುನಾ ‡ ಮದ್ವಿಯೋಗೇನ ನೂನಂ।
ಸೂರ್ಯಾಪಾಯೇ‡ನ ಖಲು ಕಮಲಂ‡ ಪುಷ್ಯತಿ ಸ್ವಾ ಮಭಿಖ್ಯಾಂ॥

ಶ್ಲೋಕ ಗತ್ವಾ ಸದ್ಯಃ ‡ ಕಲಭತನುತಾಂ ‡ ಶೀಘ್ರ ಸಂಪಾತಹೇತೋಃ ॥
॥೨೦॥ ಕ್ರೀಡಾಶೈಲೇ ‡ ಪ್ರಥಮಕಥಿತೇ ‡ ರಮ್ಯಸಾನೌ ನಿಷಣ್ಣಃ ॥
ಅರ್ಹಸ್ಯಂತ-‡ ರ್ಭವನಪತಿತಾಂ ‡ ಕರ್ತು ಮಲ್ಪಾಲ್ಪಭಾಸಂ।
ಖದ್ಯೋತಾಳೀ–‡ ವಿಲಸಿತನಿಭಾಂ ‡ ವಿದ್ಯುದುನ್ಮೇಷದೃಷ್ಟಿಂ ॥

ಅನುವಾದ- ಅಲಗುವೆಳೆಯಲಿ ಕೆಂಪಿನಸುಗೆಯು ।
ಚೆಲುವ ಬಕುಳವು ಮಲ್ಲಿಹವು ನೆರೆ-।
ಯೊಳಗೆ ಕೆಂಗೋರಟೆಯು ಬೇಟಿಯು ಮೊಲ್ಲೆ ಮಂಟಪದ ॥
ತಳೆವುದೊಂದೆನ್ನೊಡನೆ ನಿನ್ನಯ ।
ಗೆಳತಿಯೆಡದಡಿಯೊದೆವ ಬಯಕೆಯು-।
ನುಳಿದುದಾಕೆಯ ಮದ್ಯದಿಂ ಬಾಯುಗಳ ನೆಳೆಸುವುದು ॥

ಅನುವಾದ- ತರುಗಳೆರಡರ ನಡುವೆ ಬಲುಬೆಳೆ-।
ಸಿರದ ಬಿದಿರಂತೆಸೆವ ಮಣಿ ಗ-।
ಟ್ಟಿರುವ ಜಗುಲಿಯ ಪಳುಕು ಹಲಗೆಯ ಹೊನ್ನ ನೆಲೆಗಂಬಂ ॥
ಮರೆವು ದದರೊಳೆ ನೆಲೆಯು ತಾಳದಿ ।
ನೆರೆದ ಕೈಬಳೆ ಯಿಂಚರದೊಳೆ-।
ನ್ನರಸಿ ಕುಣಿಸುವ ನಿನ್ನ ಕೆಳೆ ನವಿಲಿಂಗೆ ದಿನಸವೆಯೇ ॥

ಅನುವಾದ- ಮನದೊಳಿಟ್ಟೀ ಲಕ್ಷಣಗಳಿಂ ।
ಮನೆಯ ಬಾಗಿಲಿ ನಿರ್ಕಡೆಯ ಚಿ-
ತ್ರಣದೊಳೊಡಲಿನ ಶಂಖಪದ್ಮಂಗಳನು ನೀ ಕಂಡು ॥
ಮನೆಯನಾ ಮಗಲಿರಲು ಬಲುಸೊಬ-।
ಗಣಗೆ ಗುರುತಿಪೆ ನಿಪುಣ! ನೀಂ ನಿಜ ।
ದಿನಪ ನಡಗಲು ತಾವರೆಯು ನಿಜ ಸೊಂಪ ನುಬ್ಬಿಸದೈ ॥

ಅನುವಾದ- ಬೇಗ ಹಾರಲಿ ಕಾನೆಮರಿಯುಂ-
ತಾಗಿ ಸುತ್ತೊಡನೊಡಲ ತಡಿಚೆಲು-।
ವಾಗೆ, ಮೊದಲೊರೆ ದಾಟ ದದ್ರಿಯ ಮೇಲೆ ನೀಂ ಕುಳಿತು ॥
ಮೇಗಣಿಂ ದೊಳ ಹೊಗಿಸೆ ತಕ್ಕವ-।
ನಾಗಿರುವೆ ಮಿಂಚುಳದ ಗಣಕೆಣೆ ।
ಯಾಗಲಿಪ ಸುಳಿಮಿಂಚು ದಿಟ್ಟಿಯ ಹೊಳಪನಿಸಿಸಿನಿಸಂ ॥

ಶ್ಲೋಕ ತನ್ವೀ ಶ್ಯಾಮಾ,‡ ಶಿಖರಿದಶನಾ, ‡ ಪಕ್ವಬಿಂಬಾಧರೋಷ್ಠೀ ।
॥೨೦॥ ಮಧ್ಯೇ ಕ್ಷಾಮಾ,‡ ಚಕಿತ ಹರಿಣೀ‡ ಪ್ರೇಕ್ಷಣಾ, ನಿಮ್ನನಾಭಿಃ,॥
ಶ್ರೋಣೀಭಾರಾ-‡ ದಲಸಗಮನಾ,‡ ಸ್ತೋಕನಮ್ರಾಸ್ತನಾಭ್ಯಾಂ॥
ಯಾ ತತ್ರಾಸ್ತೇ ‡ ಯುವತಿವಿಷಯೇ ‡ ಸೃಷ್ಟಿ ರಾದ್ಯೇವಧಾತುಃ॥

ಶ್ಲೋಕ ತಾಂ ಜಾನೀಥಾಃ ‡ ಪರಿಮಿತಕಥಾಂ ಜೀವಿತಂ ಮೇ ದ್ವಿತೀಯಂ ।
॥೨೧॥ ದೂರೀ ಭೂತೇ ‡ ಮಯಿ ಸಹಚರೇ ಚಕ್ರವಾಕೀ ಮಿವೈಕಾಂ ॥
ಗಾಡೋತ್ಕಂಠಾಂ‡ಗುರುಷು ದಿವಸೇ-‡ಷ್ವೇಷು ಗಚ್ಛತ್ಸು ಬಾಲಾಂ।
ಜಾತಾಂ ಮನ್ಯೇ‡ ಶಿಶಿರಮಥಿತಾಂ ‡ ಪದ್ಮಿನೀಂ ವಾಽನ್ಯ ರೂಪಾಂ॥

ಶ್ಲೋಕ ನೂನಂ ತಸ್ಯಾಃ‡ಪ್ರಬಲರುದಿತೋ-‡ಚ್ಛೂನನೇತ್ರಂ ಪ್ರಿಯಾಯಾಃ
॥೨೨॥ ನಿಶ್ವಾಸಾನಾ-‡ ಮಶಿಶಿರತಯಾ ‡ ಭಿನ್ನವರ್ಣಾಧರೋಷ್ಠಂ ।
ಹಸ್ತನ್ಯಸ್ತಂ ‡ ಮುಖ ಮಸಕಲ-‡ವ್ಯಕ್ತಿ ಲಂಬಾಲಕತ್ವಾತ್ ।
ಇಂದೋ ರ್ದೈನ್ಯಂ ‡ ತ್ವದುಪಸರಣ‡ಕ್ಲಿಷ್ಟಕಾಂತೇ ರ್ಬಿಭರ್ತಿ ॥

ಶ್ಲೋಕ ಆಲೋಕೇ ತೇ ‡ ನಿಪತತಿ ಪುರಾ ‡ ಸಾ ಬಲಿವ್ಯಾಕುಲಾ ವಾ,।
॥೨೪॥ ಮತ್ಸಾದೃಶ್ಯಂ ‡ ವಿರಹತನುವಾ‡ ಭಾವಗಮ್ಯಂ ಲಿಖಂತೀ॥
ಪೃಚ್ಛಂತೀ ವಾ ‡ ಮಧುರವಚನಾಂ ‡ ಶಾರಿಕಾಂ ಪಂಜರಸ್ಥಾಂ ।
'ಕಚ್ಚಿತ್ ? ಭರ್ತುಃ ‡ಸ್ಮರಸಿ ರಸಿಕೇ!‡ತ್ವಂ ಹಿ ತಸ್ಯ ಪ್ರಿಯೇತಿ' ॥

ಅನುವಾದ; ತೆಳ್ಳೊಡಲ, ನಡುಜೌವನದ, ಕುಡಿ-।
ಪಲ್ಲ. ತೊಂಡೆಯ ಹಣ್ಣ ಕೆಳತುಟಿ, ।
ಯಳ್ಳಿದೆಯೆ, ರಳೆ ಗಣ್ಣ, ನೀಳಿ ಪೊಕ್ಕಳಿನ, ಬಡುನಡುಘ,॥
ಮೆಲ್ಲ ನಡೆಯ ನಿತಂಬ ಭಾರದಿ, ।
ಬಲ್ಲಿವೆದೆಗಳಲಿ ನಿಸು ಬಾಗಿದ, ।
ಚೆಲ್ಲಿ ಹರೆಹೆಂಗಳಲಿ ಬೊಮ್ಮನ ಸೃಷ್ಟಿ ಗಿದೆಮೊದಲೋ॥

ಅನುವಾದ: ಆಕೆಯೆಡೆಬಿಡ ದೆನ್ನ ನಾಚಗೆ ।
ನೂಕೆ. ಪೆಣ್ಣೆಣೆವಕ್ಕಿಯುರ ತೇ- ।
ಕಾಕಿ ನುಡಿಸ ವೆವರ ಳೆ ತಿಳಿ ನನಗೆರಡನೆಯ ಜೀವಂ॥
ಶೋಕಿಸುತ್ತತಿ ವಿರಹ ದಿನಗಳ ।
ನೂಕು ವೆಳೆಯುಳ ನರಿಪ ನಾಂ ಹಿಮ-।
ಸೇಕದಿಂ ಕೆಡೆ ದನ್ಯರೂಪವ ತಳೆದ ನಳಿನಿಯೆನೆ॥

ಅನುವಾದ; ಅಳಳ ಹೆಚ್ಚಳ ಕುಬ್ಬು ಗಣ್ಣಂ ।
ತಳೆದ ಬಿಸಿನಿಟ್ಟು ಸಿರಿನಿಂ ರಂ-।
ಗಳಿದ ಕೆಳದುಟಿ ಯೊಂದಿರುವ ಕರತಳದೊಳೂರಿಟ್ಟ॥
ತಲೆಯ. ಮುಂಗುರು ಳಿಳಿದಿರಲಿ ಕರೆ-
ಸುಳಿವ ಮೊಗಮದು ಮುತ್ತಿದೊಡೆ ನೀಂ।
ಕಳೆಯುಳಿದ ಚಂದ್ರಮನ ದೈನ್ಯತೆ ಯೊಂದುವುದು ನಿಜವೈ॥

ಅನುವಾದ; ಮುನ್ನ ಬೀಳ್ವಳು ನಿನ್ನ ದಿಟ್ಟಿಯೊ-
ಳೆನ್ನರಸಿ, ಪೂಜೆಯಲಿ ತೊಡಗಿಹ ।
ಳೆನ್ನ ಭಾವಿಸಿ ವಿರಹದಿಂ ನವೆದೊಡಲ ಚಿತ್ರಿಪಳೊ ?॥
ಚೆನ್ನುಲಿವ ಪಂಜರದ ಸಾರಿಕೆ
ಯುನ್ನು ಕೇಳ್ವಳೋ ? "ರಸಿಕೆ ನೆನೆವೆಯ ?
ನಸನ್ನೊಡೆಯನಂ ಮುದ್ದು ನೀನಾತನಿಗೆ ನಿಜ"ವೆಂದು॥

ಶ್ಲೋಕ॥ ಉತ್ಸಂಗೇ ವಾ ಮಲಿನವಸನೇ ‡ ಸೌಮ್ಯ ! ನಿಕ್ಷಿಪ್ಯ ವೀಣಾಂ।
॥೨೫॥ ಮದ್ಗೋತ್ರಾಂಕಾಂ ವಿರಚಿತಪದಂ ‡ ಗೇಯಮುದ್ಗಾತು ಕಾಮಾ॥
ತಂತ್ರೀ ಮಾದ್ರಾಂ ನಯನಸಲಿಲೈಃ ‡ ಸಾರಯಿತ್ವಾ ಕಥಂಚಿತ್।
ಭೂಯೊ ಭೂಯೋ‡ಸ್ವಯಮಪಿ ಕೃತಾಂ‡ಮೂರ್ಛನಾಂವಿಸ್ಮರಂತಿ

ಶ್ಲೋಕ॥ ಶೇಷಾನ್ ಮಾಸಾನ್‡ವಿರಹ ದಿವಸ.‡ಸ್ಥಾಪಿಸ ಸ್ಯಾವಧೇ ರ್ವಾ-
॥೨೬॥ ವಿನ್ಯಸ್ಯಂತೀ ಭುವಿ ಗಣನಯಾ ‡ ದೇಹಳೀದತ್ತಪುಷ್ಪೈಃ।
ಸಂಭೋಗಂ ವಾ‡ಹೃದಯ ನಿಹಿತಾ.‡ರಂಭ ಮಾಸ್ವಾದಯಂತೀ-।
ಪ್ರಾಯೇಣೈತೇ‡ ರಮಣವಿರಹೇ-‡ ಷ್ವಂಗನಾನಾಂ ವಿನೋದಾಃ ॥

ಶ್ಲೋಕ॥ ಸವ್ಯಾಪಾರಾ‡ಮಹನಿ ನ ತಥಾ ಪೀಡಯೇತ್ ವಿಪ್ರಯೋಗಃ।
॥೨೭॥ ಶಂಕೇ ರಾತ್ರೌ‡ಗುರುತರ ಶುಚಂ‡ನಿರ್ವಿನೋದಾಂ ಸಖೀಂ ತೇ ॥
ಮತ್ಸಂದೇಶೈಃ‡ ಸುಖಯಿತು ಮಲಂ‡ ಪಶ್ಯ ಸಾಧ್ವೀಂ ನಿ ಶಿಥೇ।
ತಾ ಮನ್ನಿದ್ರಾ ‡ ಮವನಿಶಯನೇ ‡ ಸದ್ಮವಾತಾಯನಸ್ಥಃ ॥

ಶ್ಲೋಕ॥ ಆಧಿಕ್ಷಾಮಾಂ ‡ ವಿರಹಶಯನೇ ‡ ಸನಿಷಣ್ಣೈಕಪಾಶ್ವಾಂ।
॥೨೮॥ ಪ್ರಾಚೀಮೂಲೇ‡ತನುಮಿವ ಕಳಾ-‡ಮಾತ್ರ ಶೇಷಾಂ ಹಿಮಾಂಶೋಃ॥
ನೀತಾ ರಾತ್ರಿಃ‡ಕ್ಷಣ ಇವ ಮಯಾ-‡ಸಾರ್ಧ ಮಿಚ್ಛಾರತೈ ರ್ಯಾ।
ತಾಮುಷ್ಣೋಷ್ಣೈಃ‡ವಿರಹಮಹತೀ-‡ಮಶ್ರುಭಿರ್ಯಾಪಯಂತೀಂ॥

ಅನುವಾದ: ಕೊಳೆಯು ಡೆಯೊಳಿಹ ತೊಡೆಗೆ ವೀಣೆಯು
ಸಲಿಸು ತೆನ್ನಂಕಿತದ ಪದಗಳ
ಬಳಸಿ ರಚಿಸಿದ ಕೀರ್ತನೆಯ ತಾ ನೆತ್ತಿಹಾಡಲಿರೆ ||
ತುಳುಕು ಕಂಬನಿ ತಂತಿಗಳ ನೆನೆ-|
ಸ ಲವ ನೊರೆಸುತ್ತ ಲೆಂತೊ ಸತಿ ಸಲ-|
ಸಲಕು ಮರೆವಳೋ ತಾನೆ ರಚಿಸಿದ ಗೀತೆ ಯುಂ ತಮ್ಮ !

ಅನುವಾದ; ವಿರಹ ದಿನದಿಂ ಮುಗಿಯಲಿಹ ಗಡಿ-
ವರೆಗ ಮುಳಿದಿಪ ತಿಂಗಳೆಣಿಸಲಿ
ಕಿರಿಸುವಳೊ ನೆಲದೊಳಗೆ ಹೊಸ್ತಿಲಿಗಿಟ್ಟ ಹೂಗಳಲಿ ||
ತರಳೆ ತನ್ನಯ ಮನದಿ ನೆಲಸಿಹ
ಸುರತ ಸುಖದನುಭವವ ಸವಿಪಳೊ |
ತರುಣಿಯರಿಗೆ ವಿನೋದ ವೀಬಗೆ ಯಗಲೆ ಪತಿ ಯುವರಂ ||

ಅನುವಾದ: ಬಗೆ ಬಗೆ ವಿನೋದವಿರೆ ಹಗಲಿನೊ-|
ಳಗಲಿಕೆಯ ನೋವಂತಿರದು ಸಾಂ |
ಬಗೆಪೆ ನಿರುಳಲಿ ನಿನ್ನ ಸಖಿಗಿವು ಸಿಗವೆ ಬಲು ನೋವು ||
ಸೊಗಯಿ ಸಲ ಸಾ ಕೆನ್ನ ಸಂದೇ-|
ಶಗಳ ಲವನಿಯೊ ಳೊರಗಿ ನಿದ್ದೆಯ-|
ನುಗಿದ ಸತಿಯಂ ಗೃಹಗವಾಕ್ಷದಿ ನೋಡು ನಡುವಿರುಳೋಳ್ ||

ಅನುವಾದ: ವಿರಹಶಯನ ದೊಳೊಂದೆ ಪಕ್ಕದೊ-|
ಳೊರಗಿ, ಮನ ದತಿದುಃಖದಲಿ ಬಲು-|
ಸೊರಗಿ, ಕಳೆಯೊಂದುಳಿದ ಮೂಡಣದೆಸೆಯ ಸಸಿಯೊಲಿಹ ||
ಬೆರೆತು ನನ್ನೊಡ ನಿಷ್ಟರತಿಗಳ-|
ಲಿರುಳ ನಾವುದ ಚಣದಿ ಕಳೆದಳೊ |
ವಿರಹದಿಂ ಬೆಳೆ ದಡನೆ ಬಿಸಿಗಂಬನಿಯೊ ಳದ್ದುವಳಂ ||

ಶ್ಲೋಕ: ಪಾದಾನಿಂದೋ ‡ ರಮೃತಶಿಶಿರಾನ್ ‡ ಜಾಲಮಾರ್ಗ ಪ್ರವಿಷ್ಟಾನ್ ।
॥೨೯॥ ಪೂರ್ವ ಪ್ರೀತ್ಯಾ ‡ ಗತಮಭಿಮುಖಂ ‡ ಸನ್ನಿವೃತ್ತಂ ತ ಥೈವ ॥
ಖೇದಾತ್ ಚಕ್ಷುಃ‡ಸಲಿಲಗುರುಭಿಃ ‡ ಪಕ್ಷ್ಮಭಿಃ ಛಾದಯಂತೀಂ ।
ಸಾಭ್ರೇಽಹ್ನೀವ ‡ ಸ್ಥಲಕಮಲಿನೀಂ‡ ನ ಪ್ರಬುದ್ಧಾಂ ನ ಸುಪ್ತಾಂ॥

ಶ್ಲೋಕ: ನಿಃಶ್ವಾಸೇನಾ- ‡ ಧರಕಿಸಲಯ- ‡ ಕ್ಲೇಶಿನಾ ವಿಕ್ಷಿಪಂತೀಂ ।
॥೩೦॥ ಶುದ್ಧಸ್ನಾನಾತ್ ‡ ಪರುಷ ಮಲಕಂ ‡ ನೂನ ಮಾಗಂಡಲಂಬಂ ॥
ಮತ್ಸಂಭೋಗಃ‡ ಕಥ ಮುಪನಮೇತ್‡ಸ್ವಪ್ನಜೋಽ ಪೀತಿನಿದ್ರಾಂ।
ಆಕಾಂಕ್ಷಂತೀ ‡ ನಯನ ಸಲಿಲೋ–‡ತ್ಪೀಡರುದ್ಧಾವಕಾಶಾಂ ॥

ಶ್ಲೋಕ: ಆದ್ಯೇ ಬದ್ಧಾ ವಿರಹ ದಿವಸೇ ‡ ಯಾ ಶಿಖಾ ದಾಮ ಹಿತ್ವಾ ।
॥೩೧॥ ಶಾಪಸ್ಯಾಂತೇ ‡ ವಿಗಳಿತ ಶುಚಾ ‡ ತಾಂ ಮಯೋದ್ವೇಷ್ಟನಿಯಾಂ
ಸ್ಪರ್ಶ ಕ್ಲಿಷ್ಟಾ- ‡ ಮಯಮಿತನಖೇ ನಾಸಕೃತ್ ಸಾರಯಂತೀಂ ।
ಗಂಡಾಭೋಗಾತ್ ‡ ಕಠಿಣವಿಷಮಾ ‡ ಮೇಕವೇಣೀಂ ಕರೇಣ ॥

ಶ್ಲೋಕ. ಸಾ ಸನ್ಯಸ್ತಾ–‡ ಭರಣ ಮಬಲಾ- ‡ ಮಂಡನಂ ಧಾರಯಂತೀ ।
॥೩೨॥ ಶಯ್ಯೋತ್ಸಂಗೇ ‡ ನಿಹಿತ ಮಸಕೃತ್‡ ದುಃಖದುಃಖೇನ ಗಾತ್ರಂ ॥
ತ್ವಾಮಪ್ಯಸ್ರಂ ‡ ನವಜಲಮಯಂ ‡ ಮೋಚಯಿಷ್ಯತ್ಯ ವಶ್ಯಂ ।
ಪ್ರಾಯಃ ಸರ್ವೋ‡ ಭವತಿಕರುಣಾ-‡ವೃತ್ತಿ ರಾದ್ರಾಂತರರಾತ್ಮಾ॥.

ಅನುವಾದ; ಇಂದು ಕಳೆಗಳು ಸೊದೆಯ ತಂಪನು ।
ಪೊಂದಿ ಬೆಳಕಿಂಡಿಗಳ ಲೊಳಬರೆ ।
ಹಿಂದ ಣೊಲವಿಂ ದದಕೆ ಮುನ್ನಡ ದಂತೆ ಹಿಂದಿರುಗಿ ॥
ಬೆಂದು ಕಂಬನಿ ಹೊರೆಯ ರೆಪ್ಪೆಗ-।
ಳಿಂದ ಕಂಗಳ ಮುಚ್ಚಿ ದುರ್ದಿನ-।
ದಂದು ಮುಗುಳದರಳಿದ ನೆಲದಾವರೆಯ ಹೋಲುವಳಂ ॥

ಅನುವಾದ: ಎಣ್ಣೆಯಿಡದೆಯೆ ಮೀಯೆ ಬಿರುಸಹ ।
ಕೆನ್ನವರೆ ಜೋಲ್ದುರುಳ ತುಟಿ ಚಿಗು-।
ರನ್ನು ಕಂದಿಪ ನೀಳ್ದ ಬಿಸಿಯುಸಿರಿಂದ ದೂಡುವಳಂ ॥
ನನ್ನೊಡನೆ ಕನಸಲ್ಲಿಯುಂ ರತಿ-।
ಯನ್ನು ಪಡೆಯುವು ದೆಂತು ? ತನಗೆನೆ
ಕಣ್ಣ ನೀರ್ಬೇ ನೆಯಲಿ ತಡೆದಿಹ ನಿದ್ದೆಗೆಳಸುವಳಂ ॥

ಅನುವಾದ: ಮೊದಲಿನಗಲಿಕೆ ದಿನದಿ ಪೂಸರ-।
ಪೊದರಿ ಬಿಗಿಗಟ್ಟಿರುವ ಸಿಗೆ ಯಾ-।
ವುದನು ಶಾಪವು ಮುಗಿಯಲಾಂ ವೆಥೆಯಳಿದು ಬಿಡಿಸುವೆನೋ॥
ಮೆದುವುಗಿದ ಸಮನಿರದ ಮೋಣ್ ಮು-।
ಟ್ಟಿದೊಡೆ ನೋವ್ವುಡು ವೊಂದೆ ಜಡೆಗೊಂ-।
ಡದನೆ ಕದಪಿಂ ದುಗುರು ಗೈಲೊಡನೊಡನೆ ಸರಿಸುವಳಂ ॥

ಅನುವಾದ: ಒಡವೆಗಳ ನುಳಿ ದಮಿತ ದುಃಖದ ।
ಲೊಡನೊಡನೆ ಹಾಸಿಗೆ ಯೊ ಳೊರಗಿಡು-।
ವೊಡಲ ನೊಂದಿರೆ ಬಲು ಸೊರಗಿದಾ ಸತಿಯು ನಿನ್ನನ್ನುಂ ॥
ಬಿಡಪೆ ಹೊಸಮಳೆ ಹನಿಯ ಕಣ್ಣೀ-।
ರಿಡಿಸುವಳು ನಿಜ ಕರಗು ವೆದೆಯುಂ ।
ಪಡೆದರೆಲ್ಲರು ಕರಣೆಯಿಂ ವರ್ತಿಪರು ಬಹುವಾಗಿ ॥

ಶ್ಲೋಕ ಜಾನೇ ಸಖ್ಯಾಃ‡ ತವ ಮಯಿ ಮನಃ‡ ಸಂಭೃತ ಸ್ನೇಹ ಮಸ್ಮಾತ್।
॥೩೩॥ ಇತ್ಥಂ ಭೂತಾಂ ‡ ಪ್ರಥಮ ವಿರಹೇ ‡ ತಾ ಮಹಂ ತರ್ಕಯಾಮಿ॥
ವಾಚಾಳಂ ಮಾಂ ‡ ನ ಖಲ. ಸುಭಗಂ ‡ ಮನ್ಯಮಾನಃ ಕರೋತಿ।
ಪ್ರತ್ಯಕ್ಷಂ ತೇ ‡ ನಿಖಿಲ ಮಚಿರಾತ್‡ ಭ್ರಾತ! ರುಕ್ತಂಮಯಾಯತ್॥

ಶ್ಲೋಕ ರುದ್ಧಾಪಾಂಗ- ‡ ಪ್ರಸರ ಮಲಕೈ- ‡ ರಂಜನ ಸ್ನೇಹ ಶೂನ್ಯಂ ।
॥೩೪॥ ಪ್ರತ್ಯಾದೇಶಾ- ‡ ದಪಿ ಚ ಮಧುನಃ ‡ ವಿಸ್ಮೃತಭ್ರೂವಿಲಾಸಂ॥
ತ್ವಯ್ಯಾಸನ್ನೇ ‡ ನಯನ ಮುಪರಿ.‡ಸ್ಯಂದಿ ಶಂಕೇ ಮೃಗಾಕ್ಷ್ಯಾಃ।
ಮೀನಕ್ಷೋಭಾತ್‡ಚಲ ಕುವಲಯ- ‡ ಶ್ರೀತುಲಾ ಮೇಷ್ಯತೀತಿ॥

ಶ್ಲೋಕ ವಾಮಶ್ಚಾಸ್ಯಾಃ‡ ಕರರುಹಪದೈಃ‡ ಮುಚ್ಯಮಾನೋ ಮದೀಯೈಃ।
॥೩೫॥ ಮುಕ್ತಾಜಾಲಂ ‡ ಚಿರಪರಿಚಿತಂ ತ್ಯಾಜಿತೋ ದೈವಗತ್ಯಾ ॥
ಸಂಭೋಗಾಂತೇ ‡ ಮಮ ಸಮುಚಿತೋ ‡ ಹಸ್ತ ಸಂವಾಹನಾನಾಂ।
ಯಾಸ್ಯತ್ಯೂರುಃ ‡ ಸರಸಕದಳೀ ‡ ಸ್ತಂಭಗೌರಶ್ಚಲತ್ವಂ ॥

ಶ್ಲೋಕ ತಸ್ಮಿನ್ಕಾಲೇ ಜಲದ! ಯದಿ ಸಾ‡ಲಬ್ಧನಿದ್ರಾ ಸುಖಾ ಸ್ಯಾತ್ ।
॥೩೬॥ ಅನ್ವಾಸ್ಯೈನಾಂ ‡ ಸ್ತನಿತ ಸಮುಖೋ‡ ಯಾಮಮಾತ್ರಂ ಸಹಸ್ವ॥
ಮಾ ಭೂದಸ್ಯಾಃ‡ಪ್ರಣಯಿನಿ ಮಯಿ ಸ್ವಪ್ನಲಬ್ಧೇ ಕಥಂಚಿತ್।
ಸದ್ಯಃ ಕಂಠ- ‡ ಚ್ಯುತ ಭುಜಲತಾ- ‡ ಗ್ರಂಥಿ ಗಾಢೋಪಗೂಢಂ ॥

ಅನುವಾದ; ಬಲ್ಲೆ ನಿನ್ನಾ ಗೆಳತಿ ಗೆನ್ನೊಳ-।
ಗುಳ್ಳ ನೇಹದ ತುಂಬು ಮನವನು; ।
ನಲ್ಲೆ ಗೀಪರಿ ಯೆಣಿಪೆ ನದರಿಂ ಮೊದಲ ವಿರಹದಲಿ ॥
ಸಲ್ಲವಿಹ ಚಲುವರಿವು ಗಳಹುವ ।
ಸೊಲ್ಲ ತರದೈ ನನಗೆ ನಾ ಪೇ-।
ಳ್ದಿಲ್ಲವನು ಕಣ್ಣಾರೆ ಬೇಗನೆ ತಮ್ಮ ! ನೀಂ ಕಾಂಬೈ॥

ಅನುವಾದ: ಕುಡಿಯೆ ನೋಟಕೆ ಮುಂಗುರಳಿನಿಂ ।
ತಡೆವಡೆದ. ಕಪ್ಪಿಡದ, ಮದ್ಯವ ।
ಕುಡಿಯಲೊಲ್ಲದ, ಹುಬ್ಬ ಕುಣಿ ಮರೆ ತೆರಳಿ ಗಣ್ಣಸಳ ॥
ಎಡದ ಕಣ್ ಮೇಲದುರೆ ನೀ ನವ-।
ಳಿಡೆಗೆ ಸರಿಯಲು ಚಲಿಪ ಮೀನಲು-।
ಗಿಡಲು ಕನ್ನೈದಿಲೆಯು ಕಾಂತಿಯು ನದರ ಲೂಹಿಪೆನು ॥

ಅನುವಾದ; ಎನ್ನ ಗುರ ಗುರುತುಗಳ ತೊರೆದಿಹ,-।
ಮುನ್ನಿನಿಂದಿಹ ಮುತ್ತನಡುಸರ-।
ವನ್ನು ದುರ್ದೈವದಲಿ ತೊರೆದಿಹ, ಸುರತದಂತದಲಿ ॥
ನನ್ನ ಕೈಯೊತ್ತುಗಳಿ ಗುಚಿತದ ।
ಹಣ್ಣು ಬಾಳೆಯು ಕಂಭದಂತಾ-।
ಬಣ್ಣ ಗೌರದಲೆಸೆವ ಸತಿ ಯೆಡತೊಡೆಯು ಕಂಪಿಪುದು ॥

ಅನುವಾದ; ಜಲ ಧರನೆ ! ನೀಂ ಕಾಂಬ ಸಮಯದಿ ।
ಲಲನೆ ನಿದ್ರೆಯ ಸುಖದೊಳಿರ್ದೊಡೆ ।
ಮೊಳಗದೆಯೆ ಸತಿಯೋಳ್ವ ಜಾಮದವರೆಗೆ ಸುಮ್ಮನಿರೈ॥
ಎಳೆಯು ಳಿಂತೋ । ಕನಸಿನಲಿ ಪಡೆ-।
ದೊಲವಿ ನೆನ್ನ ತಬ್ಬಿ ಬಿಗಿದಿರೆ ।
ಗಳದೊಳಹ ಕೈಬಳ್ಳಿ ಗಂಟದು । ಕಳಚದಿರಲೊಡನೆ ॥

ಶ್ಲೋಕ ತಾ ಮುತ್ಥಾಪ್ಯ‡ಸ್ವಜಲಕಣಿಕಾ-‡ಶೀತಲೇ ನಾನಿಲೇನ ।
॥೩೭॥ ಪ್ರತ್ಯಾಶ್ವಸ್ತಾಂ ‡ ಸಮ । ಮಭಿನವೈಃ ‡ ಜಾಲಕೈಃಮಾಲತೀನಾಂ॥
ವಿದ್ಯುದ್ಗರ್ಭಃ ‡ ಸ್ತಿಮಿತನಯನಾಂ ‡ ತ್ವತ್ಸನಾಥೇ ಗವಾಕ್ಷೇ ।
ವಕ್ತುಂ ಧೀರಃ ಸ್ತನಿತವಚನೈಃ‡ಮಾನಿನೀಂ ಪ್ರಕ್ರಮೇಥಾಃ ॥

ಶ್ಲೋಕ ಭರ್ತುಃ ಮಿತ್ರಂ‡ಪ್ರಿಯ ಮವಿಧವೇ‡ ವಿದ್ಧಿ ಮಾ ಮಂಬುವಾಹಂ।
॥೩೮॥ ತತ್ಸಂದೇಶೈಃ ‡ ಹೃದಯನಿಹತೈ- ‡ ರಾಗತಂ ತ್ವತ್ಸಮೀಪಂ ॥
ಯೋ ಬೃಂದಾನಿ‡ತ್ವರಯತಿ ಪಥಿ‡ಶ್ರಾಮ್ಯತಾಂ ಪ್ರೋಷಿತಾನಾಂ ।
ಮಂದ್ರ ಸ್ನಿಗ್ಧೈಃ‡ಧ್ವನಿ ಭಿ ರಬಲಾ–‡ವೇಣಿ-ಮೋಕ್ಷೋತ್ಸುಕಾನಿ॥

ಶ್ಲೋಕ ಇತ್ಯಾಖ್ಯಾತೇ ‡ ಪವನತನಯಂ ‡ ಮೈಥಿಲೀವೋನ್ಮುಖೀ ಸಾ।
॥೩೯॥ ತ್ವಾ ಮುತ್ಕಂಠೋ-‡ಚ್ಛ್ವಸಿತ ಹೃದಯಾ‡ವೀಕ್ಷ್ಯ ಸಂಭಾವ್ಯಚೈವಂ।
ಶ್ರೋಷ್ಯತ್ಯಸ್ಮಾತ್‡ಪರಮವಹಿತಾ‡ಸೌಮ್ಯ! ಸೀಮಂ ತಿನೀನಾಂ।
ಕಾಂತೋದಂತಃ ‡ ಸುಹೃದುಪನತಃ ‡ ಸಂಗಮಾತ್ ಕಿಂಚಿದೂನಃ॥

ಶ್ಲೋಕ ತಾಮಾಯುಷ್ಮನ್‡ಮಮ ಚ ವಚನಾ‡ದಾತ್ಮನಶ್ಚೋಪಕರ್ತುಂ।
॥೪೦॥ ಬ್ರೂಯಾ ಏವಂ‡ತವ ಸಹಚರೋ ರಾಮಗಿರ್ಯಾಶ್ರಮಸ್ಥಃ॥
ಅವ್ಯಾಪನ್ನಃ‡ ಕುಶಲ ಮಬಲೇ!‡ ಪೃಚ್ಛತಿ ತ್ವಾಂ ವಿಯುಕ್ತಃ।
ಪೂರ್ವಾಭಾಷ್ಯಂ ‡ ಸುಲಭವಿಪದಾಂ ‡ ಪ್ರಾಣಿನಾ ಮೇತ ದೇವ॥

ಅನುವಾದ; ತನ್ನ ತುಂತುರ ತಂಪಿ ನೆಲರಿಂ ।
ದೆನ್ನವಳ ನೆಚ್ಚರೆಸಿ ಮ ತ್ತಿತಿಸಿ-।
ರನ್ನು ಹೊಸ ಹೊಸ ಜಾಜಿ ಮೊಗ್ಗೆಗಳೊಡನೆ ತಾ ಗಳಿಸಿ ॥
ನಿನ್ನ ಹೊತ್ತ ಗವಾಕ್ಷದಲಿ ನಿಡು-।
ಗಣ್ಣ ಮಾನಿನಿ ಗೊಡಲ ಮಿಂಚಿನ ।
ಮನ್ನೆಯನೆ ! ನೀಂ ಪೇಳತೊಡಗೈ ಮೊಳಗಿನುಕ್ತಿಯಲಿ ॥

ಅನುವಾದ; ಮಂಗಳೆಯೆ ! ನಿನ್ನೊಡೆಯ ಕಳುಹಿದ ।
ಸಂಗತಿಯ ಮನಕಿಟ್ಟು ನಿನ್ನೆಡೆ ।
ತಂಗಿದಾಂ ನಿನ್ನವಗೆ ಹಿತನಹ ಗೆಳೆಯ ನೆಂದರಿಯೌ ॥
ಸಂಗವಿರದತಿನವೆವ ದಾರಿಗ-।
ರಂಗನೆಯ ಜಡೆ ಬಿಡಿಸ ಲೆಳಸೆ ಜ-।
ವಂಗೊಳಿಪೆನಾ ಸವರ ಗುಂಪನು ಮೊಳಗಿ ನಿಂಪಿನಲಿ ॥

ಅನುವಾದ; ಇಂ ತೊರೆಯೆ ಜಾಕಿಯು ಹನುಮನ ।
ನಂತೆ ಸತಿ ಮೊಗಮೆತ್ತಿ ಕೌತುಕ-।
ವಂ ತಳೆದು ಮನವುಬ್ಬಿ ನಿನ್ನಂ ನೋಡಿ ಗೌರವಿಸಿ ॥
ಸಂತ ! ಮುಂದೊರೆವುದ ನಾಲಿಪಳು ಕವಿ-।
ಯಂ ತೆರೆದು ಹೆಂಗಳಿಗೆ ನಿಜ ಹಿತ-।
ಚಿಂತಕನು ಪತಿವಾರ್ತೆ ತರೆ ಸಂಗಕದು ತುಸು ಹಿಂದು ॥

ಅನುವಾದ: ಎನ್ನಮಾತಿಂ ದುಪಕರಿಸೆ ಮೇಣ್ ।
ನಿನ್ನ ನುಡಿಯಿಂದಾಕೆ ಗಿಂತೊರೆ ।
ನಿನ್ನ ಜೊತೆಯುವ ರಾಮಗಿರಿ ಯಾಶ್ರಮದಿ ಜೀವಿಸಿಹಂ ॥
ನಿನ್ನ ಗಲುತವ ! ಕೇಳ್ವ ಕುಶಲವ ।
ಮುನ್ನೊರೆವ ನುಡಿ ಯಿದುವೆ ಜಣಕಸು-।
ವನ್ನು ನೀಗುವ ಜೀವಿಗಳ ಗಣ ಕೆನುತ ಚಿರಜೀವಿ ॥

ಶ್ಲೋಕ ಅಂಗೇನಾಂಗಂ ತನು ಚ ತನುನಾ ‡ ಗಾಢತಪ್ತೇನ ತಪ್ತಂ।
॥೪೯॥ ಸಾಸ್ರೇಣಾ ಶ್ರು-‡ ದ್ರುತ ಮವಿರತೋ- ‡ ತ್ಕಂಠ ಮುತ್ಕಂಠಿತೇನ॥
ಉಷ್ಣೋಚ್ಛ್ವಾಸಂ‡ಸಮಧಿಕತರೋ ‡ಚ್ಛ್ವಾಸಿನಾ ದೂರವರ್ತೀ।
ಸಂಕಲ್ಪೈಸ್ತೈಃ ‡ ವಿಶತಿ ವಿಧಿನಾ ‡ ವೈರಿಣಾ ರುದ್ಧಮಾರ್ಗಃ ॥

ಶ್ಲೋಕ ಶಬ್ದಾಖ್ಯೇಯಂ‡ ಯದಪಿ ಕಿಲ ತೇ‡ ಯಃ ಸಖೀನಾಂ ಪುರಸ್ತಾತ್।
॥೫೦॥ ಕರ್ಣೇ ಲೋಲಃ‡ಕಥಯಿತು ಮಭೂದ್‡ದಾನನಸ್ಪರ್ಶಲೋಭಾತ್।
ಸೋಽತಿಕ್ರಾಂತಃ‡ಶ್ರವಣ ವಿಷಯಂ‡ಲೋಚನಾಭ್ಯಾ ಮದೃಷ್ಟಃ।
ತ್ವಾ ಮುತ್ಕಂಠಾ- ‡ ವಿರಚಿತ ಪದಂ ‡ ಮನ್ಮುಖೇನೇದ ಮಾಹ॥

ಶ್ಲೋಕ ಶ್ಯಾಮಾಸ್ವಂಗಂ ‡ ಚಕಿತಹರಿಣೀ-ಪ್ರೇಕ್ಷಣೇ ದೃಷ್ಟಿಪಾತಂ ।
॥೫೧॥ ವಕ್ತ್ರ ಚ್ಛಾಯಾಂ‡ಶಶಿನಿ ಶಿಖಿನಾಂ ಕರ್ಣಭಾರೇಷು ಕೇಶಾನ್।
ಉತ್ಪಶ್ಯಾಮಿ‡ಪ್ರತನುಷು ನದೀ–‡ವೀಚಿಷು ಭ್ರೂವಿಲಾಸಾನ್ ।
ಹನ್ತೈಕಸ್ಮಿನ್‡ ಕ್ವಚಿದಪಿ ಚ ನ ತೇ‡ ಚಂಡಿ! ಸಾದೃಶ್ಯ ಮಸ್ತಿ॥

ಶ್ಲೋಕ ತ್ವಾಮಾಲಿಖ್ಯ‡ಪ್ರಣಯ ಕುಪಿತಾಂ ಧಾತುರಾಗೈಃ ಶಿಲಾಯಾಂ।
॥೫೨॥ ಆತ್ಮಾನಂ ತೇ ‡ ಚರಣಪತಿತಂ ಯಾವ ದಿಚ್ಛಾಮಿ ಕರ್ತುಂ ॥
ಅಸ್ರೈ ಸ್ತಾವತ್‡ಮುಹು ರುಪಚಿತೈಃ‡ ದೃಷ್ಟಿರಾಲುಪ್ಯತೇ ಮೇ
ಕ್ರೂರ ಸ್ತಸ್ಮಿ ‡ ನ್ನಪಿ ನ ಸಹತೇ ‡ ಸಂಗಮಂ ನೌ ಕೃತಾಂತಃ॥

ಅನುವಾದ; ವೈರಿಯುಹ ವಿಧಿ ಹಾದಿ ತಡೆದಿಡೆ, ।
ದೂರಕಿಹ ನಿನ್ನೊಡೆಯ ನೊಡಲಿಂ ।
ಸೇರಿಸುವ ನಿನ್ನೊಡಲ ನಾ ಸಂಕಲ್ಪಗಳ ಲಿಂತು ॥

ನೀರೆ ! ಸೊರಗಿಂ ದತಿ ಸೊರಗ, ಕ–
ಣ್ಣೀರಿಂ ಕಂಬನಿಯು, ತಾಪವ
ನೇರಿದದರಿಂ ನೋಯೆ ನೋವಿಂ, ದುಸಿರ ನಿಟ್ಟುಸಿರಿಂ ॥

ಅನುವಾದ: ಯಾವ ನಿನ್ನವ ಸಖಿಯುರೆದುರೊಳ ।
ಗಾವ ವಿಷಯುವ ನುಡಿವು ದಾದರು ।
ತಾ ವಚಿಪ ನದ ಕಿವಿಗೆಳಸಿ ಮೊಗಮುಟ್ಟುವಾಸೆಯುಲಿ ॥

ಆವಿಭುವು ಕಿವಿಪೋಗದೆಡೆಯುಲಿ ।
ಜೀವಿಪನು ಕಂಗಳಿಗೆ ಕಾಣನು ।
ನೋವ ನುಡಿಗಳ ನಿಟ್ಟು ನಿನಗಿದ ನೊರೆದ ನೆನ್ನೊಗದಿ॥

ಅನುವಾದ: ಶ್ಯಾಮಲತೆಗಳ ಲೊಡಲ, ದಿಟ್ಟಿಯು ।
ನೇಮು ವಳ್ಳಿದೆ ಹರಿಣಿ ಯಕ್ಷಿಯು– ।
ಲಾ, ಮೊಗ ಮೆರಗು ಸಸಿಯೊಳಗೆ, ಶಿಖಿಪಿಂಛೆಯುಲಿ ಕೇಶಂ, ॥

ಸೀಮಿತದ ತೊರೆಕಿರಿಯುಲೆಗಳಲಿ, ।
ಭಾಮೆ ಹುಬ್ಬಾಟಗಳ ತೊಹಿಪೆ ।
ಸಾಮರಸ್ಯವ ಚಂಡಿ ! ನಿನಗಿರದೊಂದೆಡೆಯೊಳೆಲ್ಲುಂ ॥

ಅನುವಾದ: ಗಿರಿಯು ಧಾತುಗಳಿಂದ ಶಿಲೆಯೊಳು ।
ಬರೆದು ನಿನ್ನಂ ಪ್ರಣಯಕುಪಿತೆಯು ।
ಚರಣದೊಳು ತಾಂ ಕೆಡೆಯುಲೆಷ್ಟರೊಳಿರದೆ ಬಯುಸಿದೆನೊ ॥

ಮರಮರಳಿ ತುಂಬುಗುವ ಕಂಬನಿ ।
ಹರಿವು ದಷ್ಟರೊ ಳೆನ್ನ ದಿಟ್ಟಿಯು ।
ಕರುಣಿಸದ ಯಮ ನಮ್ಮ ಕೂಟವ ಫಡರೊಳುಂ ಸೈಸಂ ॥

ಶ್ಲೋಕ ಮಾಮಾಕಾಶ- ‡ ಪ್ರಣಿಹಿತಭುಜ ‡ ನಿರ್ದಯಾ ಶ್ಲೇಷ ಹೇತೋಃ ।
॥೪೫॥ ಲಬ್ಧಾಯಾ ಸ್ತೇ ‡ ಕಥಮಪಿ ಮಯಾ ‡ ಸ್ವಪ್ನಸಂದರ್ಶನೇಷು॥
ಪಶ್ಯಂತೀನಾಂ ‡ ನ ಖಲು ಬಹುಶೋ ‡ ನ ಸ್ಥ ಲೀದೇವತಾನಾಂ ।
ಮುಕ್ತಾಸ್ಥೂಲಾಃ ‡ ತರುಕಿಸಲಯೇ- ‡ ಷ್ವಶ್ರುಲೇಶಾಃ ಪತಂತಿ ॥

ಶ್ಲೋಕ ಭಿತ್ವಾ ಸದ್ಯಃ ‡ ಕಿಸಲಯಪುಟಾ ‡ ದೇವದಾರುದ್ರುಮಾಣಾಂ ।
॥೪೬॥ ಏತತ್ ಕ್ಷೀರ- ‡ ಸ್ರುತಿಸುರಭಯೋ ‡ ದಕ್ಷಿಣೇನ ಪ್ರವೃತ್ತಾಃ ॥
ಆಲಿಂಗ್ಯಂತೇ ‡ ಗುಣವತಿ ! ಮಯಾ ‡ ತೇ ತುಷಾರಾದ್ರಿವಾತಾಃ ।
ಪೂರ್ವಂ ಸ್ಪೃಷ್ಟಂ ‡ ಯದಿ ಕಿಲ ಭವೇ- ‡ ದಂಗ ಮೇಭಿ ಸ್ತವೇತಿ ॥

ಶ್ಲೋಕ ಧಾರಾಸಿಕ್ತ- ‡ ಸ್ಥಲಸುರಭಿಣಃ ‡ ತ್ವನ್ಮುಖಸ್ಯಾಸ್ಯ ಬಾಲೇ ! ।
॥೪೭॥ ದೂರೀಭೂತಂ ‡ ಪ್ರತನು ಮಪಿ ಮಾಂ ‡ ಪಂಚಬಾಣಃ ಕ್ಷಿಣೋತಿ ॥
ಘರ್ಮಾಂತೇ ಽಸ್ಮಿನ್ ‡ ವದ ಬತ ಕಥಂ ? ‡ ವಾಸರಾಣಿ ವ್ರಜೇಯುಃ ।
ದಿಕ್ಸಂಸಕ್ತ- ‡ ಪ್ರವಿರಳ ಘನಾ- ‡ ವ್ಯಕ್ತಸೂರ್ಯಾತಪಾನಿ ॥

ಶ್ಲೋಕ ಸಂಕ್ಷಿಪ್ಯೇತ ಕ್ಷಣ ಇವ ಮಯಾ ‡ ದೀರ್ಘಯಾಮಾ ತ್ರಿಯಾಮಾ !
॥೪೮॥ ಸರ್ವಾವಸ್ಥಾ- ‡ ಸ್ವಹರಪಿ ಕಥಂ ‡ ಮಂದ ಮಂದಾ ತಪಂ ಸ್ಯಾತ್॥
ಇತ್ಥಂ ಚೇತಃ ‡ ಚಟುಲನಯನೇ ! ‡ ದುರ್ಲಭಪ್ರಾರ್ಥನಂ ಮೇ ।
ಗಾಢೋಷ್ಣಾಭಿಃ ‡ ಕೃತ ಮಶರಣಂ ‡ ತ್ವದಿಯೋಗವ್ಯಥಾಭಿಃ ॥

ಅನುವಾದ- ಎನ್ನ ಕನಸಿನೊಳೆಂತೊ ದೊರಕಿದ ।
ನಿನ್ನ ನತಿ ಬಿಗಿಯಪ್ಪ ಲೋಸುಗ ।
ತನ್ನ ತೋಳ್ಗಳ ಬರಿಬಯಲಿನಲಿ ಚಾಚುತಿರು ವೆನ್ನಂ ||
ಸನ್ನಿಹಿತ ದೇವತೆಗಳೀಕ್ಷಿಸಿ ।
ಕಣ್ಣನಿಂ ದುರು ಮುತ್ತ ಬಿಂದುಗ- |
ಳನ್ನು ಸುರಿಸದೆ ಬಿಡರು ಮರಗಳ ಚಿಗುರುಗಳ ಲೈಸೆ ||

ಅನುವಾದ- ದೇವದಾರುವ ಚಿಗುರುಕುಡಿಗಳ ।
ತಾವೊಡನೆ ಮುರಿ ದದರ ಪಾಲ್ದೊರೆ- |
ಯಿಾವ ಕಂಪನು ತಳೆದು ತೆಂಕಕೆ ಬೀಸುತಿಹವಾವೊ ॥
ಆವಿಧದ ಹಿಮಗಿರಿಯೆಲರುಗಳವಿ- ನೋವಿ ನಾ ಮಾಲಂಗಿ ಪೆನು
ನಿ-ನ್ನಾವೊಡಲ ನವು ಸುಗುಣೆ! ಮುನ್ನಮೆ ಸೋಂಕಿ ಬಂದವಲಾ ||

ಅನುವಾದ- ಮಳೆಯ ಧಾರೆಗಳಿಂದ ನೆನೆದಿಹ ।
ನೆಲದ ಕಂಪಿನ ನಿನ್ನ ಮೊಗಮದನು ।
ನೆಲಸೆ ದೂರದಿ ಬಲುನವದೊಡೆಯುಂ ಮೆನ್ನ ನೈಗಣೆಯಂ ॥
ಥಳಿಪ ನುಷ್ಣವು ಕಳೆಯೆ ದಿಕ್ಕಲಿ ।
ಬಲಿದ ಮೋಡಗಳಿಂದ ರವಿಕಳೆ- ।
ಯುಳಿವ ದಿನಗಳ ಬಾಲೆ ! ಪೇಳೌ ಕಳೆವೆನೆಂತಯ್ಯೋ! ||

ಅನುವಾದ- ಹಿಗ್ಗುಗೊಂಡಿಹ ನಿಶೆಯ ಚಣದೊಲು |
ಕುಗ್ಗಿಸುವ ಬಗೆಯೆಂತು ? ಹಗಲುಂ |
ತಗ್ಗಿದೆಳೆವಿಸಿಲೊಂದು ವುದದೆಂ ತೆಲ್ಲವಸ್ಥೆಯೊಳು ? ||
ಸಗ್ಗದೀ ಬಗೆ ಬಯಾಕೆಯುನು ಮನ- ।
ಕುಗ್ಗು ವತಿಬೇಗೆಯುಲಿ ನಿನ್ನಯು ।
ಮುಗ್ಗು ಲಗಲಿದ ವೆಥೆಯು ದಿಕ್ಕೆಡಿಸಿತ್ತು ಚಪಲಾಕ್ಷಿ !

ಶ್ಲೋಕ ನನ್ವಾತ್ಮಾನಂ ಬಹುವಿಗಣಯ ‡ ನ್ನಾತ್ಮನೈ ವಾವಲಂಬೇ ।
॥೪೯॥ ತತ್ಕಲ್ಯಾಣಿ! ‡ ತ್ವಮಪಿ ನಿತರಾಂ ‡ ಮಾಽಗಮಃ ಕಾತರತ್ವಂ ॥
ಕಸ್ಯಾತ್ಯಂತಂ ‡ ಸುಖಮುಪನತಂ ‡ ದುಃಖ ಮೇಕಾಂತತೋವಾ ।
ನೀಚ್ಚೈಃ ವಾಸ್ಯ ‡ ತ್ಯುಪರಿ ಚ ದಶಾ ‡ ಚಕ್ರನೇಮಿಕ್ರಮೇಣ ॥

ಶ್ಲೋಕ ಶಾಪಾಂತೋ ಮೇ ‡ ಭುಜಗಶಯನಾ– ‡ ದುತ್ಥಿತೇ ಶಾರ್ಙ್ಗಪಾಣೌ ।
॥೫೦॥ ಶೇಷಾನ್ ಮಾಸಾನ್ ‡ ಗಮಯಚತುರೋ ‡ ಲೋಚನೇಮೀಲಯಿತ್ವಾ ॥
ಪಶ್ಚಾದಾವಾಂ ‡ ವಿರಹಗುಣಿತಂ ‡ ತಂ ತಮಾತ್ಮಾಭಿಲಾಷಂ ।
ನಿರ್ವೇಕ್ಷ್ಯಾವಃ ಪರಿಣತಶರತ್– ‡ ಚಂದ್ರಿಕಾಸು ಕ್ಷಪಾಸು ॥

ಶ್ಲೋಕ ಭೂಯ ಶ್ಚಾಹಂ ‡ ತ್ವಮಪಿ ಶಯನೇ ‡ ಕಂಠಲಗ್ನಾ ಪುರಾ ಮೇ ।
॥೫೧॥ ನಿದ್ರಾಂ ಗತ್ವಾ ‡ ಕಿಮಪೀ ರುದತೀ ‡ ಸಸ್ವರಂ ವಿಪ್ರಬುದ್ಧಾ ॥
ಸಾನ್ತರ್ಹಾಸಂ ‡ ಕಥಿತ ಮಸಕೃತ್ ‡ ಪೃಚ್ಛ ತಚ್ಚ ತ್ವಯಾ ಮೇ ।
ದೃಷ್ಟಃ ಸ್ವಪ್ನೇ ಕಿತವ ! ರಮಯನ್ ‡ ಕಾಮಪಿ ತ್ವಂ ಮಯೇತಿ ॥

ಶ್ಲೋಕ ಏತಸ್ಮಾತ್ ಮಾಂ ಕುಶಲಿನ ಮಭಿ- ‡ ಜ್ಞಾನದಾನಾತ್ ವಿದಿತ್ವಾ ।
॥೫೨॥ ಮಾ ಕೌಲೀನಾ– ‡ ದಸಿತನಯನೇ ! ‡ ಮಯ್ಯ ವಿಶ್ವಾಸಿನೀ ಭೂಃ ॥
ಸ್ನೇಹಾ ನಾಹುಃ ‡ ಕಿಮಪಿ ವಿರಹೇ ‡ ಧ್ವಂಸಿನ ಸ್ತೇ ಹ್ಯಭೋಗಾತ್ ।
ಇಷ್ಟೇ ವಸ್ತು– ‡ ನ್ಯು ಪಚಿತರಸಾಃ ‡ ಪ್ರೇಮರಾಶೀಃ ಭವಂತಿ ॥

ಅನುವಾದ- ಮುಂದಿ ನೇಳಿಗೆ ಯೇಣಿಕೆಯಲಿ ತ-
ನ್ನಿಂದಲೇ ತನ್ನ ನುಳುಹುವೆ ನದ-
ರಿಂದ ನೀನುಂ ಬೆದರ ನೆಂದಿಗು ಪೊಂದದಿರು ಸುಭಗೆ ! ॥
ಎಂದಿಗುಂ ಸುಖ ಮಾವಗಿಹುದೈ ? ।
ಪೊಂದಿಹನೆ ತಾ ದುಃಖ ಮೆಂದುಂ ? ।
ಮುಂದಿಗಿಹು ದೇರಿಳಿತ ಗತಿ ತಿರುಗಾಲಿ ಯಂಚಿನೊಲು ॥

ಅನುವಾದ- ಹಾವಹಾಸಿಂ ದೇಳೆ ಶಾರ್ಙ್ಗಯು ।
ಪೋವು ದೆನಗಿಹ ಶಾಪವಿದು ನೀ-
ನಾವರೆಗೆ ಕಣ್ಮುಚ್ಚಿ ಕಳೆ ನಾಲ್ದಿಂಗಳುಳಿದುದನು ।
ನಾವು ಬಳಿಕೆಮ್ಮಗಲಿ ನೊಳಗಾ-
ವಾವ ಸುಖಕೆಳೆಸಿದೆವೊ ಭೋಗಿ ಪೆ-
ವಾವವುಗಳನು ಶರದ ಪಣ್ಣಿದ ಜೊನ್ನನಿಶೆಗಳಲಿ ||

ಅನುವಾದ- ಮತ್ತೆ ಕೇಳೌ ಹಿಂದೆ ನನ್ನಯು
ಕತ್ತ ನಪ್ಪುತ ನೀನು ಮಾನುಂ
ಮೆತ್ತೆಯೊಳು ನಿದ್ರಿಸಲು ನೀನೆದ್ದೇಕೋ ಚೀರುತಿರೆ ॥
ಮತ್ತೆ ಮತ್ತೇಕರುಹೆನಲೊಳನ-
ಗುತ್ತ ನೀನಾವಳೊಡನೆಯೊ ರಮಿ-
ಸುತ್ತಿಹುದ ನಾ ಕಂಡೆ ಕನಸಲಿ ಧೂರ್ತ ನಹೆಯೆಂದು ||

ಅನುವಾದ- ಈ ವಿಧದ ತಿಳಿಗುರುತ ಕೊಳ್ಳುತ
ಭಾವಿಸೆನ್ನೆಯ ಕುಶಲ ಮೆನ್ನೊಳು ।
ಜೀವ ಶಂಕೆಯು ಬೇಡ ಹೇಳಿಕೆಯಿಂದ ನೀಲಾಕ್ಷಿ!॥
ಭಾವ ಬಂಧವ ನಗಲಿಕೆಯು ಹುಡಿ -
ಗೈವುದೆಂಬರದೇಕೊ ? ಭೋಗದ- ।
ಭಾವದಿಂದದು ನೇಹ ಬೆಳೆಸುವು ದೊಲವ ರಸಮೊಸರಿ ॥

ಶ್ಲೋಕ ಆಶ್ವಾಸ್ಯೈವಂ‡ಪ್ರಥಮವಿರಹೋ- ‡ ದಗ್ರಶೋಕಾಂ ಸಖೀಂ ತೇ ।
॥೫೩॥ ಶೈಲಾದಾಶು- ‡ ತ್ರಿಣಯನವೃಷೋ- ‡ ತ್ಖಾತಕೂಟಾ ನ್ನಿವೃತ್ತಃ ॥
ಸಾಭಿಜ್ಞಾನಂ ‡ ಪ್ರಹಿತಕುಶಲೈಃ ತದ್ವಚೋಭಿ ರ್ಮ ಮಾಪಿ ।
ಪ್ರಾತಃ ಕುಂದ- ‡ ಪ್ರಸವಶಿಥಿಲಂ ‡ ಜೀವಿತಂ ಧಾರಯೇಥಾಃ ॥

ಶ್ಲೋಕ ಕಚ್ಚಿತ್ ಸೌಮ್ಯ !‡ ವ್ಯವಸಿತ ಮಿದಂ‡ಬಂಧುಕೃತ್ಯಂ ತ್ವಯಾ ಮೇ।
॥೫೪॥ ಪ್ರತ್ಯಾದೇಶಾತ್ ‡ ನ ಖಲು‡ಭವತೋ ಧೀರತಾಂ ಕಲ್ಪಯಾಮಿ ॥
ವಿದ್ಯುದ್ಗರ್ಭಃ ‡ ಪ್ರದಿಶಸಿ ಜಲಂ‡ ಯಾಚಿತಃ ಚಾತಕೇಭ್ಯಃ ।
ಪ್ರತ್ಯುಕ್ತಂ ಹಿ ‡ ಪ್ರಣಯಿಷು ಸತಾ -§ ಮೀಪ್ಸಿತಾರ್ಥಕ್ರಿಯೈವ ॥

ಶ್ಲೋಕ ಏತತ್ ಕೃತ್ವಾ‡ ಪ್ರಿಯ ಮನುಚಿತಂ‡ಪ್ರಾರ್ಥನಾದಾತ್ಮನೋ ಮೇ।
॥೫೫॥ ಸೌಹಾರ್ದ್ರಾದ್ವಾ‡ವಿಧುರ ಇತಿವಾ‡ಮಯ್ಯನುಕ್ರೋಶ ಬುದ್ಧ್ಯಾ ॥
ಇಷ್ಟಾನ್ ದೇಶಾನ್ ‡ ಜಲದ ! ವಿಚರ‡ಪ್ರಾವೃಷಾ ಸಂಭೃತ ಶ್ರೀಃ ।
ಮಾಭೂದೇವಂ ಕ್ಷಣಮಪಿ ಚ ತೇ ‡ ವಿದ್ಯುತಾ ವಿಪ್ರಯೋಗಃ ॥

ಅನುವಾದ- ಮೊದಲ ವಿರಹದ ಶೋಕ ದುಬ್ಬರ- ।
ಪೊದಗೆ ಗೆಳತಿಯು ನಿಂತು ಶಮನಿಸಿ ।
ತುದಿಮುರಿಯೆ ಹರನೆತ್ತು ಗಿರಿಯುದರಿಂದ ಲೊಡತಿರುಗಿ ||
ಮುದದಿ ಹೆಗ್ಗುರುತೊಡನೆ ಸತಿ ಕಳು-
ಹಿ ದತಿಶುಭನಡಿಗಳಲಿ ದಿನದುದ- ।
ಯದೊಳು ಸಡಲಿದ ಕುಂದ ಸುಮಸಮ ದಸುವ ನೀನುಳುಹೈ॥

ಅನುವಾದ- ಬೇಡು ವೆನ್ನೀ ಬಂದು ಕೃತ್ಯವ ।
ಮಾಡೆ ನಿಶ್ಚೈಸಿದೆಯು ? ಮರು ನುಡಿ-
ಯಾಡೆ ಗಾಂಭೀರ್ಯವನು ನಿನಗೊಂದಿಪೆನಲಾ ಸೌಮ್ಯ ! ॥
ಬೇಡ ಜಾದಗೆಗಳಿಗೆ ಬಲವಂ ।
ನೀಡುತಿಹೆ ನೀಂ ಮೌನದಿಂದಲೆ ।
ಬೇಡುವರ ಮನದೆಣಿಕೆ ಸಲಿಪುದೆ ಸಂತರುತ್ತರವೈ ॥

ಅನುವಾದ- ಜಲದ ! ಗೆಳೆತನದಿಂದಲೊ, ಸತಿಯು-
ಗಲಿಹುದಕೊ, ನನ್ನೊಳಿಹ ಕರುಣೆಗೊ, ।
ತಿಳಿಯು ಲನುಚಿತ ವೆನ್ನ ಬಯಕೆಯು ಬೇಡಲದ ನೆಸಗಿ ॥
ಮಳೆಯು ಕಾಲದ ಸೊಂಪಲೆಸೆಯುತ ।
ಚಲಿಸುತಿರು ನೀ ನೆಳಸಿದೆಡೆಗಳ ।
ಲೊಲಿದ ಮಿಂಚಿನ ವಿರಹ ಚಣಕುಂ ನಿನಗೆ ಬರದಿರಲಿ ॥

ಶ್ಲೋಕ ತತ್ಸಂದೇಶಂ ‡ ಜಲಧರವರೋ ‡ ದಿವ್ಯವಾಚಾಚಚಕ್ಷೇ ।
॥೫೬॥ ಪ್ರಾಣಾನ್ ತಸ್ಯಾಃ ‡ ಜನಹಿತರವೋ ‡ ರಕ್ಷಿತುಂ ಯಕ್ಷವಧ್ವಾಃ ॥
ಪ್ರಾಪ್ಯೋದಂತಂ‡ ಪ್ರಮುದಿತಮನಾಃ‡ಸಾಽಪಿ ತಸ್ಥೌ ಸ್ವಭರ್ತುಃ ।
ಕೇಷಾಂ ನ ಸ್ಯಾ-‡ ದಭಿಮತಫಲಾ ‡ ಪ್ರಾರ್ಥನಾ ಹ್ಯುತ್ತಮೇಷು॥

ಶ್ಲೋಕ ಶ್ರುತ್ವಾ ವಾರ್ತಾಂ‡ಜಲದಕಥಿತಾಂ‡ತಾಂ ಧನೇಶೋಽಪಿ ಸದ್ಯಃ ।
॥೫೭॥ ಶಾಪಸ್ಯಾಂತಂ ‡ ಸದಯ ಹೃದಯಃ ‡ ಸನ್ನಿಧಾಯಸ್ತಕೋಪಃ ॥
ಸಂಯೋಜ್ಯೇತೌ ‡ ವಿಗಳಿತ ಶುಚೌ ‡ ದಂಪತೀ ಹೃಷ್ಟಚೇತೌ ।
ಭೋಗಾನಿಷ್ಟಾ‡ನಭಿಮತಸುಖಾನ್‡ಪ್ರಾಪಯಾಮಾಸ ಭೂಯಃ ॥

ಅನುವಾದ- ಮೆರೆವ ಜಲದನು ಯಕ್ಷ ನರಸಿಯು ।
ಹರ್ಷಣ ಪೊರೆಯುಲು ಜನತೆ ಗಿಂಪನು ।
ತರುವ ದನಿಯಿಂ ದೈವವಾಣಿಯು ಲೊರೆದ ವಾರ್ತೆಯನು ॥
ತರುಣಿಯುಂ ನಿಜಪತಿಯು ಸುದ್ದಿಯು
ಬರಲು ಮನದುಬ್ಬಿನಲಿ ಮೆರೆದಳು ।
ದೊರಕದಾರಿಗೆ ? ಗುಣಿಗಳಲಿ ಬೇಡುವಗೆ ಮನದೆಣಿಕೆ ॥

ಅನುವಾದ- ಧನದೊಡೆಯನುಂ ಜಲದ ನೊರೆದಾ ।
ಪ್ರಣಯು ವಾರ್ತೆಯ ಕೇಳ್ದೊಡನೆ ನಿಜ- ।
ಮನಕರಗೆ ಮುನಿಸಳಿಸಿ ಶಾಪದ ಕೊನೆಯು ಬಳಿತಂದು ॥
ಅಣಗಿದಳಲಿಂ ದಮಿತಹರ್ಷದ ।
ಮನದೊಳಿರುವಾ ಗಂಡಹೆಂಡಿರ- ।
ಗನುಗೊಳಿಸಿದನು ತಮಗೆ ಸುಖತಹ ಭೋಗಗಳ ಮತ್ತೆ ॥

ವರಕವಿ ಶ್ರೀ ಕಾಳಿದಾಸನ ಮೇಘಸಂದೇಶವೆಂಬ ಈ ಮಹಾಕಾವ್ಯಕ್ಕೆ ಪದ್ಯ ರೂಪದ ಕನ್ನಡಾನುವಾದವು ಮುಗಿದುದು.

—0—